
ಬೇತಾಳಗಳ ಕುಣಿತ

ಅಥವಾ

ಸಿದ್ಧಸಭೆಯ ಕಾರ್ಯಕಲಾಪಗಳು

ಬಿ.ಎಚ್. ಶ್ರೀಧರ



ತೇಜು ಪಬ್ಲಿಕೇಷನ್ಸ್

ಬೇತಾಳಗಳ ಕುಣಿತ

ಅಥವಾ

ಸಿದ್ಧಸಭೆಯ ಕಾರ್ಯಕಲಾಪಗಳು

ಬಿ.ಎಚ್. ಶ್ರೀಧರ

ತೇಜು ಪಬ್ಲಿಕೇಷನ್ಸ್
ನಂ. 1014, 24ನೇ ಮುಖ್ಯರಸ್ತೆ, 16ನೇ ಕ್ರಾಸ್,
ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು – 560 070.

BETALAGALA KUNITA / SIDDHASABHEYA KARYAKALAPAGALU

by

B.H. Shridhara
Mob : 8762150109

Published by
V. Padmavathi, on behalf of **Teju Publications**
1014, 24th Main, 16th Cross, BSK 2nd Stage
Bangalore - 560 070. Mob : 9900195626

First Edition : 2020

Pages : 88 + iv

Price : ₹ 70 ಬೆಲೆ : ರೂ. ೭೦

No. of Copies : 1100

70 GSM Maplitho – 1/8 Demy

Cover Design: **Chandrashekar**

Typeset at : **Page Designers**
Bangalore - 560 004. Ph : 41691270

Printed at : **Sathyananda Printers**
Pipeline Parallel Road, Cholura Palya,
Bangalore - 560 023.

ಸಿದ್ಧಪತ್ರ

ಕೃಷ್ಣಾವತಾರದಲ್ಲಿ ನಾನು ಜಗತ್ತಿನ ಚರಾಚರಗಳಿಗೆ ಕೊಟ್ಟ 'ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ' ಎಂಬ ಆಶ್ವಾಸನದ ಮೇರೆಗೆ ಈಗ ಮರುಳುಸಿದ್ಧಾವತಾರಿಯಾಗಿ ಕರ್ನಾಟಕದಲ್ಲಿ ಅವತರಿಸಿ ಜನಾರಣ್ಯದ ನಡುವೆ ನನ್ನ ಆಶ್ರಮವನ್ನು ಸ್ಥಾಪಿಸಿದ್ದೇನೆ. ಜನಗಣದ ಅಧಿನಾಯಕನಾದ ನಾನು 'ಸಹಸ್ರನಾಮ'ದ ಅನೇಕ ಹೆಸರುಗಳಿಂದ ಸುಪರಿಚಿತನಾಗಿದ್ದೇನೆ ನಿಮಗೆ.

ನನ್ನ ಆಶ್ರಮದಲ್ಲಿ ಯುಗಧರ್ಮಾನುಸಾರವಾಗಿ ಕಲೆ, ರಾಜಕಾರಣಗಳ ಹುಚ್ಚು ಹಿಡಿದ ಮಾನವ ಬೇತಾಳಗಳ ಚಿಕಿತ್ಸೆ ನಿತ್ಯವೂ ನಡೆಯುತ್ತದೆ. ಹಳ ಹೊಸ, ಪಾಶ್ಚಾತ್ಯ ಪೌರಸ್ತ್ಯ ವಿಚಾರ, ಆಚಾರ, ಸಮಾಚಾರಗಳ ವಿಶ್ವರೂಪದ ತಾಂಡವದ ದಿನಚರಿಯ ವರದಿಯನ್ನು ನಮ್ಮ ಕಾರ್ಯದರ್ಶಿಯವರಿಂದ ಈ ವರದಿಯ ಸಂಗ್ರಾಹಕರು ಪಡೆದು ನಿಮ್ಮ ಮುಂದಿಟ್ಟಿದ್ದಾರೆ. ದ್ವಿಪಾದ ಚತುಷ್ಪಾದಗಳಲ್ಲಿ ಸಾಮಾನ್ಯವಾಗಿ ಅಂತರ ಕಡಿಮೆಯಾದುದರ ನಿದರ್ಶನಗಳನೇಕ ಇಲ್ಲಿಯ ದಿನಚರಿಯಲ್ಲಿ ದೊರಕಬಹುದು. Man is the most dangerous vermin on the face of the Earth ಮನುಷ್ಯ ಜಂತುವು ಜಗತ್ತಿನಲ್ಲೆಲ್ಲ ಅತ್ಯಂತ ಅಪಾಯಕಾರಿಯಾದ ಹುಳು ಎಂದ ಆಂಗ್ಲ ವಿಡಂಬನಕಾರನ ಸುಂದರೋಕ್ತಿಯನ್ನು ಬಲ್ಲ ನಿಮಗೆ ಈ ಭವರೋಗಭೇಷಜನ (Mender of bad souls) ಚಿಕಿತ್ಸಾಲಯದಲ್ಲಿ ಕಾಣುವ ಮನೋರೋಗಿಗಳ ಮರುಳ್ತನಗಳ ಮಹಾಮಾಯೆಯ ವಿಶ್ಲೇಷಣದಿಂದ ನಗ್ನಸತ್ಯದ ಗೊಮ್ಮಟ–ಛೆ ಛೆ ಹಾಗಲ್ಲ – ಹಾಲಿವುಡ್ ತಾರಾಮಣಿಯ ಸಾಕ್ಷಾತ್ಕಾರವಾಗಬಹುದು. ಈ ದರ್ಶನದಿಂದ ಅರ್ಜುನನಂತೆ ನೀವು ಭಯಭ್ರಾಂತರಾದೀರಿ, ಕುರುಡರಾದೀರಿ ಎಂದು ತಿಳಿದು ನಿಮಗೆ ಈ ಮೂಲಕ ದಿವ್ಯ ಚಕ್ಷುಸ್ಸನ್ನು ಅನುಗ್ರಹಿಸಿದ್ದೇನೆ.

ಸತ್ಯ, ಸೌಂದರ್ಯ, ಸೌಜನ್ಯ, ಸದುಪಯೋಗವೆಂಬ ಚತುರ್ಮುಖಗಳಿಂದ ನನ್ನ ನಾಭಿಕಮಲದಲ್ಲಿ ಜನ್ಮಿಸಿದ ಆಧುನಿಕ ಬ್ರಹ್ಮನ ವಿಸೃಷ್ಟಿ, ವಿಲಾಸ, ವೈಜನ್ಯ, ವಿಲಕ್ಷಣೋಪಯೋಗಗಳೆಂಬ ಮಾನಸಪುತ್ರರ ವಿಜ್ಞಾನ, ಸಾಮ್ಯ, ಅಂಗಭ್ರಮೆ ಮತ್ತು ಸಿನಿಮಮತಗಳ ವಿಡಂಬನೀಯ ವಿರಾಡ್ರೂಪಗಳ ಈ ಸಂತೆಯಲ್ಲಿ ಕರ್ನಾಟಕದ ಕವಿ, ಗಮಕಿ, ವಾದಿ, ವಾಗ್ಮಿ ಪ್ರವರರನ್ನು ಗುರುತಿಸಬಲ್ಲಿರಾ? ಲೇಖಕ, ವಿಮರ್ಶಕ, ಭಾಷಣಭೈರವ, ವಿಜ್ಞಾನವೀರ, ತತ್ವಜ್ಞಾನಪಾರಾವಾರಪಾರೀಣರ ಪಡಿನೆರಳನ್ನು ಕಾಣಬಲ್ಲಿರಾ? ಜನೋದ್ಧಾರ, ವನೋದ್ಧಾರ, ಸಮಾಜೋದ್ಧಾರಗಳ ಚಿತ್ರಪುತ್ರಿಕೆಯರ ಚಂಚರೀಕ ದೃಷ್ಟಿಗಳ ಚಮತ್ಕಾರಗಳನ್ನು ಅರ್ಥಯಿಸಬಲ್ಲಿರಾ?

The world is a vanity fair. ಪ್ರಪಂಚ ಎಂಬುದೊಂದು ದಂಭದ ಸಂತೆಯಾಗಿರುವುದರಿಂದಲೇ ಹಾಸ್ಯರತ್ನವಾದ ವಿಡಂಬನ ಕಲೆಗೆ ವಿಶ್ವವ್ಯಾಪಿಯಾದ ಅವಕಾಶ ದೊರಕಿದೆಯಲ್ಲವೆ? ಅಂಥ ವಿಡಂಬನ (ವ್ಯಂಗ್ಯ, ವಕ್ರ, ಧ್ವನಿಬದ್ಧ) ತರ್ಕಾಲಂಕಾರರೆನಿಸಿದ ನನ್ನ ಸಹೋದ್ಯೋಗಿಗಳಾದರೂ 'ಯದ್ಯದ್ವಿಭೂತಿಮತ್‌ಸತ್ವಂ ಶ್ರೀಮದೂರ್ಜಿತ ಮೇವ ವಾ! ತತ್ತದೇವಾವಗಚ್ಛ ತ್ವಂ ಮಮತೇಜೋಂಶಸಂಭವಂ' ಎಂದು ಹಿಂದೆಯೇ ಹೇಳಿರುವಂತೆ ನನ್ನ ಹೃದಂಶ ಚಿದಂಶಗಳೇ ಸರಿ. ಈ ನನ್ನ Cruel kindness ನಿರ್ಭರ್ತ್ಸನಾಂತರ್ಗತ ಕರುಣೋಪದೇಶಗಳ ಅತಿ ಪರಿಣಾಮಕರವಾದ ದಿವ್ಯೌಷಧಾಮೃತವನ್ನು ಶ್ರದ್ಧಾಭಕ್ತಿಸಮನ್ವಿತರಾಗಿ ಗುಟುಕರಿಸಿದ ಭಕ್ತರು ಈ ದಿನಚರಿಯಲ್ಲೇ ಕಾಣುವಂತೆ ಬೇತಾಳ ಜನ್ಮದಿಂದ ಮುಕ್ತರಾಗಿ ದಿವ್ಯ ಮಾನವರೆನಿಸಿದ್ದಾರೆ. ಅದೇ ಮೇರೆಗೆ ನೀವಾದರೂ ಗುರುಭಕ್ತಿನಿರ್ಭರರಾಗಿ 'ಅಕ್ಕಲ್‌ಕಾ ದುಕಾನ್' ಎಂದು ಅಖಿಲ ಭಾರತದಲ್ಲಿ ಜನಪ್ರಿಯವಾಗಿರುವ ಈ ಸಿದ್ಧಾಶ್ರಮಕ್ಕೆ ಎಲ್ಲ ವಿಧದ ಆಪತ್ಕಾಲದಲ್ಲಿಯೂ ಕಾಣಿಕೆಸಹಿತವಾಗಿ ಅರ್ಜಿ ಮಾಡಿಕೊಂಡರೆ ಮರುಟಪ್ಪಾಲಿಗೆ ಮನಸ್ಸಿನ ಆರೋಗ್ಯ ಸಂಪಾದನೆಗೆ ಸಹಾಯಕವಾಗುವ ಅರಿವಿನ ಗುಳಿಗೆಗಳನ್ನು ಕಳಿಸಲಾದೀತು!

ಹರಿ–ಹರದಾಸರ ತುಮುಲತಾಂಡವಗಳಿಂದ ಜರ್ಝರಿತರಾಗಿ ಪ್ರಾಮಾಣಿಕರು ಕರ್ನಾಟಕ ಮಾತೆಯ ಕಲ್ಲೆದೆಯ ಮೇಲೆ ತಲೆ ಜಜ್ಜಿಕೊಂಬ ಕಪಾಲಶೂಲ ಯೋಗದ ಸಂದರ್ಭದಲ್ಲಿ ಸಿದ್ಧರು ಮರುಳಾದರೂ ಮರುಳರು ಸಿದ್ಧರಾಗುವುದು ಖಂಡಿತ ಸಾಧ್ಯವಿಲ್ಲ. ಬೂದಿಯ ಗುಡ್ಡೆಯ ಮೇಲೆ ಶ್ವಾನ ಮಲಗಿದರೆ ಕೈಲಾಸ ಕಂಡೀತೇ? ಗೋಪೀಚಂದನವನ್ನು ತಿಂದರೆ ಗೋವರ್ಧನವನ್ನು ಎತ್ತಲಾದೀತೇ? ಶಬ್ದಬ್ರಹ್ಮನ ಗವಿಯಲ್ಲಿ ಗೂಡಾರದ ಕವಿಗಳು ಗೊರಕೆ ಗರ್ಜನೆಗಳನ್ನು ಹಾಕಿದರೆ ಕಾಯಸಾಧನೆಯಾದೀತಲ್ಲದೆ ಕಾರ್ಯ ಸಾಧನೆಯಾಗದು. ಮೇದೋವೃದ್ಧಿಗೆಂದೇ ಸತತವಾಗಿ ಮೇಧೋವ್ಯಯ ಮಾಡಿದರೆ ಮೇಧೋವೃದ್ಧಿಯಾಗುವುದುಂಟೇ? ಇಂಥ ಪ್ರಕರಣದಲ್ಲಿ ಅಕ್ಕಲ್ ಎಂಬ ಪದಾರ್ಥವು ಯುರೇನಿಯಮ್ಮಿಗಿಂತಲೂ ದುರ್ಲಭ ಮತ್ತು ಮಹಾರ್ಘ ಎನಿಸುವುದರಿಂದ ಲೋಕಾನುಗ್ರಹ ಬುದ್ಧಿಯಿಂದ ನಾನು ಅತ್ಯಲ್ಪ ಮೂಲ್ಯಕ್ಕೆ ಅದನ್ನು ಒದಗಿಸಿ ಕೊಡುವ ಆಶ್ವಾಸನವನ್ನು ಕೊಟ್ಟಿದ್ದೇನೆ.

ಸಿದ್ಧೋಹಂ ಸಿದ್ಧಕರ್ಮಾಹಂ
ಸಿದ್ಧಾತ್ಮಾ ಸಿದ್ಧಭಾವನಃ।
ಸಿದ್ಧಜ್ಞಾನ ಪ್ರಯೋಗಜ್ಞಃ
ಸಿದ್ಧಿದಃ ಸಿದ್ಧವಾಗ್ರಸಃ॥

ಮರುಳುಸಿದ್ಧಾಶ್ರಮ
ಹುಬ್ಬಳ್ಳಿ
೧–೧–೧೯೫೧

– ಮರುಳುಸಿದ್ಧ

(ಮೇಲಿನ ಪತ್ರವನ್ನು ಇತರ ದಿನಚರಿ ಲೇಖನಗಳೊಡನೆ ದಯಪಾಲಿಸಿದ ಮರುಳುಸಿದ್ಧ ಮಹಾಮುನಿಗಳಿಗೆ ನಾನು ನಿರಂತರ ಕೃತಜ್ಞ – ಬಿ.ಎಚ್. ಶ್ರೀಧರ ಎಂ.ಎ. [ಸಂಗ್ರಾಹಕ]

ಮುನ್ನುಡಿಯ ಮುದ್ರೆ

ಗೆಳೆಯ ಶ್ರೀಧರರೂ ನಾನೂ ಸಿದ್ಧಮಠಕ್ಕೆ ಸೇರಿ ಹಲವು ವರ್ಷಗಳಾದವು. ಮುಮುಕ್ಷುಗಳು, ಸಾಹಿತಿಗಳು, ಕಳ್ಳರು – ಎಲ್ಲರಿಗೂ ಗುರುಗಳು ಬೇಕೇ ಬೇಕು. ಅವರು ಮಠವನ್ನು ಸೇರಿಕೊಳ್ಳುವುದು ತೀರ ಸಹಜ. ನಮ್ಮಿಬ್ಬರಿಗೂ ಒಮ್ಮೆ ಆಪತ್ಕಾಲವೊದಗಲಾಗಿ (ರೇಶನ್ ಕೋಟಾ ಮೂರೇ ದಿನಗಳಲ್ಲಿ ತೀರಿಹೋಗಿ) ಒಬ್ಬ ಗುರುವಿನ ಗುಲಾಮರಾಗಬೇಕೆಂಬ ಜ್ಞಾನೋದಯವಾಯಿತು. ಅರವಿಂದ ತತ್ವವನ್ನು ಅಪ್ಪಿಕೊಂಡು ಪಾಂಡಿಚೇರಿಗೆ ಹೋಗಬೇಕೋ, ಗಾಂಧೀಪಂಥ ಹಿಡಿದು ಸೂತ್ರ ಯಜ್ಞ ಮಾಡಬೇಕೋ ಎಂಬಿವೇ ಮೊದಲಾದ ಹಲವಾರು ಪ್ರಶ್ನೆಗಳು ಮೂಡಿ, ಕೊನೆಗೆ ಮರುಳುಸಿದ್ಧಯ್ಯನವರ ಮಠಕ್ಕೆ ಸೇರಿಕೊಂಡೆವು.

ಅಲ್ಲಿ ನಾವು ನೂರಾರು ಜ್ಞಾನ (ಮತ್ತು ಭೋಜನ) ಸತ್ರಗಳನ್ನೇರ್ಪಡಿಸಿದ್ದೆವು – ಪೂಜ್ಯ ಸ್ವಾಮೀಜಿಯವರ ಪಾದಕಮಲದ ಕೆಳಗೆ. ಆಗ ಮಹಾಸ್ವಾಮಿಗಳು ಅಪ್ಪಣೆ ಕೊಟ್ಟ ಅನುಭವಾಮೃತ ಬಿಂದುಗಳಲ್ಲಿ ಮತ್ತು ಅವರೆದುರಾದ ಚರ್ಚೆಗಳಲ್ಲಿ ಇಷ್ಟನ್ನಾಯ್ದು ಗೆಳೆಯ ಶ್ರೀಧರರು ಇಲ್ಲಿ ಕೊಟ್ಟಿದ್ದಾರೆ. ಸ್ವಾಮೀಜಿಯವರು ಮುಟ್ಟದ ವಿಷಯ (ಗಿಡ?)ವಿಲ್ಲ. ಅಜ್ಞೇಯದಿಂದ ಅಜೀರ್ಣದವರೆಗೆ ಅವರ ದಿವ್ಯದೃಷ್ಟಿಯ ವಾಗ್ಝರಿಯ ತರಂಗಗಳು ಹಾಯುತ್ತಿದ್ದವು. ಗೆಳೆಯ ಶ್ರೀಧರರು ಸಂಗ್ರಹಿಸಿದ ಈ ಜ್ಞಾನನಿಧಿಗೆ ನಾನು ಮುನ್ನುಡಿಯ ಮುದ್ರೆ ಒತ್ತಬೇಕೆಂದು ಅವರ ಬಯಕೆ. ಎತ್ತಿನ ಎರಡು ಕೋಡುಗಳಂತೆ, ಕತ್ತೆಯ ಎರಡು ಕಿವಿಗಳಂತೆ ಒಂದೇ ಗುರುವಿನ ಶಿಷ್ಯದ್ವಯದಲ್ಲಿ ಒಬ್ಬನಾದುದರಿಂದ, ಇದು ನನ್ನ ಹಕ್ಕು ಎಂದರೂ ಸರಿಯೆ – ಒಪ್ಪಿದೆ, ಬರೆದಿದ್ದೇನೆ.

ಇಲ್ಲಿ ಏನಿದೆ ಏನಿಲ್ಲ ಎಂಬುದನ್ನು ಓದಿಯೇ ತಿಳಿಯಬೇಕು. ಗುರುವಿನ ಘನತೆಯನ್ನು ಘೋರವಾಗಿ ಹೊಗಳುವುದಾಗಲಿ, ದೋಷವನ್ನು ಗುರುತಿಸುವುದಾಗಲಿ ಸಭ್ಯ ಶಿಷ್ಯರಿಗೆ ಸಲ್ಲದು. ಒಂದು ಮಾತನ್ನು ಮಾತ್ರ ಹೇಳದೆ ಗತಿಯಿಲ್ಲ. ಇದೊಂದು ಸರ್ವಾರ್ಥಸಿದ್ಧಿ ಕವಚದಂತಿದೆ. ಸಕಲ ರೋಗಗಳಿಗೆ ಇಲ್ಲಿ ಪರಿಹಾರ ಹೇಳಿದೆ. ರೋಗವನ್ನೇ ಆರೋಗ್ಯವೆಂದು ನಂಬಿ ಕಣ್ಣು ಮುಚ್ಚಿ ಕುಳಿತರೆ ಕಿವಿಯನ್ನೇ ಉದ್ದವಾಗಿಸಿ ಬೀಜಮಂತ್ರ ಊದುವ ಶಕ್ತಿ ಇದಕ್ಕಿದೆ. ಎಚ್ಚರಿಕೆ – ಎಚ್ಚರಿಕೆ!

ಧಾರವಾಡ

೧೮.೧.೫೧ **– ವಿ.ಜಿ. ಭಟ್ ಎಂ.ಎ.**

‘ಬೇತಾಳಗಳ ಕುಣಿತ’ ವನ್ನು ಸವಿಯುವ ಮುನ್ನ.....

ಖ್ಯಾತ ಕವಿ, ವಿಮರ್ಶಕ, ಚಿಂತಕ ಪ್ರೊ. ಬಿ.ಎಚ್. ಶ್ರೀಧರರು ಬರೆಯಲು ತೊಡಗಿದ್ದು ೪೦ ದಶಕದಲ್ಲಿ. ಸಂಸ್ಕೃತ, ಕನ್ನಡ, ಇಂಗ್ಲೀಷು ಭಾಷೆಗಳಲ್ಲಿ ವಿದ್ವಾಂಸರಾಗಿದ್ದ ಅವರು ಐವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ದಕ್ಷಿಣ ಕನ್ನಡದಲ್ಲಿ ಜನಿಸಿ, ಮೈಸೂರಿನಲ್ಲಿ ಓದಿ, ಉತ್ತರ ಕನ್ನಡವನ್ನು ತಮ್ಮ ಕರ್ಮಭೂಮಿಯಾಗಿಸಿಕೊಂಡವರು ಅವರು. ಅವರ ಕವನಸಂಕಲನಗಳು, ವಿಮರ್ಶಾಕೃತಿಗಳು, ವೈಚಾರಿಕ ಗ್ರಂಥಗಳು, ಅನುವಾದಗಳು ಗಂಭೀರ ಸಾಹಿತ್ಯಾಭಿಮಾನಿಗಳಿಗೆ ಇಂದಿಗೂ ಮಾರ್ಗದರ್ಶಕಗಳಾಗಿವೆ.

ಆದರೆ ಶ್ರೀಧರರ ಪ್ರಾತಿನಿಧಿಕ ಕೃತಿಗಳ ಪ್ರತಿಗಳು ಎಂದೋ ಮುಗಿದುಹೋಗಿ ಆಸಕ್ತ ವಾಚಕರಿಗೆ ಅವು ಲಭ್ಯವಾಗದ ಸ್ಥಿತಿಯಲ್ಲಿದ್ದಾಗ ಬೆಂಗಳೂರಿನ ತೇಜು ಪಬ್ಲಿಕೇಷನ್ಸ್‌ನ ವತಿಯಿಂದ ಅವೆಲ್ಲ ಇತ್ತೀಚೆಗೆ, ಅಂದರೆ ೨೦೧೩ರಿಂದ ೨೦೧೯ರ ಅವಧಿಯಲ್ಲಿ ಕಾವ್ಯ, ವಿಮರ್ಶೆ, ವಿಚಾರ, ಸಂಕೀರ್ಣ, ಅನುವಾದ-೧, ಅನುವಾದ-೨ (ಸುಮಾರು ೫೦೦೦ ಪುಟಗಳು) ಎಂಬುದಾಗಿ ೬ ಸಂಪುಟಗಳಲ್ಲಿ ಪುನರ್ಮುದ್ರಣಗೊಂಡವು. ಹೀಗೆ ಮುದ್ರಿಸುವ ಸಮಯದಲ್ಲಿ ಪ್ರಸ್ತುತ ವಿಡಂಬನಾ ಕೃತಿ “ಬೇತಾಳಗಳ ಕುಣಿತ ಅಥವಾ ಸಿದ್ಧಸಭೆಯ ಕಾರ್ಯಕಲಾಪಗಳು” ಇದರ ಒಂದು ಪ್ರತಿಯೂ ಲಭ್ಯವಿರಲಿಲ್ಲ. ಹೀಗಾಗಿ ಬಿ.ಎಚ್. ಶ್ರೀಧರರ ಸಮಗ್ರ ಸಾಹಿತ್ಯ ಸರಣಿಯ ೪ನೆಯ ಸಂಪುಟವಾದ ‘ಸಂಕೀರ್ಣ’ದಲ್ಲಿ ಸೇರಬೇಕಾಗಿದ್ದ ಈ ಕೃತಿಯನ್ನು ಸೇರಿಸಲಾಗಲಿಲ್ಲ. ತದನಂತರ ಪವಾಡವೆಂಬಂತೆ ‘ನ್ಯಾಶನಲ್ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ’ದ ಜಾಲತಾಣದಲ್ಲಿ ಈ ಇಡೀ ಪುಸ್ತಕವನ್ನು ಯಾರೋ ಸಜ್ಜನರು ಹಾಕಿದ್ದು, ನಮಗೆ ದೊರೆತು, ಅದನ್ನು ಈಗ ಪುನರ್ಮುದ್ರಿಸುತ್ತಿದ್ದೇವೆ. ಆ ಅನಾಮಿಕ ಸಾಹಿತ್ಯಪ್ರೇಮಿಗೆ ಹಾರ್ದಿಕ ಧನ್ಯವಾದಗಳು. ಹಾಗೆಯೇ, ಈ ವಿಷಯವನ್ನು ನಮ್ಮ ಗಮನಕ್ಕೆ ತಂದ ಖ್ಯಾತ ಹಾಸ್ಯಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

“ಬೇತಾಳಗಳ ಕುಣಿತ ಅಥವಾ ಸಿದ್ಧಸಭೆಯ ಕಾರ್ಯಕಲಾಪಗಳು” ಎಂಬ ಪ್ರಸ್ತುತ ಕೃತಿ ಮೊದಲು ಪ್ರಕಟವಾದದ್ದು ಸರ್ವೋದಯ ಸಾಹಿತ್ಯಮಾಲೆ-ಹುಬ್ಬಳ್ಳಿಯ ವತಿಯಿಂದ ೧೯೫೧ರಲ್ಲಿ. ಇದು ಶ್ರೀಧರರು ಮೈಸೂರಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ಬೆಂಗಳೂರಿನ “ನಗುವನಂದ” ಹಾಸ್ಯಪತ್ರಿಕೆಗಾಗಿ ಬರೆಯಲಾರಂಭಿಸಿದ್ದ ವಿಡಂಬನ ಚಂಪೂಲೇಖನಗಳ ಸಂಗ್ರಹ. ಅದು ಅವರ ಸೃಷ್ಟಿಶೀಲತೆ ಬಹುರೂಪ ಪಡೆದು ವಿಕಸಿಸುತ್ತಿದ್ದ ವಿಶಿಷ್ಟ ಕಾಲ. “Creativity is intelligence having fun” (ಸೃಷ್ಟಿಶೀಲತೆಯೆಂದರೆ ಬುದ್ಧಿ ಲೀಲೆಯಲ್ಲಿ

ತೊಡಗಿಕೊಂಡಿರುವುದು) ಎಂಬ ಮಾತಿದೆ. ಅಂಥ ಲೀಲಾಲೋಲ ಕಾಲದಲ್ಲಿ ಹೊರಹೊಮ್ಮಿದ್ದು ಈ ಲಲಿತ ಲಹರಿಯ ಹರಟೆಯ ರೂಪದ ಕೃತಿ. ಅಂದಿನ (೪೦ರ ದಶಕದ) ಸಾಹಿತ್ಯಿಕ, ಸಾಮಾಜಿಕ, ಮುಖ್ಯವಾಗಿ ರಾಜಕೀಯ ವಿಷಯಗಳನ್ನು ಲಘು–ವಿಡಂಬನಾತ್ಮಕವಾಗಿ ಮುಟ್ಟಿ, ಹೆಚ್ಚು ಆಳಕ್ಕೆ ಇಳಿಯದೆ, ಥಟ್ಟನೆ ಮುನ್ನಡೆಯುವ ಓಘದಲ್ಲೂ ಚಿಂತನೆಗೆ ಹಚ್ಚುವ ಅಂಶಗಳು ಇದ್ದೇ ಇವೆ ಇಲ್ಲಿ. ಹಾಗೆ ಚಿಂತನೆಗೆ ಹಚ್ಚದ ಬರಹಗಳು ಶ್ರೀಧರಸಾಹಿತ್ಯದಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಇಲ್ಲಿ, ಅಲ್ಲಲ್ಲಿ ಬರುವ ಪದ್ಯಗಳ ಸ್ವಾರಸ್ಯ ವಾಚಕರಿಗೆ ಸ್ವಯಂವೇದ್ಯವಾಗದಿರದು.

ಈ ಕೃತಿಗೆ ಮುನ್ನುಡಿದವರು ಶ್ರೀಧರರ ಸ್ನೇಹಿತ, ಕುಟುಂಬಮಿತ್ರ ಶ್ರೀ ವಿ.ಜಿ. ಭಟ್ ಅವರು. ಸ್ವತಃ ವಿಕಟ ವಿಡಂಬನ ಕವಿಯಾಗಿದ್ದ ಅವರ ಮುನ್ನುಡಿಯೂ ಸ್ವಾರಸ್ಯಕರವಾಗಿದೆ.

ಈಗ ಮತ್ತೆ ಈ ಕೃತಿ ಪುನರವತರಿಸುವಂತೆ ಮಾಡಿದ ತೇಜು ಪಬ್ಲಿಕೇಷನ್ಸ್ – ಬೆಂಗಳೂರು ಇದರ ಮಾರ್ಗದರ್ಶಕ ಶ್ರೀ ಎನ್. ರಾಮನಾಥ್ (ಖ್ಯಾತ ಹಾಸ್ಯಲೇಖಕರು) ಅವರಿಗೆ ತುಂಬು ಹೃದಯದ ವಂದನೆಗಳು.

ಸುಖವಾಗಿ ಕೂತು, ಓದಿ, ಸವಿಯುತ್ತಲೇ ಮರುಳುಸಿದ್ಧ ಮಹಾಮುನಿಗಳ ಬೀಜಮಂತ್ರಕ್ಕೆ ಕಿವಿಗೊಟ್ಟರೆ ಸರ್ವಾರ್ಥಸಿದ್ಧಿಯಾಗುವುದು ನಿಶ್ಚಿತ!

– ರಾಜಶೇಖರ ಹೆಬ್ಬಾರ

(ಬಿ.ಎಚ್. ಶ್ರೀಧರ ಸಮಗ್ರಕೃತಿ ಶ್ರೇಣಿಯ ಸಂಪಾದಕರು)

ಬೇತಾಳಗಳ ಕುಣಿತ
ಅಥವಾ
ಸಿದ್ಧಸಭೆಯ ಕಾರ್ಯಕಲಾಪಗಳು

ಈ ದಿನ ಎಂಥಾ ದಿನ ಅನ್ನುತ್ತೀರಿ? ಬರೀ ಮೋಡ, ಮುಗಿಲು–ಮೋಡ, ಮುಗಿಲು! ಬಿಸಿಲೂ ಇಲ್ಲ, ಅತ್ತ ಮಳೆಯೂ ಇಲ್ಲ. ಸೆಕೆಯೆಂದರೆ ಸೆಕೆ. ನಮ್ಮ ಅರಣ್ಯಾಶ್ರಮ ಈಗ ಸ್ಥಳಾಂತರ ಹೊಂದಿದೆ. ಅಟ್ಟದ ಮೇಲೆ ಕಛೇರಿ. ಗಾಳಿ, ಗಾಳಿ, ಗಾಳಿ! ಇಂತಹ ಸಮಯದಲ್ಲಿ ಒಬ್ಬ ಸಂಪಾದಕ ಮಹಾಶಯರು ಕೆಲವು ಪುಸ್ತಕಗಳನ್ನು ಹಿಡಿದುಕೊಂಡು ಗಾಳಿಯಂತೆ ಬಂದುಬಿಟ್ಟರು. 'ವಡಬಾಗ್ನಿ ಜಡೆವೊತ್ತುದೋ ಸಿಡಿಲು ಹೊಸಭಸಿತವಿಡ ಕಲಿತುದೋ' ಎಂಬಂತೆ ಭಸ್ಮೋದ್ಧೂಲಿತ ವಿಗ್ರಹರಾದ ಅವರ ಧೀರ ಗಂಭೀರ ಮುದ್ರೆಯನ್ನು ಕಂಡು ಯಾರಾದರೂ ಗಂಭೀರ ಭಾವವನ್ನು ತಾಳಬೇಕು, ಹಾಗಿತ್ತು ಅವರ ಆಗಿನ ನಿಲುವು. ಪುಸ್ತಕಗಳನ್ನು ನನ್ನೆದುರಿಟ್ಟು – 'ಮಹಾಶಯಾ ಕನ್ನಡ ಸಾಹಿತ್ಯದ ಕಥೆ ಇಲ್ಲಿಗೆ ಬಂತೇ? ಕೇವಲ ಅನುವಾದ, ಅನುವಾದ, ಅನುವಾದ! ಅದೂ ಎಲ್ಲಾದರೂ ಹಳೆಯ ಆಂಗ್ಲಪತ್ರಿಕೆಗಳಲ್ಲಿಯ ಕಥೆಗಳ ಅನುವಾದ. ಭಾಷೆಯೋ ಬರೆದವರ ಸ್ವಂತದ್ದು! ಇಂತಹ ಭಾಷಾಭೈರವರ ಪುಸ್ತಕಗಳನ್ನು ವಿಮರ್ಶಿಸಿ ಕಣ್ಣೆಲ್ಲ ಕಾದುಹೋಗಿವೆ' ಎಂದು ತಮ್ಮಳಲನ್ನು ತೋಡಿಕೊಳ್ಳುವುದನ್ನು ನೋಡಿ ಬಹಳ ವ್ಯಸನವಾಯಿತು. ಕೆಲಹೊತ್ತು ಗಂಭೀರವಾಗಿದ್ದು ಆ ಬಳಿಕ ಹೀಗೆ ಹೇಳಬೇಕಾಯ್ತು. ಲೇಖಕರು ತಮಗೆ ಸಂಭಾವನೆ ಕೊಡಬೇಕೆಂಬುದನ್ನೇ ವಸ್ತುವಾಗಿಟ್ಟುಕೊಂಡು ಹರಟೆ, ಕಥೆ, ನಾಟಕ, ನೇರವಾದ ಪತ್ರ – ಈ ನಾನಾವಿಧದ ಸಾಧನಗಳಿಂದ ಸಂಪಾದಕರಿಂದ ಪಡೆಯಬಹುದಾದ ಸಂಪಾದನೆಗೆ ಹಾರೈಸಿ ಹಾರೈಸಿ, "ಹಾರೈಸಿದ್ದೆಲ್ಲವೂ ಹಳವಂಡವಾದ ಮೇಲಿನ್ನೇನಿನ್ನೇನು" ಎಂದು ಹಾಡಿ ಹಾಡಿ ಬೇಸತ್ತಿರುವಾಗ ನಿಮಗೆ ಬರುವುದಾದರೂ ಎಂತಹ ಲೇಖನಗಳು? 'ಕಾಸಿಗೆ ತಕ್ಕ ಕಜ್ಜಾಯ' ವಲ್ಲದೆ ಬೇರೇನು? ಇತ್ತೀಚೆಗೆ ಬಂಡವಾಲಗಾರರಾದ ಸಂಪಾದಕರು ಅಥವಾ ಪ್ರಕಾಶಕರು ಬಂಡವಾಳವಿಲ್ಲದೆ ಲಾಭ ಪಡೆಯಲು ಹವಣಿಸಿದರೆ ಮತ್ತೇನಾಗುವುದು? ಬೂದಿ! ಬೂದಿಯಲ್ಲಿ ಹೋಮ ಮಾಡಿದಂತೆಯೇ ಅಲ್ಲವೆ? ಈ ಮಾತನ್ನು ಎಷ್ಟು ಉಗ್ರವಾಗಿ ಹೇಳಿದರೂ ಸಾಲದು ಹೇಳುವುದು ಶಾಸ್ತ್ರ, ಹಾಕುವುದು ಗಾಳ ಎಂತಾದರೆ ಬರುವುದು ಬಂಡವಾಳವಿಲ್ಲದ ಬರಿಯ ಬಡಾಯಿಯಲ್ಲದೆ ಒಳ್ಳೆಯ ಪುಸ್ತಕಗಳೇ? ಲೇಖನಗಳೇ? ಕೋಪಿಸಿಕೊಳ್ಳಬೇಡಿ–

ಯಥಾ ಬೀಜಸ್ತಥಾ ವೃಕ್ಷಃ। ಯಥಾ ದಾನಂ ತಥಾ ಫಲಂ॥

ಯಥಾ ಶ್ವಾನ ಸ್ತಥಾ 'ಬಾಲಃ'। ದಕ್ಷಿಣಾಭಾ ಪ್ರದಕ್ಷಿಣಾ॥

Accidental coincidence. ಆಕಸ್ಮಿಕ ಸಂಯೋಗ ಉಂಟಾದಂತೆ ಲೇಖಕನೊಬ್ಬನು ಬಗಲಿನಲ್ಲಿ ಲೇಖನದ ಕಟ್ಟೊಂದನ್ನು ಹಿಡಿದುಕೊಂಡು ಅದೇ ಮರುಗಳಿಗೆಯಲ್ಲಿ ಪ್ರವೇಶಿಸಬೇಕೆ? ಇಂದೇನೋ ವಿಚಿತ್ರವಾಗಿದೆ ಎಂದುಕೊಂಡೆ! ಆತ ಒಂದು ಹರಟೆಯನ್ನು ಬರೆದುಕೊಂಡು ಬಂದಿದ್ದ, ಎಲ್ಲವರೂ ಬೇಡವೆಂದ ಸರಕು! ಪಾಪ–ಅವನು ಮಾಡಿದ್ದು ಅದನ್ನೇ! ಓನಾಮ ಬರೆಯುವುದು ಕಲಿಯುವಷ್ಟರಲ್ಲೇ ಕತೆ ಬರೆಯಲಿಕ್ಕೆ, ಹರಟೆ ಶುರುಮಾಡಲಿಕ್ಕೆ ಶುರು! ಏನಪ್ಪಾ "ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬುದನ್ನು ಅಣಕಿಸಲೋ ಎಂಬಂತೆ ವ್ಯಾಕರಣದ ಮೇಲೆ ಪ್ರತೀಕಾರ ಮಾಡಲೆಂದೇ ಬರೆದಂತಿತ್ತು ಆ ಲೇಖನ. "ಕರ್ಲಿ ಹೆಡ್ಡು ಕವೀಶ್ವರಗೆ" ಇತ್ಯಾದಿ ವರ್ಣನೆಗೆ ಸರಿಹೋಲುತ್ತಿದ್ದ ಆಧುನಿಕ ವಿದ್ಯಾವಂತ (?) ತರುಣನಿದ್ದನವ. ಏನು ಮಾಡುತ್ತೀರಪ್ಪ ಇಂತಹ ವಿದ್ಯಾವಂತರನ್ನು ಕಟ್ಟಿಕೊಂಡು? ಫ್ಯಾಸಿಜಂ, ನಾಜಿಝಂ, ಮಾರ್ಕ್ಸಿಜಂ ಎಂದು ದೊಡ್ಡ ದೊಡ್ಡ ಅರ್ಥವಾಗದ ಮಾತುಗಳನ್ನು ಅರ್ಥವಾಗದಂತೆ ವಿವರಿಸುವ ಆ ಹರಟೆಯನ್ನು ಓದಿದರೆ ಯಾರಿಗಾದರೂ ತಲೆ ಹರಟೆಯಾಗದಿರದು. ವಿಶೃಂಖಲವೃತ್ತಿಯ ಪರಮಾವಧಿಯೋ ಎಂಬಂತೆ ನಗಿಸುವುದೊಂದೇ ಗುರಿ ಎಂದುಕೊಂಡು ತಲೆಹಾಕಿದ ಆ ಹುಡುಗ ಹಾಸ್ಯದ, ಲೇವಡಿಯ, ಅಶುದ್ಧ ವಾಕ್ಯ ಪಂಕ್ತಿಗಳನ್ನು ತೆಗೆದುಕೊಂಡು ಅವನು ಏನು ಸಂಪಾದಿಸಿಯಾನು? "ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ" ಎಂಬುದನ್ನು ಮೂದಲಿಸುವಂತೆ ಹಲಗೆ ಬಳಪವನಲ್ಲ, ಪಾರ್ಕರ್ ಪೆನ್ನುಗಳನ್ನುಪಯೋಗಿಸಿ ಬೌಂಡ್ ನೋಟು ಬುಕ್ಕುಗಳ ಮೇಲೆ ಬರೆದು ಪದವೀಧರರಾದರೂ ಕೂಡ ಒಮ್ಮೊಮ್ಮೆ ತಮ್ಮ ಹೆಸರಿನ ಅಕ್ಷರಗಳನ್ನೇ ತಪ್ಪು ಬರೆಯುವುದನ್ನು ಕಂಡರೆ ಅವರನ್ನು ಭಸ್ಮೀಭೂತರನ್ನಾಗಿ ಮಾಡಬೇಕೆಂದು ಯಾವ ಲಕ್ಷ್ಮೀಶರು ಹೇಳರು? ಯಾವ ಮುದ್ದಣ್ಣರೆನ್ನರು? ಯಾವ ನಾರಣಪ್ಪರೆನ್ನರು? ಅಯ್ಯೋ ಮಗು, ತಪಸ್ಸಿಲ್ಲದೆ ಸಿದ್ಧಿಯಾಗದು.. ಎಂದೆ. ನನ್ನಂತೆಯೇ ಬೂದಿ ಬಳಿದುಕೊಳ್ಳಬೇಕೆಂದಲ್ಲ. ಹಳಗನ್ನಡ ಸಾಹಿತ್ಯವನ್ನು ಜೀರ್ಣಿಸಿಕೊಳ್ಳಬೇಕು. ಹಾಗಲ್ಲದೆ ಹೀಗೆಂದರೆ?

ನಾನು ಹರಟೆಗಾರ, ಕವಿ
ನನ್ನ ಬರಹ ಮೆಚ್ಚದವನು ದೊಡ್ಡದೊಂದು ಅವಿ।
ನಾನು ಕಾಲಿದಾಸ ಗಾರ್ಕಿ
ನನ್ನ ಬರಹವಚ್ಚುಮಾಡದವನು ಮೂರ್ಖ ಭವಿ॥

***

ಮಳೆಗಾಲ ಮುಗಿದು ಚಳಿಗಾಲ ಪ್ರಾರಂಭವಾಯಿತು. ಸಿದ್ಧಾಶ್ರಮದಲ್ಲಿ ಚಿಕ್ಕಾಟದ ಕಾಟ ಕಡಿಮೆಯಾಯಿತು. ಆದರೆ ಭರತಖಂಡದಲ್ಲಿ ಜಿನ್ನಾನುಯಾಯಿಗಳ ಕಾಟ ಜಾಸ್ತಿಯಾಯಿತು. ನಡುಮಧ್ಯಾಹ್ನದಲ್ಲಿ ಶರಣನೊಬ್ಬನು ಶರಣೆಂದ.

"ಊಟವಾಗಿಲ್ಲವೇನೋ?" ಎಂದು ಕೇಳಿದೆ. ನನ್ನವಳಿಗೆ ನಾನೇ ಅಡಿಗೆ ಕಲಿಸುವ ಪ್ರಸಂಗ ಬಂದಿದೆಯೆಂದ. ಕಲಿಕಾಲ ಎಂದ. ಸೊಗಸಾಗಿರಬೇಕೆಂದು ಗಾಜಿನ ಪಾತ್ರೆಗಳನ್ನು ತಂದಿದ್ದರೆ ಒಡೆದು ಹಾಕಿಬಿಟ್ಟಿದ್ದಾಳೆ ಎಂದ. ಅಯ್ಯೋ! ಗ್ರಹಚಾರವೇ? ಸ್ವರಾಜ್ಯ ಕೊಟ್ಟರೆ ಆಳಿಕೊಳ್ಳುವ ಶಕ್ತಿ ಇಲ್ಲ ಪಾಕಿಸ್ತಾನಿಗಳಿಗೆ. ಆ ಅಡಿಗೆ ಮಾಡಲು ಬರದ "ಅಪ್ ಟು ಡೇಟ್" ಹುಡುಗಿಯರು ಒಲೆಯ ಮೇಲಿನ ಪಾತ್ರೆಯನ್ನು ಇಳಿಸುವಾಗ ಒಳಗಿದ್ದದ್ದನ್ನೆಲ್ಲಾ ಚೆಲ್ಲುವಂತೆ ರಾಜ್ಯಸೂತ್ರಗಳನ್ನು ತೆಗೆದುಕೊಂಡ ಜಿನ್ನಾಧಿಕಾರಿಗಳು ಕಾಶ್ಮೀರ್, ಜುನಾಗಡಗಳ ಪ್ರಕರಣದಲ್ಲಿ ಕೈಹಾಕಿ ಮೀಸೆ ಸುಟ್ಟುಕೊಂಡ ಬೆಕ್ಕಿನಂತೆ, ಬಾಲ ಕಳೆದುಕೊಂಡ ನರಿಯಂತೆ, ಹಲ್ಲು ಕಳೆದುಕೊಂಡ ಮಂಗದಂತೆ ಹೈರಾಣಾಗಿ ಹೋದರು. ಭಾರತದ ಗೃಹಮಂತ್ರಿಗಳಿಂದು ಅವರಿಗೆ ಬುದ್ಧಿ ಕಲಿಸುವ ಪ್ರಸಂಗ ಬಂತಲ್ಲವೇ? ಅದರಂತೆಯೇ ನೀನಾ ನಿನ್ನ ನವ ವಧುವಿಗೆ ಅಡಿಗೆಮನೆಯ ಆಡಳಿತವನ್ನು ಕಲಿಸು ಮಗು ಎಂದು ಶರಣನನ್ನು ಬೀಳ್ಕೊಟ್ಟೆ.

ಕುಂಬಳಕಾಯಿಯ ಹೆಚ್ಚಲು ಬಾರದ
ಹೊಸ ಹುಡುಗಿಯ ಕೈಹಿಡಿದವರೇ
ಬಿಂಬಾಧರೆಯನು ಬಯ್ಯದೆ ಹೇಗೋ
ಸಂಬಾಳಿಸಿಕೊಳಬೇಕರರೇ!
ಗಾತ್ರಕ್ಕಾಗುವುದು ಮುಟ್ಟದೆ ಹೋದರೆ
ವೇತ್ರಾಸ್ತ್ರವೆ ಗತಿ ಕಾಣಣ್ಣಾ
ಶಾಸ್ತ್ರಾರ್ಥವ ಚತುರೋಪಾಯಗಳಿಂ
ಬಳಸುವುದರೊಳಿದೆ ಹೊಸಬಣ್ಣ!

***

ಉಷಃಕಾಲದಲ್ಲಿ ಆನಂದಭವನದಲ್ಲಿ ಚಹಪ್ರಾಶನ ಕಾರ್ಯದಲ್ಲಿ ತತ್ಪರವಾದ ನಾಲಿಗೆಯು ಸಂಪು ಹೂಡಿತು. ಕಾರಣವೇನೆಂದು ಕಣ್ಣು ತೆರೆದು ನೋಡಿದಾಗ ಪತ್ರಿಕೆಯೊಂದರಲ್ಲಿ ಹೋಟೇಲೊಡೆಯರು ಹಾಲಿನ ಪುಡಿಯನ್ನು ಉಪಯೋಗಿಸಬೇಕೆಂದು ಹುಕುಂ ಬಂದದ್ದು ಕಂಡಿತು. ಇದರಿಂದ ಸಂಸಾರಿಗಳಿಗೆ ಹಾಲು ಸಿಕ್ಕುವಂತಾಗಿ ಜಂಟ್ಲಮೇನರು ಹೆಂಡತಿ ಮಕ್ಕಳನ್ನು ವಂಚಿಸಿ ಹೋಟೆಲಲ್ಲಿ ಜಿಹ್ವಾಪ್ರಸಾದನ ವ್ರತವನ್ನು ಪೂರೈಸುವುದು ನಿಂತು, ಮನೆ ಮಂದಿಗೆಲ್ಲಾ ಚಹ ಸಾಮ್ಯವಾದದ ಫಲ ದೊರಕುವುದೆಂದು ಹೇಳಲಾಯ್ತು. ಇದನ್ನು ಓದಿ ಇದರಲ್ಲಿ ಪೆಟಿಕೋಟ್ ಗವರ್ನಮೆಂಟಿನ, ಅಂದರೆ ಗೃಹಲಕ್ಷ್ಮಿಯ ಅರ್ಥಾತ್ ಕೈಹಿಡಿದವಳ ಕೈವಾಡವಿದೆ ಎಂದು ನಮ್ಮ ಕರಿಬಸವನೆಂದ. ಹೋಟೆಲೆಂಬ ಕ್ಷೀರಸಾಗರದಲ್ಲಿ ಮಾತ್ರ ಹಾಲು ಕೇಂದ್ರೀಕೃತವಾಗದೆ ಮನೆಮನೆಗಳಲ್ಲಿ ಒಂದೊಂದು ಹಾಲುಕೆರೆಯುಂಟಾಗಲೆಂದು

ಉದ್ದೇಶಪಟ್ಟಂತಿದೆ. ಆದರೆ ಹಾಲು ಮಾರುವವರು ಹತ್ತು ಕಡೆ ಹಂಚುವ ಬಗ್ಗೆ ಕೂಲಿ ಕೊಡುವ ನೆವ ಹೇಳಿ ಹಾಲಿನ ಧಾರಣೆ ಇಳಿಸದೆ ಹೋಗುವುದೊಂದು ಕಡೆ, ಇಷ್ಟು ಹಾಲು ಏತಕ್ಕೆಂದು ಎಮ್ಮೆ ದನಗಳನ್ನು ಹಳ್ಳಿಗಳಿಗೆ ಹೊಡೆಯುವುದೊಂದು ಕಡೆ, ಹೀಗಾಗಿ ಹಾಲಿನವರಿಗೆ ವ್ಯಾಪಾರ ಕಡಿಮೆ, ಹೋಟೆಲು ಗಿರಾಕಿಗಳಿಗೆ ಚಹದಲ್ಲಿ ರುಚಿ ಕಡಿಮೆ, ಸಂಸಾರಿಗಳಿಗೆ ನೀರು ಹಾಲಿನಲ್ಲಿ ಹಾಲಿನಂಶ ಕಡಿಮೆ, ಒಟ್ಟಿನ ಮೇಲೆ ಹಿಂದುಸ್ಥಾನದ ನಾಗರಿಕರಲ್ಲಿ ಆರೋಗ್ಯ ಕಡಿಮೆ, ಹಾಲಿನ ಉತ್ಪಾದನೆ ಕಡಿಮೆ! ಇದೇಕೆ ಹೀಗಾಯಿತು ಎನ್ನುವಷ್ಟರಲ್ಲಿ ಮಲ್ಲಿಗರ ಮಾಚಯ್ಯ ಇದರಲ್ಲಿ ಬ್ರಾಹ್ಮಣರ ಪಿತೂರಿ ಇರಬೇಕು ಎಂದನು. ಏಕೆಂದರೆ ಉಳಿದವರಿಗಿಂತ ಗೋರಸವನ್ನೀಂಟುವುದು ಬ್ರಾಹ್ಮಣರಲ್ಲೇ ಹೆಚ್ಚಾಗಿರುವುದರಿಂದ ಅವರು ತಮ್ಮ ಭೋಜನಪ್ರಿಯತೆಯನ್ನು ಸಾರ್ಥಕಗೊಳಿಸಿಕೊಳ್ಳಲು ಈ ಚಾಣಕ್ಯ ತಂತ್ರ ಹೂಡಿದ್ದಾರೆ. ಇಷ್ಟೆಲ್ಲಾ ಮಾತಿಗೆ ವಿರುದ್ಧವಾಗಿ ನಾನೆನ್ನಬೇಕಾಗಿ ಬಂತು. ಇದರಲ್ಲಿ ಪಾಲು ಹೇರಳವಿದೆ. ಹೇಗೆಂದರೆ ಒಂದು ಜಾತಿಯವರು ಈ ಮಾಲು ಹೇರಾಟವನ್ನು ಬಹಳವಾಗಿ ತಮ್ಮದೆ ಸ್ವತ್ತಾಗಿ ಮಾಡಿಕೊಂಡಿದ್ದರಿಂದ ಅವರಿಗೆ ನೀರು ಕುಡಿಸಲು ಮತ್ತೊಂದು ಜಾತಿಯವರ ಗುಂಪು ಹೂಲಿ ಎಬ್ಬಿಸಿ, ಶಾಸನಸಭೆಯವರೆಗೆ ಮುಟ್ಟಿಸಿ ಕಟ್ಟಾ ಬಂಡವಾಲಶಹರಿದ್ದರೂ, ಕಾರ್ಯಸಾಧಕ ಸಾಮ್ಯವಾದಿಗಳಾಗಿ ಈ ರೀತಿ ಹೋಟೆಲು ಚಹ ಹಾಳಾಗುವಂತೆ ಮಾಡಿದ್ದಾರೆ!

ಪರೋಪಕಾರ ರೂಪಾಯ,
ಪಾಪಾಚಾರ ಗುಣಾತ್ಮನೇ!
ನಮೋ ಜಾತ್ಯಂಧ ದೇವಾಯ
ಕ್ಷೀರಸಾಗರ ಶತ್ರುವೇ!

***

ಬಟಾಟೆಯ ಪಲ್ಯವನ್ನು ಬಹಳವಾಗಿ ಮಾಡಿ ಚೆಲ್ಲಿಬಿಟ್ಟಳೆಂದು ಬಸವಯ್ಯ ದೂರು ಕೊಟ್ಟ ತನ್ನ ಹೆಂಡತಿಯ ಮೇಲೆ. ಅವನು ಮಾತು ಮುಗಿಸುವುದರೊಳಗೇ ಬಸಕ್ಕ ಬಾಯಿ ಹಾಕಿದಳು. "ಅಲ್ಲಾ, ಶಿವಾ... ನಾನು ಇಬ್ಬರಿಗೂ ತಿನ್ನಾಕ ಪಾಡಾಗ್‌ತೈತಿ ಅತ ವಸಿ ಜಾಸ್ತಿ ಮಾಡಿದ್ದೆ. ಮುಚ್ಚಿಟ್ಟಿದ್ದರೆ ಕಾಮಿ ಬಂದು ತಿಂದುಕೊಂಡು ಹೋಯಿತು. ಅದರ ಎಂಜಲಾ ಯಾರು ತಿಂತಾರಂತ ಒಕ್ಕೊಟ್ಟೆ. ಇದಕ್ಕ ಯಾರಾರ ಏನ್ ಮಾಡ್‌ತಾರ?" ಅಂದಳು. ಈ ಶರಣಶರಣೆಯರ ಹುಸಿಜಗಳ ನಿಜವಾದ ಜಗಳವಾಗದಂತೆ ನೋಡಿಕೊಳ್ಳುವ ಭಾರ ನನ್ನ ಮೇಲೆ ಬಿತ್ತು. ಹಿಂದುಸ್ಥಾನದಲ್ಲಿ ಆಹಾರದ ಕೊರತೆ ಇರುವಾಗ, ಸಾವಿರಾರು ಜನರು ಉಪವಾಸ ಸಾಯುತ್ತಿರುವಾಗ, ಈ ಪ್ರಕಾರ ಯಾರಿಗೂ ಇಲ್ಲದ ಹಾಗೆ ಚಲ್ಲಿಕೊಟ್ಟದ್ದು ನ್ಯಾಯವಲ್ಲ. ಇದರಿಂದ ಬಸಕ್ಕ ತಪ್ಪಿತಸ್ಥೆ ಎಂದೆ. ಇದನ್ನು ಕೇಳಿ ಬಸವಯ್ಯ ಮೀಸೆ ಹುರಿಮಾಡಿದ ತನ್ನ ಪಂಥ ಗೆದ್ದಿತೆಂದು. ಆದರೆ ಮತ್ತೆ

ಹೇಳಿದೆ – "ಅಲ್ಲ, ಹಿಂದೂಸ್ತಾನದ ಹೆಂಗಸರಿಗಿಂದು ಗಂಡಸರು ಸರಿಯಾದ ವಿದ್ಯಾಭ್ಯಾಸ ಕೊಟ್ಟಿಲ್ಲ. ಆದುದರಿಂದ ಅವರಿಗೆ ಜಗತ್ತಿನ ಇಲ್ಲವೆ ತಮ್ಮ ಸುತ್ತಮುತ್ತಲಿನ ಪರಿಸ್ಥಿತಿಯ ಅರಿವಾಗುವ ಬಗೆ ಹೇಗೆ? ಅವರಪ್ಪ ವಿದ್ಯಾಭ್ಯಾಸ ಮಾಡಿಸದಿದ್ದ ತಪ್ಪಿಗೆ ಗಂಡನೂ ಕೋಪದಿಂದ ಸುಮ್ಮನಿದ್ದರೆ ಸಂಸಾರ ಸಾಗುವುದು ಹೇಗೆ? ಅಂದ ಮೇಲೆ ಅದರಲ್ಲಿ ಬಸವಯ್ಯನದೂ ತಪ್ಪಿದೆ" ಎಂದೆ. ಅದನ್ನು ಕೇಳಿ ಬಸಕ್ಕನ ಮುಖದಲ್ಲಿ ಮುಗುಳ್ನಗೆ ಮೂಡಿತು. ಅಲ್ಲಪ್ಪಾ, ಈ ಪರಿಸ್ಥಿತಿ ನಿನ್ನ ಸಂಸಾರದಲ್ಲಿ ಮಾತ್ರವಲ್ಲ, ನಮ್ಮ ರಾಷ್ಟ್ರದ ಪ್ರತಿಯೊಂದು ಮನೆಯಲ್ಲೂ ಇದೆ. ಎಲ್ಲರ ಮನೆಯ ದೋಸೆಯೂ ತೂತೇ ಎಂದೆ. ಅಷ್ಟರಲ್ಲಿ ಹಳ್ಳಿಯ ಹುಡುಗಿಯೊಬ್ಬಳನ್ನು ಕಟ್ಟಿಕೊಂಡಿದ್ದ ಪುಟ್ಟಣ್ಣ ದನಿಯೆತ್ತಿದ. ಎಲ್ಲರ ಮನೆಯ ದೋಸೆ ತೂತಾದರೆ ನಮ್ಮ ಮನೆಯ ಕಾವಲಿಯೇ ತೂತಾಗಿದೆಯೆಂದ. ಅದೇಕೋ ಅಂತ ಕೇಳಿದರೆ, ಪಾಠ ಹೇಳಿಕೊಟ್ಟರೂ ತಲೆಗೆ ಹಿಡಿಯಲಿಲ್ಲ ಅಂದು ಅತ್ತ. ಕಲಿಕಾಲ! ಹೆಂಗಸರಿಗೆ ಆರ್ಥಿಕ ಸ್ವಾತಂತ್ರ್ಯ ಬೇಕಂತೆ, ಅದರ ಜವಾಬ್ದಾರಿ ಮಾತ್ರ ಬೇಡ ದುಡ್ಡು ಬೇಕು, ದುಡಿತ ಬೇಡ ಎಂದು ಗೊಣಗಿದ. ಸ್ವಲ್ಪ ತಡೆ ಎಂದೆ. ದಿನಾ ಇಲ್ಲಿಗೆ ನಿನ್ನ ಧರ್ಮಪತ್ನಿಯನ್ನು ಕರೆದುಕೊಂಡು ಬಾ. ನನ್ನ ಎದುರಿಗೇ ಪಾಠ ಹೇಳು. ಆಗ ಸರಿಹೋಗುತ್ತದೆ ಎಂದೆ.

ಮಾನವನಿಗೆ ಮಾನವೊಂದು ಅಡಿಕೆಯಷ್ಟಿದೆ
ಎಲ್ಲರೆದುರು ಅದನು ಮುಚ್ಚಿಕೊಂಬ ಹುಚ್ಚಿದೆ
  ಅದರಲ್ಲೂ ಹುಡುಗಿಯರಿಗೆ ಮತ್ತು ಹೆಚ್ಚಿದೆ!
  ಅದನು ಬಳಸಿಕೊಂಡು ಹುಡುಗ ಬಾಳು ಬೆಚ್ಚದೆ!
ಆರು ದೂರಿದರೇನು, ಆರು ಬಯಸಿದರೇನು,
ದೂರವಾಗದು ದುಃಖ ತರುಣಜನಕೆ!
  ಮಾರಾರಿ ಮನ್ಮಥನ ಸುಟ್ಟರೂ ಕೋಪದಲಿ,
  ಗೌರಿಗರುಹಿದ ಪ್ರೇಮವೊಲಿದು ತಪಕೆ!
ನೀನು ಸತ್ತು ಸಗ್ಗ ಸೇರದಾರು ಸತ್ತರೇನಲಾ?
ಹೋಗು ಹುಡುಗ, ಸತಿಗೆ ಪಾಠ ಹೇಳು ನಾರಿವತ್ಸಲ!

***

ಜನವರಿ ಒಂದರಿಂದ ಮುಂಬೈ ಪ್ರಾಂತ್ಯದಲ್ಲಿ ನಿಯಂತ್ರಣ ರದ್ದಾಗುವುದೆಂಬುದನ್ನು ಕೇಳಿ ಸಂಬಳದಾರರು ಸೊರಗಿಹೋಗಿದ್ದಾರೆ. ವ್ಯಾಪಾರಿಗಳು ಮೀಸೆ ಹುರಿಮಾಡುತ್ತಿದ್ದಾರೆ. ಕಳ್ಳಪೇಟೆ ಹೋಗಿ ದರೋಡೆಪೇಟೆ ಬರಲಿದೆ, ಎಂದು ಅವರು ಹಿಗ್ಗಿದ್ದಾರೆ. ನಿಷ್ಪಾಪರಾದ ಜನರನ್ನು ಹಿಂಸೆಗೆ ಗುರಿಪಡಿಸಿದೆವೆಂಬ ಅಪರಾಧಕ್ಕೆ ಗುರಿಯಾದ ನಾವು –

ಗುಂಡಾಜನಗಳು, ಆ ಪಾಪ ತೊಳೆಯುವುದಕ್ಕಾಗಿ ಧಾನ್ಯವನ್ನು ಸಂಗ್ರಹಿಸಿಕೊಂಡು ಯದ್ವಾತದ್ವಾ ಬೆಲೆಯೇರಿಸಿ ಮಾರುವ ವಣಿಗ್ವರ್ಗದ ಮೇಲೆ ಕೊಡಲಿ ಎತ್ತದಿದ್ದರೆ ನಮ್ಮ ಜಾತಿಗೇ ನಾವು ಕಲಂಕಪ್ರಾಯರಾದೇವು ಎಂದು ಮೊನ್ನೆ ನಡೆದ ಗುಂಡರ ಸಭೆಯ ಅಧ್ಯಕ್ಷಪೀಠದಿಂದ ಪುಂಡತನದಲ್ಲಿ ವಿಕ್ಟೋರಿಯಾ ಕ್ರಾಸ್ ಪಡೆದ ಗುಂಡೋದರ ನಾಯಕನು ಅಪ್ಪಣೆ ಕೊಡಿಸಿದನು. ಈ ಸುದ್ದಿ ನಮ್ಮ ಶರಣ ಸಾಹಿತ್ಯಕ್ಕೆ ಸೇರಿ ಸಿದ್ಧರ ಸಭೆಯಲ್ಲಿ ನಿನ್ನೆ ಪ್ರಕಟವಾಯಿತು. ಬಹುಮತವು ಗುಂಡರನ್ನು ವಿರೋಧಿಸಿತು. ಗಾಂಧಿ ಹೇಳಿದಂತೆ ನ್ಯಾಯವಾದ ರೀತಿಯಿಂದ ತಾವು ಕಾಳುಗಳನ್ನು ಮಾರುವೆವೆಂದು ತಮ್ಮೆಲ್ಲ ಜನರು ವಿಶ್ವಾಸವಿಡಬೇಕೆಂದು ಅನೇಕ ವಣಿಕ್‌ಪುತ್ರ ಶರಣರು ಬೊಬ್ಬಿರಿದರು. ಎಲ್ಲರೂ ಸಿದ್ಧಪೀಠದ ನಿರ್ಣಯವನ್ನು ಎದುರು ನೋಡುತ್ತಿದ್ದರು. “ಶಿವಾಯನಮಃ ಎಂದರೆ ಸತ್ಯಕ್ಕೆ ಸಾವಿಲ್ಲ, ಪ್ರಾಮಾಣಿಕರಿಗೆ ಅಂಜಿಕೆಯಿಲ್ಲ. ವ್ಯಾಪಾರಿಗಳು ಪ್ರಾಮಾಣಿಕರಾದರೆ ಗುಂಡರು ಗುಂಡರಾಗಿ ಉಳಿಯರು. ಇಲ್ಲದೆ ಹೋದರೆ ಸರಕಾರವು ದಂಡನೀತಿಯನ್ನೂ, ಸಾಮಾನ್ಯರು ಗುಂಡನೀತಿಯನ್ನೂ ಅನುಸರಿಸಿ ಪ್ರಜಾಸತ್ತೆಯ ಸತ್ವವನ್ನು ಪ್ರದರ್ಶಿಸಿ ಪ್ರಜಾಪೀಡಕರಿಗೆ ಬುದ್ಧಿಗಲಿಸದಿರರು. ಗುಂಡರ ಹಾವಳಿ ಅರಾಜಕತೆಯೆಂದು ಹೇಳುವುದು ಇಂತಹ ಸಂದರ್ಭಗಳಲ್ಲಿ ತಪ್ಪಾಗುವುದು. ಜನಮತವೇ ಜನಾರ್ದನ ಮತ. ಮಹಾಜನರ ಮಾರ್ಗವೇ ಮಹಾಮಾರ್ಗ, ಪ್ರಜೆಗಳೇ ಪ್ರಭುಗಳು. ಹೀಗಿರುವುದರಿಂದ ಅಬದ್ಧ ಮಾರ್ಗಾಚರಣೆಯಲ್ಲಿ ಜನರು ಪ್ರಕೃತಿ ಸಹಜವಾದ ನಿಸರ್ಗ ಪ್ರೇರಿತವಾದ ಪ್ರವೃತ್ತಿಯಂತೆ ನಡೆದು ನ್ಯಾಯವನ್ನು ಕಸಿದುಕೊಳ್ಳುತ್ತಾರೆ. ಇದನ್ನರಿತು ವ್ಯಾಪಾರಿಗಳು ಎಚ್ಚರಿಕೆಯಿಂದ ವರ್ತಿಸತಕ್ಕದ್ದು. ನಗ್ನ ಸತ್ಯದ ಕಠೋರ ಪ್ರಹಾರದಿಂದ ಉಳಿಯಬೇಕೆಂಬವರಿಗೆ ಇದು ಅಗತ್ಯವಾದುದು.” ಈ ನಿರ್ಣಯದಿಂಂದ ವ್ಯಾಪಾರಿವರ್ಗದಿಂದ ತುಂಬಿದ ನಮ್ಮ ಸಭೆಯು ಸ್ತಂಭೀಭೂತವಾಯಿತು. ಆದರೆ ನನ್ನ ನೆಚ್ಚಿನ ಶರಣರು ಸಂತುಷ್ಟರಾದರು.

ಗುಂಡರೇ ಉದ್ದಂಡ ವೀರರು ದೇಶ ಸೇವಕರಾದರೆ,
ಗಂಡರೇ ಗೌರವವಿಹೀನರು ನಾಡನೆದುರಿಸಿ ನಿಂತರೆ!
ಪಾಪ ಪರ್ವತಶೃಂಗವೇರಲು ತಾಪಸಿಯು ತಲ್ಲಣಿಪನು,
ಶಾಪವೇ ಸಂತ್ರಸ್ತರಿಗೆ ತಾ ಪಾಶುಪತವೆಂದೆನಿಪುದು॥
ಕೇಳಿರಿ ಶರಣರಿರಾ,
ಕಲಿ–ಕಾಲದ ತತ್ವಗಳಾ,
ಕೈ ಸೋತಿಹ ನರನು,
ಕದ್ದರೆ–ಕಾಯಿದೆಯೇ ಅಹುದು!
ಬಹುಜನರೆದುರಿಸಿದ
ಗಂಡನು–ದಂಡನೆಗರ್ಹನಲಾ;

ನಗ್ನ ಸಮಾಜದಲಿ,
ಬಟ್ಟೆಯ–ನುಟ್ಟವ ಭಂಡನಲಾ!
ಮೆಟ್ಟಾದರು ಕೂಡ,
ತಲೆ ಮೇ–ಲಿಟ್ಟರೆ ಮುಂಡಾಸು,
ಕೆಟ್ಟಾತನು ಕೂಡ,
ಪರಹಿತ–ಗೈದರೆ ಪುಣ್ಯಾತ್ಮ!

***

ಒಂದೇ ಮಾತಿನಲ್ಲಿ ಹೇಳುವುದಾದರೆ ಬಂಡವಾಳಶಾಹಿ ನಿರ್ಮೂಲವಾಗಬೇಕು – ಎಂದು ಬಸವಣ್ಣ ಭಕ್ತ ಸಾಮ್ಯವಾದದ ಶಂಖನಾದ ಮಾಡಿಯೇ ಬಿಟ್ಟ ಇಂದಿನ ಸಭೆಯಲ್ಲಿ. ಅರೆ! ಕೋಟ್ಯಧೀಶ್ವರನ ಪುತ್ರ ಈ ರೀತಿ ಗರ್ಜಿಸುವುದೇನು! ಎಂದು ಶರಣವೃಂದ ಬೆಪ್ಪಾಯಿತು. ಮುಂದೆ ಭಕ್ತ ಮುಂದುವರಿಸಿದ – ಸಾಮ್ಯದ ಅರ್ಥ ಅನೇಕರಿಗಿಂದು ತಿಳಿಯದು. ಅದೇನೆಂದರೆ, ದೈವೀಸಾಮ್ಯ – ಐದು ಬೆರಳುಗಳು ಸಮನಾಗಿ ಸೇರಿ ಕೈಯೆನಿಸಿ ಕರ್ತವ್ಯ ನಿರ್ವಹಿಸಿದಂತೆ! ಸಾಮ್ಯವೆಂದರೆ ಎಲ್ಲ ಬೆರಳುಗಳನ್ನೂ ಒಂದೇ ಅಳತೆಗೆ ಕತ್ತರಿಸುವುದಲ್ಲ – ಎಂದೊಡನೆ ಸಭೆ ಅಚ್ಚರಿಪಟ್ಟರೂ, ನಿರುತ್ತರ ಮೌನ ತಾಳಿತು. ಅಷ್ಟರಲ್ಲಿ ಅಕ್ಕ ಮಹಾದೇವಿಯ ಭಕ್ತನೆದ್ದು ನಿಂತ. ಮೊದಲಿನಾತ ಹೇಳಿದ್ದು ಅಪಲಾಪ. ಸಾಮ್ಯವೆಂದರೆ ಆರ್ಥಿಕ ಸಾಮ್ಯ. ಅರ್ಥ (ರೊಕ್ಕ) ದೈವಕೃತವಲ್ಲ, ಮಾನವಕೃತ. ಅದನ್ನು ಸರಿಪಡಿಸಲು ಮಾನವನಿಗೆ ಹಕ್ಕಿದೆ. ನಿಃಸ್ವಾರ್ಥಿಯೆಂದೂ ಅರ್ಥಸಾಮ್ಯಕ್ಕಂಜನು. ಐದು ಬೆರಳುಗಳ ಉದ್ದಳತೆ ಸರಿಮಾಡ ಹೋಗುವುದು ಮೂರ್ಖತನವಾದರೂ, ಅವಷ್ಟಕ್ಕೂ ಆಯಾ ಪ್ರಮಾಣದಂತೆ ಒಂದಕ್ಕೂ ಶೋಷಣೆಯುಂಟಾಗದಂತೆ ತಾವು ತಿಂದ ಆಹಾರ ಸತ್ವವನ್ನು ದೇವರು ಹೇಗೆ ಒಯ್ದು ಮುಟ್ಟಿಸುವನೋ, ಹಾಗೇ ದುಡಿತದಲ್ಲಿ (ದೈಹಿಕ ಇಲ್ಲವೆ ಮಾನಸಿಕ) ಸ್ಪರ್ಧೆ ನಿಲ್ಲಿಸಿ ಯಥಾಶಕ್ತಿ ಉತ್ಪಾದನಕ್ಕೆ ಯಥಾ ಯೋಗ್ಯ ಫಲ ದೊರಕಿಸುವುದೇ ಸಾಮ್ಯ – ಎಂದು ಬೊಬ್ಬಿಟ್ಟ. ಆ ಕೂಡಲೆ ಸಭೆ ಎರಡು ತಂಡಗಳಾಗಿ ಒಡೆದು ಕೂಗಾಟಕ್ಕಾರಂಭಿಸಿತು. ಅಷ್ಟರಲ್ಲಿ ಹಾಂ! ಎಂದು ತರ್ಜನಿಯನ್ನು ಎತ್ತಿದೆ. ಪುನಃ ಶಾಂತಿಯುಂಟಾಯಿತು. ಅನಂತರ ವ್ಯಾಖ್ಯಾನಿಸಿದೆ – ಸಾಮ್ಯಕ್ಕಂಜುವವ ಉದಾರಿಯಲ್ಲ; ಉದಾರಿಯಾಗದವನಿಗೆ ಧನಿಕನಾಗಿ ಉಳಿಯಲು ಹಕ್ಕಿಲ್ಲ. ಹೆದರಿದಷ್ಟೂ ಸಾಮ್ಯ ಮೈ ಮೇಲೇರಿ ಬರುತ್ತದೆ. ಇದು ಜಗತ್ತಿನಲ್ಲಿಂದು ನಡೆವ ರೀತಿ. ಉದಾರಿ ಸಾಮ್ಯಕ್ಕಂಜನು. ಅಂಥವನನ್ನು ಸಾಮ್ಯ ಪ್ರತಿಭಟಿಸದು; ಹತ್ತಿರ ಸುಳಿಯದು. ಮಾನವನ ಪರಸ್ಪರ ತಿಳುವಳಿಕೆಯಲ್ಲಿ ಸಾಮ್ಯವುಂಟಾದಾಗ ನಾಗರಿಕತೆ ಕ್ಷಿತಿಜಕ್ಕೇರುವುದು. ವೈವಿಧ್ಯ, ವೈಷಮ್ಯಗಳು ನಿಸರ್ಗ ನಿರ್ಮಿತ. ಆದರೆ ನ್ಯಾಯಾನ್ಯಾಯ ವಿವೇಕವು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡಿದ ಸಂಜೀವಿನಿ. ಆ ಸಂಜೀವಿನಿಯ ಸಾರವೇ ಅರ್ಥಸಾಮ್ಯ. ಇಕೋ ದಾಸರೆನ್ನುತ್ತಾರೆ –

ಧನಿಕನಾಗುವುದೊಂದು ಪುಣ್ಯ। ಜನ
ಜನಕೊಲಿದೀಯುವ ಬುದ್ಧಿಯೆ ಗಣ್ಯ॥
ಅನುಮಾನಪಡುವಾತ ಸತ್ತ। ದಿನ
ದಿನವು ಚಿಂತೆಗೆ ತುಪ್ಪವೆರೆವುದುವಿತ್ತ ॥೧॥
ಕೋತಿ ರತ್ನವ ಕೊಂಡ ಹಾಗೆ। ಆದ
ಹೂತಿಟ್ಟು ಸಿರಿತನ ಮೆರೆಯುವ ನರಗೆ
ಭೀತಿ ಬಹಳ ಸಾಮ್ಯಜಗದ। ನವ
ನೀತಿಯ ತಿಳಿಯದ ನರ ಮನೆಹೊರಗೆ ॥೨॥
ನಿನ್ನದೆಲ್ಲವು ತನ್ನದೆಂಬ। ಹಸಿ
ಅನ್ಯಾಯದಾತನಿಗಿಂದಿದೆ ಪೆಟ್ಟು।
ಜನ್ಮದಿ ದೊಡ್ಡವನೆನಿಪ। ಕ್ರೂರ
ಕರ್ಮಿಯ ಹೂಳುವರರಿ ನೀನೀಗುಟ್ಟು ॥೩॥

***

"ಸಂಸ್ಕೃತದಲ್ಲಿ ಶೂದ್ರಕ ಬರೆದ ಮೃಚ್ಛಕಟಿಕದಲ್ಲಿ ಶಕಾರನೊಬ್ಬ ವಿಕಾರವಾದ ಪಾತ್ರ. ಈ ಕಲಿಯುಗದಲ್ಲಿ ನನ್ನ ಸತೀಶಿರೋಮಣಿಯೊಬ್ಬಳು ಜೀವಂತ ಶಕಾರಿಯಾಗಿ ಬಿಟ್ಟಿದ್ದಾಳೆ. ಅಲ್ಲ, ನೀವು ಬಂದರೂ ನನಗೆಚ್ಚರಾಗಲಿಲ್ಲ, "ಸತ್ತ ಹೆಣದ" ಹಾಗೆ ಬಿದ್ದಿದ್ದೆ ಎಂದು ಪ್ರಾರಂಭಿಸಿದವಳು, "ತಲೆ ಕೆಟ್ಟು ಹುಚ್ಚಾದ" ರಾಮಣ್ಣನ ಕತೆ ತೆಗೆದು, "ಗಂಡ ಸತ್ತ ವಿಧವೆ"ಯಾಗಿ ಅವನ ಹೆಂಡತಿ ನರಳುತ್ತಿರುವುದನ್ನು ಹೇಳಿ "ಹೊತ್ತು ಮುಳುಗಿದ ಕತ್ತಲೆ"ಯವರೆಗೂ ಹರಟುತ್ತಿದ್ದಳು" – ಎಂದು ಶರಣನೊಬ್ಬ ತನ್ನ ಗೆಳೆಯನೊಂದಿಗೆ ಹೇಳಿ ತನ್ನ ಹೆಂಡತಿಯ ವಾಕ್ತ್ರತಾಪಕ್ಕೆ ಹಿಗ್ಗುತ್ತಿದ್ದ. ಅದನ್ನು ಕೇಳಿ ಹೀಗೆನ್ನಬೇಕಾಯ್ತು; ನಿನ್ನಂಥ ಹೆಣ್ಣು ಹುಡುಗರು ಹುಟ್ಟಿಯೇ ಹೀಗೆ "ಮೀಸೆ ಹೊತ್ತ ಗಂಡಸರ" ಮಾನ ಹೋಗುವ ಹಾಗಾಯ್ತು. ಕೇವಲ "ಕದ್ದು ಕಳ್ಳರಾಗಿ" "ಯುದ್ಧಕ್ಕಂಜುವ ಹೇಡಿ"ಯೆನಿಸಿದ ಜನ ಹೆಚ್ಚಾದುದರಿಂದಲೆ ಹಿಂದುಸ್ತಾನವಿಂದು "ಶಕ್ತಿಯಿಲ್ಲದ ದುರ್ಬಲ" ರಾಷ್ಟ್ರವಾಗಿದೆ.

ಹುಡುಗರಿಗೆ ಹುಡುಗಿಯರು ಬೇಕೆಂದಡಿಗಡಿಗೆ ಹಿಂದುಗಳು ನುಡಿದರು
ಹುಡುಗಿಯರನೀಹೊತ್ತು ಹಗೆಗಳು ಹೊತ್ತುಕೊಂಡೊಯ್ಯೆ।
ಎಡವಿ ಬೀಳುತ ಧಾವಿಸುವರೀ ನಡೆಗೆ ಭಾರತ ಜನಕ ನಾಚಿದ –
ನುಡಿಗೆ ಗಂಡಿನದಷ್ಟೆ, ಗುಂಡಿಗೆ ಗುಬ್ಬಿಗಂಜುವುದು॥

***

ಬೇಸಿಗೆಯಲ್ಲಿ ಒಣವೋಡ ಸುಳಿದರೆ ವಾತಾವರಣ ಅನಾರೋಗ್ಯವಾಗುವುದೆನ್ನುತ್ತಾರೆ ಹಿರಿಯರು – ಹಾಗಾಯ್ತು ನಿನ್ನೆ ತುಂಬ ಸೆಕೆ, ದುರ್ಜನರ ದರ್ಶನವಾದಷ್ಟು! 'ಅಪ್ಪಾ ಸಾಕು' ಎಂಬ ಉದ್ಗಾರ, ಮಂಟಪವನ್ನು ಪ್ರವೇಶಿಸುವಾಗ ಪ್ರತಿಯೊಬ್ಬನ ಬಾಯಿಂದ ಹೊರ ಬೀಳುತ್ತಿತ್ತು. 'ನನಗಿಂದು ಎಷ್ಟು ಜನ ಗಂಗಾಧರರ ದರ್ಶನ ದೊರಕಿತು!' ಎಂದೆ. ಸೆಕೆಯನ್ನು ಮೀರಿ ಅವರ ಮುಖ ಕಿಂಚಿದ್ವಿಕಸಿತವಾಯಿತು. ಸಿದ್ಧಪಾತ್ರದ ಉದಕಸೇವನವಾಗಿ ಕುಳಿತುದಾಯ್ತು.

ಲಿಂಗಪ್ಪನ ತೊಡೆಯಮೇಲಿದ್ದ ೨ ಹಾಳೆಯ ಒಂದು ಪತ್ರಿಕೆಯನ್ನು ಸಂಗಪ್ಪ ಎಳೆದುಕೊಂಡು ತಿರುಹತೊಡಗಿದ. 'ಏನೈತಿ ಇದರೊಳಗ? ಪೇಪರ್‌ನ್ಯಾಗ ಸುದ್ದಿ ಇರತಾವಪ, ಕತಿ, ಪದ, ಕಾಂಗ್ರೆಸು ಹಿಂತಾವ ಇರೋದು ನೋಡೀನ್ರಪಾ. ಇದೇನಿದ್ರಾಗ... ಶಾಸನ, ಆಸನ, ಏನೇನೋ ಬರದೈತಿ; ಅದರ್‌ಮ್ಯಾಕೆ ನಮ್ ಪೇಪರ್‌ನ್ಯಾಗ ಬಂದ ಏಕೀಕರಣ ಪಾಕೀಕರಣದ ಹಳೇಸುದ್ದಿ ಇಲ್ಲಿ ಅಲ್ಲಿ ಕದ್ದು ಹಾಕ್ಯಾರ. ಬೆಂಗಳೂರಿನ್ಯಾಗ ಪರಿಷತ್ತು ಅಂತ ಐತಿ, ಅದು ಇದನ್ನ ಹೊಂಡಸ್ತತಿ ಅಂತಾರಲ್ಲಾ – ಅದು ಖರೆವಾದ್ರ ಇರೋದ್ಹಿಂಗೇನ?' ಎಂದು ಸಂಗಪ್ಪನ ರಾಗಯೆದ್ದಿತು. ನಾನೆಂದೆ – "ದಿನ ಹೋದಹಾಗೆ ಹಿಂದುಸ್ಥಾನದ ಮಂದಿ ಹಿಂದುಸ್ಥಾನದವರಲ್ಲವಾಗುತ್ತಾ ಹೋಗುವಂತೆ ತೋರುತ್ತದೆ. ನೀನು ಯಾಕೋ ಹಾಗೇ ಆಗುತ್ತಿರುವಂತೆ ಕಾಣುತ್ತದೆ. ಅದಿಲ್ಲದಿದ್ದರೆ ಹಿರಿಯರಾಜ್ಞೆಯೆಂದರೆ ವೇದಕ್ಕಿಂತ ಮಿಗಿಲೆಂದು ಹಿಂದುಸ್ಥಾನದ ಹಿರಿಯರು ಜನಗಳಿಗೆ ಕಂಠಪಾಠ, ಹಸ್ತಪಾಠ, ಮಾಡಿಸಿರುವಾಗ ನಾಡಿನ ಹಿರಿಯರು ನಡೆಸುವ ಪರಿಷತ್ತಿನ ಸಾಪ್ತಾಹಿಕದ ಮೇಲೆ ಟೀಕೆ ಮಾಡುವುದೆಂದರೇನು? ಎಂಥ ಕಲಿತ ಬ್ರಾಹ್ಮಣನ ಮನೆಯಲ್ಲಾದರೂ ಹೆಂಗಸರಿಗೆ ಮಂತ್ರ ಬರುತ್ತದೆಯೇ? ತಿಳಿಯುತ್ತದೆಯೇ? ಹಾಗೇ ನಿಮ್ಮಂಥವರು ಎಂದಿಗಾದರೂ ಅಸಂಸ್ಕೃತರೇ. ಎಲ್ಲರಿಗೂ ಎಲ್ಲವನ್ನೂ ಯಾವಾಗಲೂ ತಿಳಿಸಿ ಹೇಳಲು ಸಾಧ್ಯವಿಲ್ಲ, ದೊಡ್ಡವರು ಬರೆದದ್ದರಲ್ಲಿ ಏನೋ ಮಹತ್ವವಿರಬೇಕೆಂದು ಸುಮ್ಮನೆ ಕುಳ್ಳಿರಬೇಕು"

ಈ ಮಾತನ್ನು ಕೇಳಿದೊಡನೆ ಸಭೆಯಲ್ಲಿ ಮತ್ತೆ ಸೆಕೆಯ ಸಂಚಾರವಾಯಿತು. ಆಗ ನಕ್ಕೆ. ಸಭೆ ಎದೆ ಹಗುರಾದ ಮುಖಮುದ್ರೆಯನ್ನು ತೋರಿತು. ಹೇಳಿದೆ –

'ದುಡ್ಡನ್ನು ಎಲ್ಲರಿಂದಲೂ ಕೇಳುತ್ತಾರೆ. ಎಲ್ಲೋ ಕೆಲವರಿಗೆ ಮಾತ್ರ ಹಿತವೆನಿಸುವ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳುತ್ತಾರೆ – ಪರಿಷತ್ತಿಗರು! ಈ ಪತ್ರಿಕೆ ಹಿಡಿದುಕೊಂಡು ಹೋದರೆ ಇದನ್ನು ತೆಗೆದುಕೊಂಡು ಒಂದು ಮುಷ್ಟಿ ಮಂಡಕ್ಕಿಯನ್ನು ಕೂಡ ಯಾವ ವ್ಯಾಪಾರಿಯೂ ಹಾಕನು. ಇದು ಅತಿ ಬುದ್ಧಿವಂತರ ಕಾರ್ಯಕೌಶಲ!

ಏರಿಸಿ, ಹಾರಿಸಿ, ಕನ್ನಡದ ಬಾವುಟ,
ಗದ್ದಲಿಸಿ, ಸಭೆಗಳಲ್ಲಿ ಮಾಡಿಬನ್ನಿರಾವುಟ!
'ಏಳ್ ಕನ್ನಡತಾಯ್, ಬಾಳ್ ಕನ್ನಡ ತಾಯ್'

ಎಂದು ಕಾಗದದ ಅಷ್ಟದಿಕ್ಕಿನಲ್ಲಿ ಬರೆಯಿರಿ!
ದೂರಲೇನ್, ಆರು ವಿಷವಕಾರಲೇನ್
ಕನ್ನಡಿಗರೊಡತಿಗಾಗಿ ಬೇಡಿ ತನ್ನಿ ನಾಣ್ಯಮಂ,
ಕಾಡಿ ತನ್ನಿ ಕಾಸ್‌ಗಳಂ, ಲೆಕ್ಕಪತ್ರ ಪಟ್ಟಿಯಂ
ಜಾಣ್ಮೆಯಿಂದ ರಚಿಸಿ ಬಿಡಿ, ಕಾರ್ಯ ವೈವಿಧ್ಯಮಂ
ಬರಹದಲ್ಲಿ ಮೂಡಿಸಿ, ಸದಸ್ಯರನು ಕೂಡಿಸಿ,
ಕನ್ನಡ ನುಡಿ ಸೇವೆಯಾಯಿತೆನ್ನಬೇಕು ನಿಕ್ಕುವಂ
ಸಿರಿಗನ್ನಡಂಗೆಲ್ಗೆ – ಹುರಿಗಡಲೆಯ ಮೆಲ್ಗೆ!

***

'ಹೈದರಾಬಾದಿನಲ್ಲಿ ಹಾಗಾಯಿತು, ಹೀಗಾಯಿತು.... ಅಂತ ಏನ್ರೀ ಇದು – ಇಡೀ ದಿನ ಪೇಪರ್ ತುಂಬ ಇದೇ ಕರಟ ರಗಳೆ! ಒಮ್ಮೆಗಿಲೆ ಹಿಂದುಸ್ಥಾನ ಸೈನ್ಯ ಕಳುಹಿಸಿ ಆ ಮೂರು ಕಾಸಿನ ರಜಾಕಾರರ ಗುಲಾಮನ್ನ ಮನೆಗೆ ಅಟ್ಟಬಾರದೇ' ಎಂದು ಕಾಂತಪ್ಪ ಶಾನಭಾಗ ಕೂತಲ್ಲೇ ಮೀಸೆ ಹುರಿ ಮಾಡಿದ – 'ಸಂಯುಕ್ತ ಕರ್ನಾಟಕ' ಓದಿ ಸಭಾಸದರಿಗೂ ಆ ಮಾತು ಅಹುದೆನಿಸಿರಬೇಕು, ಅವರು ಅದಕ್ಕೇ ತಮ್ಮ ಮೌನದ ಸಮ್ಮತಿಯನ್ನಿತ್ತಿದ್ದರು. 'ಊರ ಮೇಲೆ ಊರು ಬಿದ್ದರೆ ಶಾನುಭೋಗರದೇನು ಹೋಯಿತು?' ಎಂಬುದು ನಿಜಾಮಮಂತ್ರ. 'ಊರು ಎಂದರೆ ಉಪ್ಪಿನಮಿಡಿ ಮೂರು' ಎಂಬುದು ರಜಾಕಾರರ ನೀತಿ ಎಂದು ನಮ್ಮ ಗಾದೆಪ್ಪ ಒಗ್ಗರಿಸಿದ. ಸಿಡಿದೆದ್ದ. ವೀರಪ್ಪಣ್ಣನಂತೂ 'ನಮ್ಮ ಗಡಿಯಲ್ಲೆಲ್ಲ ಕೊಲೆ, ಸುಲಿಗೆ ಮಾಡುತ್ತಿರುವ ಆ ಬಡ್ಡಿಮಗನ್ನ ಎಷ್ಟು ದಿನ ಅಂತ ಹಾಗೇ ಬಿಡ್ತಾರೋ ಯಾರಿಗೆ ಗೊತ್ತು? ಮೊನ್ನೆ ನಮ್ಮೂರಿನಾಗ ಕವಣೆ ಏರಿಸಿದಿವಿ. ಹಾಂಗs ಇನ್ನು ಮ್ಯಾಲೆ, ರಾಮರಾಜ್ಯದ ಅಧಿಕಾರಿಗಳು ನಿದ್ರೆ ಮಾಡುತ್ತ ಕುಳಿತರೆ ರಾವಣ ರಾಜ್ಯದ ರಾಕ್ಷಸರಿಗೇನು ಅಡಚಣೆ? ಅವರು ನಡೆಸಿಯೇ ನಡೆಸುತ್ತಾರೆ ನಿಶಾಚರ ಲೀಲೆಯನ್ನು! ಎಂದ. ಆಗ ಅವರನ್ನು ಸಂತವಿಡಲು ಹೀಗೆಂದೆ –

ರಾಮರಾಜ್ಯದಲ್ಲಿ ಗಾಂಧಿ ಹಿಡಿದು ಜವಾಹರ ಮೊದಲ್ಗೊಂಡು ಸಾರಿದ್ದಾರಲ್ಲಾ – ಪ್ರತಿಯೊಬ್ಬನೂ ತಾನೇ ತನ್ನ 'ಆತ್ಮರಕ್ಷಣೆ' ಮಾಡಿಕೊಳ್ಳಬೇಕೆಂದು – ಕಾಮಕೋ ಚೋರ್, ಖಾನೇಕೋ ಹಾಜರ್. ಶತ್ರುಗಳನ್ನು ಪ್ರತಿಭಟಿಸಬಾರದಂತೆ. ಅದು ಸರಕಾರದ ಕೆಲಸವಂತೆ. ಅದನ್ನದು ಬಾಯಲ್ಲಲ್ಲದೆ ಕೈಯಲ್ಲಿ ಮಾಡಿದುದು ಅಪರೂಪ. ಆತ್ಮರಕ್ಷಣೆಗೆ ಅಹಿಂಸೆಯನ್ನು ಉಪಯೋಗಿಸಬೇಕು. ರಾಂ ರಾಂ ಅಂದುಬಿಟ್ಟರೆ ಎಲ್ಲ ಭಯ ರೋಗಾದಿಗಳು ನಾಶವಾಗುತ್ತವೆ. ಇವೇ ರಾಮರಾಜ್ಯದ ಸೌಕರ್ಯಗಳು! ಕಂದಾಯ ತನಗೆ ಬೇಕು, ಅಸ್ತ್ರಶಸ್ತ್ರ ತನಗೊಪ್ಪಿಸಬೇಕು. ರಕ್ಷಣೆಗೆ ಮಾತ್ರ ತಾನು ಸಿದ್ಧನಿಲ್ಲ. ಇದೇ

ಇಂದಿನ ಸರಕಾರದ ಗಂಡಸುತನ. ಹೀಗೇ ಮಾಡುತ್ತಾ ಹೋದರೆ ಅಂತ್ಯದಲ್ಲಿ ರಶಿಯ ಇಲ್ಲವೆ ಅಮೇರಿಕ ದೇಶವು ಭಾರತವನ್ನು ಗುಳಕ್ಕೆನಿಸುವುದರಲ್ಲಿ ಯಾರೂ ಅಡ್ಡ ನಿಲ್ಲಲಾರರು! ಅಯ್ಯೋ –

೧

ಷಂಡನಾದ ಗಂಡನನ್ನು ಕಂಡು ಬೆನ್ನು ಹಿಡಿದು ಹೋದ
ಪುಂಡೆ ಪರರ ಕೈಗೆ ಸಿಕ್ಕು ಕಳೆದುಕೊಂಡಳೆಲ್ಲವ।
ಹಿಂಡು ಜನರು ಷಂಡನಾಯಕರನು ನಂಬಿ ತಮ್ಮದನ್ನು
ಕಂಡು ಕಂಡು ಕಳೆದುಕೊಳ್ಳುತಿರುವರೀ ದಿನ॥

೨

ಸೂಳೆಗೇರಿಯಲ್ಲಿ ಹೋಗಿ ಸಾವಿರವನು ಕಳೆದುಕೊಂಡು
ಸುಬ್ಬಿಗಿಂತ ನಾಗಿ ಸತ್ಯವಂತೆಯೆಂದು ನಂಬಿಗ।
ಅಷ್ಟು ಬಿಡಿಸಿಕೊಳಲು ಹೆಣಗಿ ಕಷ್ಟಪಟ್ಟನಂತೆ, ಮೇಲೆ
ಹತ್ತು ಸಾವಿರವನು ಕೊಟ್ಟು ಓಡಿಬಂದ ಹಳ್ಳಿಗ॥

೩

ಮಂಗನೊಡನೆ ಕುರಿ ತನ್ನ ರೊಟ್ಟಿಯನು ಪಾಲುಮಾಡಿಕೊಳಹೋಗಿತ್ತು
ತನ್ನದೆ ಎಲ್ಲವು ಎಂದು ಮಂಗ ಅದ ಕಸಿದುಕೊಂಡು ಮೇಲೇರಿತ್ತು॥
ಏರಿಹೋದ ಮರದಾಣ್ಮ ರೊಟ್ಟಿಯನು ತಿನ್ನುತ ಹಲ್‌ಹಲ್ ಬಿಡುತ್ತಿತ್ತು
ಕೆಳಗಿನ ಕುರಿ ಬ್ಯಾಬ್ಯಾ ಎಂದೊದರುತ ಕಣ್ಣುಗಳನು ಬಿರುದೆರೆದಿತ್ತು।

***

'ಕರ್ನಾಟಕ ಏಕೀಕರಣ' ಅಂದರೊಂದು ಮಾರಿಯಾಗಿ ಬಿಟ್ಟಿದೆ ಇಂದು– ಎಂದು ಶಂಕರ ಲಿಂಗೇಗೌಡರ ಅಣ್ಣನ ಮಗನ ಅಳಿಯನೆಂದ. 'ಗಾಂಧಿ ನಿಧಿ, ಆ ನಿಧಿ, ಈ ನಿಧಿಯ ಜೊತೆಗೆ ಈ ಮಾರಿಯದೂ ಒಂದು ನಿಧಿಯಂತೆ. ಇದಕ್ಕೆಲ್ಲ ಹಣ ತೆತ್ತು ಹಗುರಾದರೆ ನಾಳೆ ನಿಧಿ ಕೂಡ್ಸೋ ಅಪ್ಗೋಳ್ಗೆ ಆರಾಮಾಕ್ಕೈತಿ – ಕುಂತು ಊಟ ಮಾಡೋದಕ್ಕೆ. ಬಿಕ್ಸಾ ಬೇಡೋರ‍್ಯಾಕೆ ಹಿಂಗs ನಿಧಿ ಕೂಡ್ಸಾಕ ಹೊಂಡಬಾರದು? ಅದು ನಾಗರಿಕ ತನsನಪಾ. ನಿಧಿ ಕೂಡ್ಸೋದು ನಾಗರೀಕ ಅದ, ಅದು ಯಾಕಾರೇ ಕೂಡಿಸಲಿ – ಆ ಮಾತು ಬ್ಯಾರೆ!' ತಿಪ್ಪಣ್ಣ ಶಾಸ್ತ್ರಿಗಳು ಅಷ್ಟು ಹೊತ್ತಿಗೆ ಪಂಚಾಂಗ ಎತ್ತಿ ಯುಗಾದಿ ಫಲ ಶುರು ಮಾಡಿಯೇ ಬಿಟ್ಟರು – 'ಅಸ್ಮಿನ್ ಅಂದರೆ ನಿಧಿ ಕೂಡಿಸುವುದು

ನಾಗರಿಕ ಧರ್ಮವಾಗುವುದು. ಕಾರಣ, ಶನ್ಯೈಶ್ಚರನು ನಿಧ್ಯಧಿಪತಿಯಾದದ್ದು ಶನ್ಯೈಃ ಶನ್ಯೈಃ ಮೆಲ್ಲಮೆಲ್ಲನೆ, ಚರನ್ ಚರಿಸುತ್ತ, ಶನಿಃ ಶನ್ಯೈಶ್ಚರನು, ಪ್ರತಿವ್ಯಕ್ತಿಂ ಪ್ರಪೀಡಯೇತ್.. ಪ್ರತಿಯೊಬ್ಬನನ್ನೂ ನಿಧಿಗಾಗಿ ಕಾಡಿಸ್ಯಾನು' ಎಂದುದಕ್ಕೆ ಸಭೆಗೆ ಸಭೆಯೇ ನಕ್ಕು ಅಲ್ಲಾಡಿ ಹೋಯಿತು. ಅಷ್ಟರಲ್ಲಿ ಬೀದಿಯ ದಾಸಯ್ಯನು ಮೇಲೆ ಬರುತ್ತಿರುವ ರವಿ ಕಿರಣಗಳೊಡನೆ ಸ್ಪರ್ಧಿಸುವ ತನ್ನ ತ್ರಿಪುಂಡ್ರವನ್ನು ಪ್ರದರ್ಶಿಸುತ್ತ ಶಂಖಕ್ಕೆ ಬಾಯಿ ಹಚ್ಚಿ ಒದರತೊಡಗಿದ–

ನಂಬದಿರು ಈ ದೇಹ ನಿತ್ಯವಲ್ಲ
ಅಂಬುಜಾಕ್ಷನಿಗಾಗಿ ನಿಧಿಯ ಸಂಗ್ರಹಿಸೋ ॥ಪ॥
ಬೇಡುವವ ನಾನಲ್ಲ। ನೀಡುವಳು ನೀನಲ್ಲ।
ಹಾಡುವವ ನಾನು ಆತನ ನಾಮವ।
ಕಾಡುಕಾಸನ್ನಾದ। ರಿತ್ತಲೆಸೆ ಒಡತಿ, ಆ
ಮೂಡುದೇವರ ನಿಧಿಗೆ ಒಪ್ಪಿಸುವೆನು ॥೧॥
ಗಾಂಧಿ ನಿಧಿ, ಬಾನಿಧಿ ನಿ।ರಾಶ್ರಿತರ ನಿಧಿಯೆಂದು,
ಕರ್ನಾಟಕೈಕ್ಯನಿಧಿಯೆಂದು ಮತ್ತೆ।
ಹಿಂದುಮುಂದಕೆ ತಿರುಹಿ। ಅದೆ ಹೆಸರು ಬೇಡುವರು
ಕೊಟ್ಟರಂಥವಗೆ ನೀನಪ್ಪೆ ಕತ್ತೆ ॥೨॥
ಬೆಟ್ಟದೊಡೆಯನ ಪಾದ। ಮುಟ್ಟಿ ಹೇಳುವೆ ತಾಯೆ,
ಎಷ್ಟು ಬಿಡಿಗಾಸಿದ್ದರೂ ಆತನ।
ದೃಷ್ಟಿಗರ್ಪಣ ಮಾಡಿ। ತತ್ಪ್ರಸಾದವನೆನ್ನ
ಹೊಟ್ಟೆಗೆಸೆಯುವೆ ಅನ್ನ ಪೂರ್ಣಮಾಡಿ॥೩॥
ಅನ್ನಕ್ಕೆ ನಿಧಿ ಕೂಡಿ । ಸವಲಕ್ಕಿಗೂ ಕೂಡಿ
ಅಪ್ಪಚ್ಚಿ ಪಾಯಸಂಗಳಿಗು ಮನುಜಾ।
ಅನ್ಯಾಯ ಗಿನ್ಯಾಯವಿಲ್ಲ ಲಂಗೋಟಿಗಾ।
ಸನ್ಯಾಸಿ ಕೂಡ ನಿಧಿಕೂಡಿಸುವನು ॥೪॥

***

ಮೂರು ಸಂಜೆಯ ಸಮಯ. ಸಾಧಾರಣ ನಿಶಃಬ್ದ. ಪಕ್ಕದ ಮನೆಯಿಂದ ಕೇಳಿ ಬರುತ್ತದೆ 'ಇವಳ ಸೇದಬೇಕೋ, ಇವಳ ತಟ್ಟಬೇಕೋ' ಮುಂತಾಗಿ ದೈವದ ಪಾತ್ರಿಯ ಗರ್ಜನೆ. ಅವನೊಂದು ಕೂಲೆ ಬಿಡಿಸುವ ಮಾಟ ಮಾಡುತ್ತಿದ್ದ. ಅವನ ದನಿಗೆ ದನಿ ಸೇರಿಸುತ್ತ 'ಇವರ ಕುಟ್ಟಬೇಕೋ, ಇವರ ಮೆಟ್ಟಬೇಕೋ' ಎನ್ನುತ್ತ ಗಂಗಾರಾಮ

ಪ್ರವೇಶಿಸಿದ. 'ಏನೋ ರಸಸಿದ್ಧಾ?' ಎಂದೆ. ಆದರೆ ಅವನೇನೂ ನಗೆಯಾಡುವ ಭಾವದಲ್ಲಿದ್ದಿಲ್ಲ. ಒಂದೇ ಸಲ ಸಿಡಿದೆದ್ದು ಹೇಳತೊಡಗಿದ – 'ಕನ್ನಡೇತರ ಭಾಷೆಯ ವಿವಿಧ ಉದ್ಯಮ ವ್ಯಾಪಾರಸ್ಥರು ಸ್ವಜಾತ್ಯನುಕೂಲ ಮತ್ತು ಕನ್ನಡ ನುಡಿ ಹುಟ್ಟು ಭಾಷೆಯಾಗಿರುವವರ ಪ್ರತಿಕೂಲ ಆಗುವಂತೆ ದೈನಂದಿನ ವ್ಯವಹಾರದಲ್ಲಿ ಪ್ರಕಟಪಡಿಸುವ ದುಸ್ಸಹವಾದ ಪಕ್ಷಪಾತ ಬುದ್ಧಿಗೆ ಏನು ಹೇಳಲಿ? ನಿನ್ನೆ ಪ್ರಯಾಣದಲ್ಲಿ ಅಂಥ ಅನುಭವ ನನಗಾಯಿತು. ಈ ರೀತಿಯ ಭೇದಮಾರ್ಗವನ್ನು ಇನ್ನಿತರ ಕೊಡು–ಕೊಳುಗಳಲ್ಲೂ ಕಾಣಬಹುದು. 'ಕರ್ನಾಟಕದಲ್ಲಿ ಬಂದು ನೆಲೆಸಿದ ಇತರ ಭಾಷೆಯ ಜನರು ಅಲ್ಪಸಂಖ್ಯಾತ ಭಾವನೆಯಿಂದ ಸ್ವಸ್ಥಾನ ರಕ್ಷಣೆಗಾಗಿ ಮೂಲ ನಿವಾಸಿಗಳಾದ ಕನ್ನಡಿಗರಿಗೆ ನಾನಾ ಕಾರ್ಯಕ್ಷೇತ್ರಗಳಲ್ಲಿ ಚಿಲ್ಲರೆಯಿಂದ ಮಹತ್ವದವರೆಗೆ ಕೊಡುವ ತೊಂದರೆಗಳನ್ನು ನಿಲ್ಲಿಸಲು ಉಪಾಯಗಾಣದೆ ಹೋಗಿರುವೆನಲ್ಲಾ?' ಇದರ ಅನುಭವ ತನಗೂ ಆಗಿದ್ದರಿಂದ ತಾನು ಹೀಗೆ ಹೇಳಬೇಕಾಯ್ತು! ಎಂದ ರಂಗಣ್ಣ – 'ಮೀಸೆ ಹೊಕ್ಕಿತೆಂದರೆ ಸಾಕು, ಬೆಕ್ಕು ಸರಾಗವಾಗಿ ಒಳಕ್ಕೆ ಬಂದುಬಿಡುತ್ತದೆ. ಬೆರಳು ಕೊಟ್ಟರೆ ಹಸ್ತ ನುಂಗುವುದೆಂದರೆ ಹೀಗೇ. ಉಂಡ ಮನೆಯ ಗಳು ಎಣಿಸುವ ಇವರ ಈ ಕ್ಷುದ್ರ ಬುದ್ಧಿಯನ್ನು ತೊಡೆದು ಹಾಕಲು ಒಂದೇ ಒಂದು ಮದ್ದಿದೆ. ನಗರಗಳನ್ನು ಅರ್ಥಾತ್ ನಗರಸ್ಥ ಸಂಸ್ಥೆಗಳನ್ನು ಕ್ರಮೇಣ ಇವರ ವರ್ಚಸ್ಸಿನಿಂದ ಹೊರಗೆಳೆಯತಕ್ಕದ್ದು. ಇದಕ್ಕೆ ಇನ್ನೊಂದು ಮಹೋದಾಹರಣೆ ಬೇಕೆಂದರೆ ಭಾರತದ ಕೆಲ ಮುಸಲ್ಮಾನ ಸಂಘಗಳ ವರ್ತನೆಗಳತ್ತ ಕೈಬೆರಳನ್ನು ನೀಡಬೇಕಾಗುತ್ತದೆ. ಕಣ್ಣು ತೆರೆದು ನೋಡಿ –

ಅಲ್ಪ ಸಂಖ್ಯಾಕರಲ್ಪತೆ ಮೆರೆಯಬೇಕು:
ಬೇಡಿಬೇಡಿದ ರಕ್ಷಣೆಗಳದಕೆ ಬೇಕು!
ಬಹುಜನರ ಬಹುಮಾನ ಬರಿದಾಗಬೇಕು,
ಇವರ ಗೌರವ ಹಿಮಾಲಯವಾಗಬೇಕು!
ನಿನ್ನ ಮನೆಯಲ್ಲಿರುವರು ಧನಿಯಾಗಬೇಕು,
ನೀನಿವರ ಕಾಲೊತ್ತಿ ಸಣ್ಣಾಗಬೇಕು!
ಬೇಕು ಬೇಕೋ ಬೇಕು, ಎಷ್ಟಾಗಬೇಕು?
ಕೊಟ್ಟುಳಿದುದೆಲ್ಲವನು ಕೊಟ್ಟೆ ಬಿಡಬೇಕು!

***

ಕರ್ನಾಟಕ ಏಕೀಕರಣ ಮುಂದಾಳುಗಳ ತಲೆಯಮೇಲೆ ವಜ್ರಾಘಾತ ಮಾಡಿಬಿಟ್ಟತೆಂದು ಎಲ್ಲೆಲ್ಲೂ ಹಾಹಾಕಾರವೆದ್ದಿರುವುದು ಇಂದು ನನ್ನ ಶ್ರುತಿಪಥಕ್ಕೆ ಬಂತು. ಬಂತು ಅಂದರೇನು, ತಂದು ಮುಟ್ಟಿಸಿದ ನಮ್ಮ ಕರಿಬಸಪ್ಪ. ಅವನ ಮುಖದ ಮೇಲೆ ಬಿಳಿ ಛಾಯೆ ಮೂಡಿ ಹೋಗಿತ್ತು. ಮಹಾಕವಿ ಯಾರಾದರೂ ಕಂಡಿದ್ದರೆ

ಅವನ ನಿರಾಶೆಯ ಬಿಳುಪನ್ನು "ಚಂದ್ರಿಕಾ ಸುಂದರೀ ವದನಾರವಿಂದ ಮಕರಂದ ಸುಧಾಕಿರಣ ಸ್ಯೂತ ಕಾಂಡಪಟ ಸದೃಶ" ಎಂದು ಬಣ್ಣಿಸದೆ ಬಿಡುತ್ತಿರಲಿಲ್ಲ. ಆದರೆ ಆಗ ಬೂದಿಬಡಕನಾದ ನಾನಲ್ಲದೆ ಮತ್ತಾರೂ ಅಲ್ಲಿ ಇರಲಿಲ್ಲ. ಆದರೆ "ಕುಮಾರ ಸಂಭವ"ದಲ್ಲಿ ಪರಮೇಶ್ವರನ ಮೈಬೂದಿ ರತಿವಿಲಾಸದಿಂದ ಸಮೆದು ದರ್ಪಣದಂತೆ ಮಿರುಗುತ್ತಿತ್ತೆಂದು ಬಣ್ಣಿಸಿದ್ದು ನೆನಪಾದ ಕೂಡಲೇ ಸ್ಫೂರ್ತಿ ಬಂದು ಆ ಕ್ಷಣದಲ್ಲಿ ನನ್ನ ಮೈಯ ಪ್ರತಿಯೊಂದು ಬೂದಿಯ ಕಣವೂ ಶಿವಗಣಗಳಂತೆ ಬೀಸುಗಾಳಿಗೀಡಾಗಿ ತಾಂಡವವಾಡತೊಡಗಿದವು. ಭಾಷಾನ್ವಯ ಪ್ರಾಂತರಚನೆಯಿಂದ ಹಿಂದುಸ್ಥಾನದ ಐಕ್ಯಕ್ಕೆ ಭಂಗ ಬಂದು, ಕೇಂದ್ರಸರಕಾರ ದುರ್ಬಲವಾಗಿ, ಪರದೇಶೀಯರು ದಂಡೆತ್ತಿ ಬಂದು ಯಾದವಿಯಲ್ಲಿ ತೊಡಗಿರುವ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಕಸಿದುಕೊಂಡು ಹೋಗುವಂತಾದೀತೆಂಬ ದರ್ ಸಮಿತಿಯ ವಾದ ಸರಣಿಗೂ, ಮಳೆಯಿಂದ ತಲೆಮರೆಸಿಕೊಳ್ಳಲು ಬಂದ ಕಾಕಕ್ಕ (ಗುಬ್ಬಕ್ಕನ ಮನೆಯಲ್ಲಿ) ಗೋಡೆಯ ಬದಿಯಲ್ಲಿ ಮಲಗೆಂದರೆ ಗೋಡೆ ಮೈಮೇಲೆ ಬೀಳುವುದೆಂದು, ಉಪ್ಪರಿಗೆಯ ಮೇಲೆ ಮಲಗೆಂದರೆ ಮಾಡು ತಲೆಯ ಮೇಲೆ ಉರುಳುವುದು ಎಂದು ಮುಂತಾಗಿ ಮಾಡಿದ ಹೆದರಿಕೆಯ ವಾದಸರಣಿಗೂ ವ್ಯತ್ಯಾಸವಿಲ್ಲ ಎಂದು ಶಿಷ್ಯಗಣ ತೀರ್ಮಾನಿಸಿತು. ಆದರೆ ಅವರಿಗೆ ಒಂದು ವಿಷಯ ಮಾತ್ರ ಹೊಳೆಯಲಿಲ್ಲ. ಅದು ತೃಣಲೋಷ್ಟಾಶ್ಮಕಾಂಚನ ಗ್ರಂಥದಲ್ಲಿ ಹೇಳಿದೆ –

ತೃಣದ ರಾಶಿಯ ಮೇಲೆ ಕಟ್ಟಿಗೆ
ಯೊಣಗಿಸಿರಲದ ತೆಗೆಯಬಾರದು
ತೆಗೆಯೆ ತೃಣಗಳು ಹಾರಿಹೋಹವು ಗಾಳಿಬೀಸಿದರೆ।
ಕಟ್ಟಿಗೆಯ ಮೇಲಿರುವ ಕಲ್ಲನು
ಎತ್ತಿದರೆ ಕಟ್ಟಿಗೆಗಳುರುಳ್ವವು
  ಹುಲ್ಲು ಕಟ್ಟಿಗೆಗಳಿಗೆ ಕೊಡಬೇಕೆಂತು ಸ್ವಾತಂತ್ರ್ಯ ॥೧॥
ಕಲ್ಲು ಕನಕಗಳೊಟ್ಟಿಗಿದ್ದರೆ
ಕಲ್ಲು ಎಂದದ ಕಳ್ಳನೊಯ್ಯನು,
ಕಲ್ಲಬೇರ್ಮಾಡಿದರೆ ಕನಕವ ಕೊಳ್ಳದಿಹರಾರು।
ಮಳ್ಳು ಕನ್ನಡರಾಂಧ್ರರಿನ್ನೂ
ಪೊಳ್ಳು ಮಹರಟ್ಟರಿಗೆ ಪ್ರಾಂತವ
  ಕೊಳ್ಳಿರೆನೆ ಭಾರತವ ಕಾಗೆಯು ಕಚ್ಚಿ ಹಾರಿಸದೆ ॥೨॥

***

ಮಾಬಾಪ್ ಸರಕಾರ ಅನ್ನಿಸಿಕೊಂಡಿದ್ದಕ್ಕೋಸ್ಕರ ಪ್ರಜೆಗಳ ರಕ್ಷಣಭರಣಗಳಿಗೆಂದು ರೇಷನ್ ಜಾರಿಮಾಡಲಾಗಿದೆ ಎಂದುದಕ್ಕೆ ಒಮ್ಮೆಲೇ ನೆಟ್ಟಗೆದ್ದು ನಮ್ಮ ಯೀರಬಸವ್ವ 'ರೇಶನ್ನಿನ ವಂಚನಾಪ್ರಪಂಚವನ್ನು ಒಮ್ಮೆ ಕಂಡೂ ಪುನಃ ಪುನಃ ಅದರ ಪೀಡಾಪ್ರತಾಪವನ್ನರಿತರೂ ಮತ್ತೆ ಈಗ ರೇಶನ್ ತಂದಿರುವುದು ರಾತ್ರಿ ಕಂಡ ಬಾವಿಗೆ ಹಗಲು ಹಾರಿಕೊಂಡಂತೆಯೇ ಸರಿ' ಎಂದು ಉದ್ಗರಿಸಿದಳು. ಆದರೆ ಅವಳಿಗೆ ಒಂದು ವಿಷಯ ಅಪರಿಚಿತವಿತ್ತು. ಅದನ್ನು ಎತ್ತಿ ಹೇಳಬೇಕೆಂದರೆ ಅದರ ಅರ್ಥವೇ ಹೊಳೆಯದೆನಿಸಿತು. ಅದೊಂದು ಗಹನವಾದ ರಾಜಕಾರಣದ ತತ್ವಸೂತ್ರ, ಚಾಣಕ್ಯ ಗೋತ್ರದಲ್ಲಿ ಹುಟ್ಟಿದವರ ತಗಣಿಯ ಬುದ್ಧಿಗಲ್ಲದೆ ಸಾಮಾನ್ಯ ಮೃತ್ಪಿಂಡಮತಿಗೆ ಗೋಚರವಾಗುವಂಥದಲ್ಲ ಈ ವಿಷಯ. ಶರಣರೆಲ್ಲರಿಗೂ ತಿಳಿಯಲೆಂದು ಕ್ಷುದ್ರರಾಕ್ಷಸನಾಟಕದಿಂದ ಈ ಭಾಗವನ್ನು ಓದಿ ಹೇಳಿದೆ.

ಭಾರತದ ಜನಸಂಖ್ಯೆ ಬಹಳವಾಗ್ಹೋಯ್ತು,
ಅದರಿಂದಲೇ ಇಂದು ಊಟಕ್ಕಿಲ್ಲಾಯ್ತು!
ಊಟಕ್ಕಿಲ್ಲದ ಜನದ ಜಂಭ ಹೆಚ್ಚಾಯ್ತು,
ಅದನಿಳಿಸಲಿಂದು ರೇಶನ್ನೆ ಬೇಕಾಯ್ತು!

ಮಕ್ಕಳನು ಹಡೆದವರು ನವನಂದರಲ್ತೆ
ಅವರ ರಾಕ್ಷಸತನವು ಹೆಚ್ಚಾಯಿತಂತೆ
ಅವರ ಬಂಧಿಸಲು ರೇಶನ್ ಹಗ್ಗ ಬೇಕು!
ಚಾಣಕ್ಯ ಸರಕಾರಕೆನ್ನಿರೊ ಪರಾಕು!

ಐರೋಪ್ಯ ಪದ್ಧತಿಯ ಆಡಳಿತ ಬೇಕು
ಕೈಗಾರಿಕೆಯು ಬಂದು ಕೃಷಿಯಳಿಯಬೇಕು
ಆದರೂ ಆಹಾರ ಅಕ್ಷಯಿಸಬೇಕು
ಅಪ್ಪಚ್ಚಿ ಅಮ್ಮಣ್ಣಿ ಎರಡೂನು ಬೇಕು

ಬಂಡವಾಳಿಗ ಬೇಕು ಬಡವನೂ ಬೇಕು
ಹುಲಿಹಸುಗಳೆರಡೂನು ಒಟ್ಟಿಗಿರಬೇಕು!
ಹುಲಿಯು ಹಸುವನು ಕಚ್ಚಿ ತಿನ್ನುತಿರಬೇಕು
ಹಸುವಿಂಗೆ ಹೆದರಬೇಡೆನ್ನುತಿರಬೇಕು!

***

ಬಹಳ ಚಳಿ ಅಂತ ಪೇಟೆಗ್ಹೋಗಿ ಶಾಲು ಖರೀದಿ ಮಾಡಬೇಕು ಅಂದರೆ ೧೬ ರೂಪಾಯಿ ಅಂದರು. ಕಂಬಳಿಗೆ ೧೨ ರೂಪಾಯಿ ಅಂದರು, ಸೆಕೆಂಡ್‌ಹಾಂಡ್ ಮಿಲಿಟರಿ ರಗ್ಗಿಗೂ ೧೬–೧೮ ರೂಪಾಯಿಗಳು. ಅಯ್ಯೋ ದೇವರೇ ಅಂತ ತಲೆಯ ಮೇಲೆ ಕೈಯಿಟ್ಟುಕೊಂಡು ಬಂದ ನಮ್ಮ ಬಯಲಪ್ಪ. ಅಂತೂ ಚಳಿಗಾಲ ಬರೋದಕ್ಕೂ ಬಟ್ಟೆ ಕಂಟ್ರೋಲಾಗುತ್ತೆ ಅಂತ ವ್ಯಾಪಾರಿಗಳು ಬಟ್ಟೆ ಬೆಲೆ ಏರಿಸಿದ್ದಕ್ಕೂ ಬಹಳ ಗಂಟಾಯಿತು! ಈ ಸಮಸ್ಯೆ ಬಹಳ ದೊಡ್ಡದಾಗಿ ಕಂಡಿತು ಬಯಲಪ್ಪನಿಗೆ. ಅದನ್ನು ತಂದು ನನ್ನ ವ್ಯಾಸಪೀಠದ ಮೇಲೆ ಭಯಭಕ್ತಿಯಿಂದ ಇರಿಸಿದ. ಏನು ಮಾಡಬೇಕು ಹೇಳಿ, ಈ ಚಳಿಯ ಸಮಸ್ಯೆಯನ್ನು ನೋಡಿದಾಕ್ಷಣ ಬೂದಿ ಇದ್ದರೂ ನನ್ನ ಮೈಗೆಲ್ಲ ಒಮ್ಮೆ ರೋಮಾಂಚನವಾಯಿತು. ವಿದ್ಯುತ್ ಸಂಚಾರವಾದಂತಾಯಿತು. ಆದರೆ ಯೋಗಾರೂಢರಿಗೆ ಚಳಿ ಬಿಸಿಲಿನ ಪರಿವೆಯುಂಟೇ? ಆ ಪ್ರಕಾರ ಆ ಚಳಿಯ ಸಮಸ್ಯೆಯನ್ನು ನಿಷ್ಪಕ್ಷಪಾತದಿಂದ ಪರಿಶೀಲಿಸ ಹೋದಾಗ, ಒಮ್ಮೆಲೇ ನವ ಹರಿದಾಸರ ಪದ ನೆನಪಾಯಿತು.

ಗುಡುಗುಡಿಯನು ಸೇದಿ ನೋಡೋ। ಅದ।
ಹಿಡಿದು ಮೈಗಡಸಿದ ಚಳಿಯ ನೀಡಾಡೋ। ॥ಪಲ್ಲವಿ॥
ಹೆಂಡ ದುರಾಭ್ಯಾಸವಂತೆ
ಮನೆ। ಗಂಡರ ಬಿಡುವುದು ಸಭ್ಯತೆಯಂತೆ।
ಸಿಕ್ಕಿಬಿದ್ದವನೊಬ್ಬ ಕಳ್ಳ
ಕಣ್ಣು। ತಪ್ಪಿಸಿದಾತ ಹರಿಶ್ಚಂದ್ರನಂತೆ।
ಹೇಡಿಗಳಾಚಾರಕಂಜಿ
ನೀವು। ಬೀಡಿಗಳನು ಬಿಟ್ಟು ನಡುಗಲು ಬೇಡಿ ॥೧॥
ಬಿಸಿಲಲ್ಲಿ ಮಾಡಬಾರದುದ
ಹಸಿ। ಚಳಿಯಲ್ಲಿಯೂ ಮಾಡಬಾರದೇಕಂತೆ।
ಮರುಭೂಮಿಯಲಿ ಮಾಡದಿಹುದ
ಇಂಥ। ಮಲೆನಾಡಿನಲಿ ಮಾಡಬಾರದೇಕಯ್ಯ?
ಬಟ್ಟೆ ಕೊಡುವ ಬಿಸಿಗಿಂತ
ಎದೆ। ಯಟ್ಟಯೊಳಿಹ ಹೊಗೆ ಬೆಚ್ಚಗಲ್ಲೇನು? ॥೨॥

***

ಗೋಡ್ಸೆ ಪ್ರಕರಣವನ್ನು ಇಷ್ಟುದ್ದ ಬೆಳೆಸಿ ಎಲ್ಲೆಲ್ಲೂ ಪ್ರಚಾರ ಮಾಡುವುದರ ಗುಟ್ಟೇನು ಎಂದು ಅನೇಕರಿಗೆ ತಿಳಿಯದಾಗಿದೆ. ಅವನು ಯಾವ ದೊಡ್ಡ ಮನುಷ್ಯ,

ಅವನ ಇತಿಹಾಸಕ್ಕೆ ಇಷ್ಟೇಕೆ ಪ್ರಾಶಸ್ತ್ಯ ಎಂಬವರಿಗೆ ದಡ್ಡತ್ತೆಯ ಕತೆ ಗೊತ್ತಿಲ್ಲ. ದಡ್ಡತ್ತೆ ಅನ್ನ ಬಸಿಯುವಾಗ ತಪ್ಪಲಿಗೊಂದಿಷ್ಟು ತುಪ್ಪ ಹಾಕುತ್ತಿದ್ದಳು. ಏಕೆಂದರೆ ಮಗಳಿಗೆ ಆ ತುಪ್ಪ ಹಾಕಿದ ಅನ್ನ ಸಿಗಬೇಕು, ಸೊಸೆ ಖಾಲಿ ಗಂಜಿ (ತಿಳಿ) ಕುಡಿಯಬೇಕು ಎಂದು. ಆದರೆ ತುಪ್ಪ ನೀರಾಗಿ ಬಸಿಯುವಾಗ ಗಂಜಿಯ ಪಾತ್ರೆಗಳಿಗೆ ಬೀಳುತ್ತಿತ್ತು. ಅದರಿಂದ ತುಪ್ಪದ ಗಂಜಿ ಸೊಸೆಗಾಯಿತು. ಹೊಟ್ಟು ಅನ್ನ ಮಗಳಿಗಾಯಿತು! ಗಾಂಧಿಯನ್ನು ಕೊಂದ ಅಪರಾಧಿಯ ಅಪರಾಧ ಜಗಜ್ಜಾಹೀರಾಗಲೆಂದು ಪ್ರಕರಣವನ್ನು ಲಂಬಿಸಿದರೆ ಗೋಡ್ಸೆಯ ಆತ್ಮಸಮರ್ಥನೆ ಬೆಳಕಿಗೆ ಬಂದು ಅವನ ದೇಶಹಿತಾಪೇಕ್ಷೆಯ ಅಂಶಗಳು ಪ್ರಸಿದ್ಧವಾಗುತ್ತಿವೆ. ಅಂದರೆ ನಿತ್ಯ ಮುತ್ತೈದೆಯ ಗೀತದಲ್ಲಿ ಹೇಳಿದ ಹಾಗೆ ಆಯಿತು.

(ಸಾಂಗತ್ಯ)

ರಾವಣನನು ಕೊಂದು ರಾಮ ದೊಡ್ಡವನಾದ
ಎಂಬ ರಾಮಾಯಣದಲ್ಲಿ
ರಾವಣನ ಸಮಸಾಹಸವ ಬಣ್ಣಿಸಲಿಲ್ಲ
ವೇನು ಅದೇ ಶೈಲಿಯಲ್ಲಿ ॥೧॥
ಮೊಲವ ಕೊಂದರೆ ಸಿಂಹ ವೀರನಾದೀತೇನು?
ಸಲಗವ ಕೊಲಲದು ವೀರ।
ಕೊಲೆಗೆಯ್ಯಲಂತಿಂಥ ನಾಡಾಡಿಗಳ ಗೋಡ್ಸೆ
ಕಲಿಯೆನಿಸುತ್ತಿದ್ದನೇನು? ॥೨॥
ಪಾಪಿಯಾಗಿಯ ದಶಕಂಠ ಮೂರೇ ಜನ್ಮ
ದಾಟಿ ವೈಕುಂಠಕ್ಕೆ ಹೋದ।
ತಾಪಸಿಗಳು ಕೋಟಿ ವರ್ಷ ದುಡಿದರೇನು
ಪೋಪರೆ ಬಯಸಿದ ಜಗಕೆ? ॥೩॥
ತೆಪ್ಪಗಿಪ್ಪವಗಿಂತ ತಪ್ಪುಗಾರನೆ ಲೇಸು
ಒಪ್ಪೀತೆ ಕಲ್ಲಿನಂತಿರಲು?
ಸ್ವಲ್ಪವಾದರು ಸಾಹಸವ ಮಾಡಲು ಬರ
ದಲ್ಪಾತ್ಮ ಬದುಕಿಯು ಸತ್ತ! ॥೪॥
ಸತ್ತು ಬದುಕುವಂಥ ಸತ್ಯಾತ್ಮರಿಂದೇನು?
ಅತ್ತುಗೆಲ್ಲುವಳೆಂಥ ವೀರೆ?
ಕುತ್ತಿಗೆಯವುಕಲು ಬಲ್ಲವ ಗಳಿಸ್ಯಾನು
ಮತ್ತಪಕೀರ್ತಿ ಕೀರ್ತಿಗಳ। ॥೫॥

ಕೊಲ್ಲ ಬಲ್ಲವ ಕಾಯ ಬಲ್ಲನಲ್ಲದೆ ಬರಿ
ಕ್ಷುಲ್ಲಕನಿಂದಾದೀತೇನು?
ಖುಲ್ಲರ ಕೊಲೆ ಕೀರ್ತಿ ತಂದರೊಳ್ಳಿದರನ್ನು
ಕೊಲ್ಲಲು ಸಾಹಸವಕ್ಕು ॥೬॥

***

ತಮ್ಮ ಮನೆಯ ಕೂಸು ಪ್ರತಿಯೊಂದು ವಸ್ತುವನ್ನೂ ನಾಲಿಗೆಗೆ ತಗುಲಿಸಿ ನೋಡುವುದರ ಕಾರಣವೇನು? ಎಂಬುದು ಮುರುಗಪ್ಪನ ಸವಾಲು. ಅಲ್ಲವಯ್ಯಾ, ಹಿಂದುಸ್ಥಾನದಲ್ಲಿ ಪತ್ರಿಕೆ ಓದುವವರೆಲ್ಲ ರಾಜಕಾರಣಿಗಳೆನಿಸಿ, ಫ್ಯಾಶನ್ ಮಾಡುವವರೆಲ್ಲ ನಾಟ್ಯವಿಲಾಸಿಗಳೆನಿಸಿ, ಅಕ್ಷರಸ್ಥರೆಲ್ಲ ಲೇಖಕರೆನಿಸಿ ಮೆರೆಯುತ್ತಿರುವ ಈ ಕಾಲದಲ್ಲಿ ಎಲ್ಲ ವಿಷಯಗಳನ್ನು ಬಿಟ್ಟು ಕೂಸಿನ ವಿಷಯದ ಮೇಲೆ ಇದೆಲ್ಲಿಯ ಜಿಜ್ಞಾಸೆ ಎಂದು ಮಿಕ್ಕ ಸಭಿಕರು ಅಪಹಾಸ್ಯ ಮಾಡಿದರು. ಸಂಜೆಯ ಹೊತ್ತು ಜಡಿಮಳೆ 'ಇಳಿದು ಬಾ ತಾಯಿ ಇಳಿದು ಬಾ' ಎಂದು ಯಾವನೋ ಕವಿ ಗಂಗೆಯನ್ನು ಇಳೆಗಿಳಿಸಿರುವಂತೆ ಕಾಣುತ್ತಿತ್ತು. ಆ ಗಂಗೆಯ ಸೌಂದರ್ಯ ಗಟಾರಗಳಲ್ಲಿ ಭರತನಾಟ್ಯವನ್ನು ಮುಗಿಸಿ ಪ್ಯಾರಿಸ್ ಹಾಲಿವುಡ್ ಕೇಂದ್ರಗಳ ನಗ್ನ ನರ್ತನಗಳಲ್ಲಿ ಲೀನವಾಗಿತ್ತು. ಒಬ್ಬರಾಡಿದ ಮಾತು ಇನ್ನೊಬ್ಬರಿಗೆ ಸರಿಯಾಗಿ ಕೇಳುತ್ತಿರಲಿಲ್ಲ. ಆದರೂ ಚರ್ಚೆ ಎದ್ದಿತೆಂದರೆ ನಮ್ಮಲ್ಲಿ ಬಿಸಿಯೇರದಿರುವುದುಂಟೇ?

ಕಲಕತ್ತದ ಉಪಚುನಾವಣೆಯಲ್ಲಿ ಶ್ರೀ ಶರಚ್ಚಂದ್ರರಿಗೆ ವಿಜಯ ದೊರೆತದ್ದರಿಂದ ಕಾಂಗ್ರೆಸ್ಸಿಗರಿಗೆ ಎಲ್ಲೆಲ್ಲೂ ವಿಹ್ವಲತೆಯುಂಟಾಗಿದೆ. ಎಲ್ಲ ವಿಷಯಗಳ ಸತ್ಯತೆ ಅಸತ್ಯತೆಗಳ, ನ್ಯಾಯತೆ ಅನ್ಯಾಯತೆಗಳ ನಿರ್ಣಯವಾಗುವುದು ಕಾಂಗ್ರೆಸ್ ಹುರಿಯಾಳಿಗೆ ಸೀಟು ಸಿಕ್ಕಿದ್ದರ ಮೇಲಿಂದ. ಇದೇ ಕಾಂಗ್ರೆಸ್ಸಿನ ಇಂದಿನ ಲೆಕ್ಕಾಚಾರ. ಕಾಂಗ್ರೆಸ್ ಉಮೇದುವಾರನಿಗೆ ಬಹುಮತ ಸಿಕ್ಕಿದರೆ ಎಲ್ಲ ನೆಟ್ಟಗಾದಂತೆ, ಇಲ್ಲದಿದ್ದರೆ ಎಲ್ಲ ಕೆಟ್ಟು ಹೋದಂತೆ. ಇದೇ ನಿಕಷ, ಒರೆಗಲ್ಲು... ಮಗುವಿನ ನಾಲಿಗೆಯಂತೆ ತಿನ್ನಲಿಕ್ಕೆ ಬರುವ ಪದಾರ್ಥ ಮಾತ್ರ ಮಗುವಿನ ದೃಷ್ಟಿಯಲ್ಲಿ ಉಪಯುಕ್ತವಾಗುವುದು, ಮಿಕ್ಕುದೆಲ್ಲ ಹಾಳು. ಹಿಂದೆ ಒಬ್ಬಳು ಗರತಿಯಿದ್ದಳಂತೆ. ನಮ್ಮ ಕಾಲಜ್ಞಾನದ ಬಸವರಾಜಯ್ಯನವರು ಅವಳ ನ್ಯಾಯವನ್ನು ಹೀಗೆ ಬಣ್ಣಿಸಿದರು –

ಭಾ.ಷ.

ತನ್ನುದರ ಕರೆಗೊಟ್ಟ ರೇ ತಾ–
ನನ್ನ ಮಾಡುವಳುಣ್ಣ ಬಡಿಸುವಳ
ನ್ಯರಿಗೆ, ತನಗಗ್ನಿ ಮಾಂದ್ಯವಿರಲ್ಕೆ ಮಿಕ್ಕವರ।
ಬನ್ನವನು ಲಕ್ಷಿಸಳು, ಆ ಈ

ಸಣ್ಣ ಕೆಲಸವ ಮಾಡುತಾಡುತ
ಕನ್ನೆ ಕಾಲವ ಕಳೆವಳಿಡಿದಿನ ಮಿಣ್ಣತನದಿಂದ ॥೧॥
ಭೋಜನೋಪಾಹಾರಗಳ ತ
ನ್ನೋಜೆಯಂತನುಕೂಲದಂತೆ ನಿ
ಯೋಜಿಸುವಳನಿಯಮಿತ ವೇಳೆಯೋಳಾಕೆ ತನ್ನಂತೆ
ರಾಜಿಸುವುದೆಲ್ಲವರ ಬಸಿರೂ
ವ್ಯಾಜವಿರದಂಭೋದಿಯಂದದೊ
ಳೀಜಗದೊಳೆಂದರಿವಳಾ ಮೇದೋ ವಿಲಾಸವತಿ ॥೨॥
ತನ್ನ ಪಂಚೇಂದ್ರಿಯಗಳಿಗೆ ಬೇ
ಕೆನ್ನುವುದು ಬೇಕಾಗುವಾಗಲೆ
ಸನ್ನಿಹಿತವಿರಬೇಕು, ಮಿಕ್ಕವರಾಗವುಣಬೇಕು
ಅನ್ಯವೇಳೆಯಲಕ್ಷಣೀಯ, ಜ
ಘನ್ಯ ಮಿಕ್ಕದು ಜೀವಿಗಳಿಗೆಂ
ಬುನ್ನತಾಂಬಕಿಗಾದುದಿಷ್ಟವೆ ನಿಕಷವನವರತ ॥೩॥
ತನ್ನ ವೋಲಿನ್ನನ್ಯರೂ ಯೆಂ
ಬುನ್ನತಾದರ್ಶವನು ಸಾಧಿಸಿ
ಧನ್ಯಳಾದಳು ಗರತಿ, ತಾ ಕುಳಿತಿರಲು ಮಿಕ್ಕರಿಗೆ
ಸನ್ನಿಧಿಯೊಳೆ ವಿರಾಮ ನಿಂತರು
ಎನ್ನುವಳು ತಿಳಿವಳಿಕೆಯಾಕೆಯ
ಕಣ್ಣಿಗಾದುದೆ ಚೆಂದ, ಸರ್ವಾರಾಧ್ಯವವಳಂತ! ॥೪॥

***

ಪಾಕಿಸ್ತಾನಕ್ಕೂ ಅಫಘಾನಿಸ್ತಾನಕ್ಕೂ ಜಗಳ ಬಿದ್ದುಬಿಡ್ತಲ್ಲ! ಎಂದು ದನಿತೆಗೆದ ಇಂದಿನ ಪೇಪರ್ ನೋಡಿದ ಶಿವಶರಣಪ್ಪ. ಇಸ್ಲಾಮೇತರರಿಗೂ ಇಸ್ಲಾಮಿಗಳಿಗೂ ಜಗಳಬಿದ್ದಾಗ ಇಸ್ಲಾಂ ಅಪಾಯಕ್ಕಿಡಾಗಿದೆ ಎಂದು ಜಿನ್ನಾ ಸಾಹೇಬರು ಕೂಗುಹಾಕುತ್ತಿದ್ದರು. ಈಗ ಏನಾಯಿತು? ಎಂದ ಶರಣಪ್ಪನ ಸವಾಲು ಹೆಂಗಸಿಗೂ ಗಂಡಸಿಗೂ ಜಗಳವಾದರೆ ಸೋಲುವ ಹೆಂಗಸು ಹೆಣ್ಣುಮುಸಕಿಯಂದು ಗಂಡಸನ್ನು ಹೀಯಾಳಿಸಿ ಜಯ ಪಡೆಯಲು ಪ್ರಯತ್ನಿಸುತ್ತಿದ್ದ ಕಾಲ ಹಿಂದಿನದು. ಹೇಡಿತನವನ್ನೇ ಹೆಂಗಸು ಗೌರವವೆಂದು ಜಂಭಕೊಚ್ಚಿಕೊಳ್ಳುತ್ತಿದ್ದಂತೆ ಪಾಕಿಸ್ತಾನಿಗಳು ತದಿತರರನ್ನು

ರಾಜಕೀಯ ಕೂಟಯುದ್ಧದಲ್ಲಿ ಗೆದ್ದರೆ ಗೆಲುವೆಂದೂ, ಸೋತರೆ ಅದು ಇತರರ ದೌರಾತ್ಮ್ಯವೆಂದೂ ಪ್ರತಿಪಾದಿಸುತ್ತಿದ್ದ ಕಾಲವೀಗ ಸರಿದುಹೋಯಿತು. ಹಟಮಾಡುವ ಮಗುವಿನ ಹಟ ಅತಿಯಾದಾಗ ಬೇಕಾದ್ದು ಮಾಡಿಕೋ ಎಂದು ಅದರ ಕೈಯಲ್ಲಿ ಚೂರಿಯನ್ನು ಕೊಟ್ಟಂತೆ ಪಾಕಿಸ್ತಾನಕ್ಕೀಗ ಸ್ವಾತಂತ್ರ್ಯವನ್ನು ಕೊಡಲಾಗಿದೆ. ಕಾಶ್ಮೀರ ಪ್ರಕರಣದಲ್ಲಿ ಭಸ್ಮಾಸುರ ಲೀಲೆಯಿಂದ ಕೆಟ್ಟವರ ಮೇಲೆಯೇ ಅಸ್ತ್ರವನ್ನುಪಯೋಗಿಸುವ ಪ್ರಯತ್ನ ಮಾಡಿ, ದೊಣ್ಣೆ ಹಿಡಿದು ಹೊಡೆಯಲು ಬಂದ ದುರ್ಬಲ ಕಳ್ಳನಂತೆ ಶಸ್ತ್ರಾಸ್ತ್ರ ಕಳೆದುಕೊಂಡು, ಮನೆಯನ್ನು ಹಿಡಿದ ಮತ್ತೊಂದು ಮಗುವಿನ ಪೇಚಿಗೆ ಕಾರಣವಾಗಿದೆ. ಸಮಾನ ಧರ್ಮೀಯರು ಎದುರಾದುದರಿಂದ ಧರ್ಮಯುದ್ಧಕ್ಕೇನೂ ಅಡ್ಡಿಯಿಲ್ಲವಲ್ಲ. ದಕ್ಷಿಣ ಕನ್ನಡದಲ್ಲಿ 'ಕೋಳಿಪಡೆ' ಎಂಬ ಕೋಳಿಗಾಳೆಗ ನಡೆಸುತ್ತಾರೆ. ಹುಂಜಗಳ ಕಾಲಿಗೆ ಚಿಕ್ಕ ಚಿಕ್ಕ ಚಂದ್ರಾಕಾರದ ಕತ್ತಿ ಕಟ್ಟಿ ಕೊಯ್ದಾಡಿಸುತ್ತಾರೆ. ಕೋಳಿಗಾರರು ಸುಸಜ್ಜಿತ ಹುಂಜವನ್ನು ಹಿಡಿದುಕೊಂಡು ಕುಳಿತು ಒಂದರ ಮೇಲೊಂದನ್ನು ಬಿಟ್ಟಾಗ ಹುಂಜ ಪೂರ್ವ ಕಾಲದ ಕ್ಷತ್ರಿಯ ವೀರರಂತೆ ಕಡಿದಾಡಿ ಪ್ರಾಣಾರ್ಪಣ ಮಾಡುವುವು. ಅದರಿಂದ ರೈತರು ಆನಂದಪಡುತ್ತಾರೆ. ಈಗ ಪಾಕಿಸ್ತಾನ ಅಫಘಾನಿಸ್ತಾನಗಳಲ್ಲಿ ಇಂಥ ವಾಗ್ಯುದ್ಧ ಶುರುವಾಗಿದೆ, ದೇಖ್ ಮಿಯಾ ದೇಖ್...

ತಲ್ವಾರ ಲೇಕರ್ ಆಯೇ ಹೈ
ಮುರ್ಗೇ ಮಹಾಶಯ ರಂಗಕೋ
ದುಶ್ಮನಕೆ ಛಾತೀ ತೋಡಕರ್
ಶೈತಾನಕಾ ಖೂನ್ ದೇಯಗಾ
ಬಹದೂರಿಕಾ ಕಾಮ್ ದೇಖೊ ಯಾರ್
ರಣಮಸ್ತ ಖಾನ್‌ಕಾ ಮುರ್ಗಕಾ
ಉಪ್ಪರ ಚಢೇ ದುಶ್ಮನ್‌ಕೆ ಸಿರ್
ಕಾಟ್‌ಡಾಲ ಮಿಯ್ಯಾ ಬೇಶಲಾಕ್
ಅರೆ ಕ್ಯಾಹುವಾ ಮಹಮ್ಮದ್ ಖುರೇಶಕಾ
ಮಸ್ತಿ ಮುರ್ಗಾ ಉಡ್‌ಗಯಾ
ಗರ್ದನ್ ಪಕಡಕೇ ಛೀನ್ ಲಿಯಾ
ರೋತಾ ಹೈ ದೇಖೋ ಪೀರ್ ಭಯಾ

***

ಗಂಡಸರು ಹೆಚ್ಚಾಗಿ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಚುಕ್ಕೆ ಚುಕ್ಕೆ ಚೂಪಕ್ಕನಂತೆ ತಿರುಗುವುದಿಲ್ಲ ಎಂಬುದು ತಿಳಿದಿದೆಯಷ್ಟೆ. ಇದಕ್ಕೆ ಅವರ ವರ್ಣದ್ವೇಷವೇ

ಕಾರಣವೆಂದು ತಿಳಿದುಕೊಳ್ಳಬೇಕು. ಇದನ್ನು ಯಾವ ರಾಜಕಾರಣಿಗಳೂ ಟೀಕಿಸುವುದಿಲ್ಲ. ಹೆಂಗಸರೆಂದರೆ ವರ್ಣಪ್ರಿಯರು. ಸರ್ವವರ್ಣಗಳನ್ನೂ ಅವರು ಸ್ವಾಗತಿಸುತ್ತಾರೆ. ದಕ್ಷಿಣ ಆಫ್ರಿಕಾದ ಸರಕಾರವು ಶುದ್ಧ ಗಂಡು ಸರಕಾರವೆಂದು ತೋರುತ್ತದೆ. ಆದುದರಿಂದಲೇ ಅಲ್ಲಿ ಬಿಳಿಯ ವರ್ಣಕ್ಕೆ ಪ್ರಾಶಸ್ತ್ಯ. ಹಿಂದುಸ್ಥಾನದ ಸರಕಾರ ಶುದ್ಧ ಹೆಣ್ಣಿನಂತೆ ಎಲ್ಲ ವರ್ಣದವರಿಗೂ ಆಶ್ರಯವಿತ್ತರೆ ದಕ್ಷಿಣ ಆಫ್ರಿಕ ಆಸ್ಟ್ರೇಲಿಯಗಳೇಕೆ ಹಾಗೆ ಮಾಡಿಯಾವು? ಹಿಂದೀಯರಿಗೆ ಈ ಗುಟ್ಟು ತಿಳಿಯದುದರಿಂದಲೇ ಸುಮ್ಮನೇ ಒದ್ದಾಡುತ್ತಾರೆ, ದೂರುತ್ತಾರೆ, ಗೋಣಗುಟ್ಟುತ್ತಾರೆ. ಯುರೋಪಿಯನ್ನರೇ ಆಗಬೇಕೆಂದಿಲ್ಲ, ಬಿಳಿಯವರಾದರೆ ಸೈ, ಅಲ್ಲಿ ಎಲ್ಲರೂ ಸ್ವಾಗತಿಸುತ್ತಾರಂತೆ. ಅಂದಮೇಲೆ ಪಾವುಡರ್ ಸ್ನೋ ಮುಂತಾದುವನ್ನು ಬಳಿದುಕೊಂಡ ಹುಡುಗಿಯರು ಹೇಗೆ ಸುಖವಾಗಿ ಸಮಾಜದಲ್ಲಿ ಪ್ರವೇಶವನ್ನು ದೊರಕಿಸಿಕೊಳ್ಳುತ್ತಾರೋ ಹಾಗೇ ದಕ್ಷಿಣ ಆಫ್ರಿಕಾದ ಶ್ವೇತಮಯೂರ ವೇಷದಿಂದ ಬಿಳಿಯರೆಲ್ಲ ಏಕೆ ಪ್ರವೇಶ ದೊರಕಿಸಿಕೊಳ್ಳಬಾರದು? ಎಂದು ತರಕಾರಿ ಚೆನ್ನಪ್ಪನ ಸಲಹೆ. ಕವಿಗಳೆಲ್ಲ ಹೊಗಳಿರುವುದು ಬಿಳಿಯ ಬಣ್ಣವನ್ನು, ಬಿಳಿಯ ವಸ್ತ್ರವನ್ನು. ಶ್ವೇತವರ್ಣವು ಶ್ರೇಷ್ಠತೆಯ ಹೆಗ್ಗುರುತು, ಕೀರ್ತಿಯ ಗುರುತು, ಅದು ಅಮೃತ, ಅದು ಶುಭ. ಆದುದರಿಂದ ಹಿಂದುಳಿದ ಹೆಂಗಸರು ಬಿಳೀ ಸೀರೆಯುಟ್ಟು ಶೃಂಗೇರಿ ಶಾರದೆಯರಾಗಿ ವಿದಗ್ಧ ಗೋಷ್ಠಿಯಲ್ಲಿ ಸಂಚರಿಸಲು ಶಕ್ತರಾಗುವಂತೆ ದಕ್ಷಿಣ ಆಫ್ರಿಕಾದ ಹಿಂದೀಯರು ಶ್ವೇತವರ್ಣಲೇಪನ, ಶ್ವೇತವಸ್ತ್ರ ಧಾರಣಗಳಿಂದ ವರ್ಣದ್ವೇಷದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದೆಂದು ಚೆನ್ನಪ್ಪನ ವಾದ. ಅದಕ್ಕೆ ಅವನ ಕಾವ್ಯಾಧಾರ ಇಂತಿದೆ :

ತಾವರೆಗಳೊಳಾ ಬಿಳಿಯ ತಾವರೆಯೆ। ಶ್ರೇಷ್ಠವೆಂಬರಣ್ಣ
ದೇವಗಂಗೆಯೂ ಧವಳೆಯಂತೆ ಮೈ। ತುಂಬ ಅದೇ ಬಣ್ಣ
ಗರಳಗೊರಳ ಮಾದೇವ ಬಿಳಿಯ, ಅವ। ಬಳಿದ ಭಸ್ಮ ಬಿಳಿದು
ಹೊತ್ತ ಚಂದ್ರನೂ ಬಿಳಿಯ ಮೋರೆಯವ। ಕಿರಣವೆಲ್ಲ ಬಿಳಿದು
ದೇವಲೋಕದಾ ಪಾರಿಜಾತಕೂ । ಬಿಳಿಯ ಬಣ್ಣ ವಣ್ಣ
ಮನೆಯ ಸುಂದರಿಸೆ ಬಳಿವರೆಲ್ಲರೂ । ಶುದ್ಧ ಬಿಳಿಯ ಸುಣ್ಣ
ಚೊಕ್ಕ ಚಂದ ಮಡಿ ಬೆಳ್ಳಿ ಪಾತ್ರೆಗಳು । ಬಿಳಿಯವಿರುವವಲ್ಲ
ರತ್ನಗಳಲ್ಲೇ ಶ್ರೇಷ್ಠ ವಜ್ರ ತಾ। ಬಿಳಿಯದಾಯಿತಲ್ಲ
ಆದಿದೇವ ನಾರಾಯಣ ಶುಕ್ಲಾಂ। ಬರವ ಧರಿಸಿ ನಿಂದ
ಎಲ್ಲ ಬಣ್ಣ ಬಿಳಿಯದರಲ್ಲಿದೆ ವಿಜ್ಞಾನಿ ರಾಜನೆಂದ
ನಗೆ, ಮಲ್ಲಿಗೆ, ಬಗೆಗೊಳಿಸುವ ಬಟ್ಟೆಯ। ಹತ್ತಿ, ಹಾಲು, ಗಿಳಿಯು
ಬಿಳಿದು ಬಿಳಿದು ಬಾನ್ ಬಯಲುಗಳೆಲ್ಲಾ। ಹೆಬ್ಬೆಳಕಿನ ಸುಳಿಯು।

***

ಹೊಸ ಸರಕಾರಗಳಿಗೆ ಕರ ಹೇರುವ ಒಂದು ರೋಗವೇ ತಗುಲಿಬಿಟ್ಟಿದೆ. ಮುಂಬಯಿ ಮದ್ರಾಸು ಸರಕಾರಗಳು ಅವುಗಳಲ್ಲಿ ಅಗ್ರಗಣ್ಯ ಎನಿಸಿವೆ. ಮಾರಾಟವಾದ ಮೇಲೆ ಜಾಹೀರಾತು ಕರವನ್ನೀಗ ಜಾರಿಯಲ್ಲಿ ತರುತ್ತಿವೆ ಎಂದು ಶಿವಗಂಗವ್ವ ಶೀನುದನಿಯಿಂದ ಹೇಳತೊಡಗಿದ್ದನ್ನು ಕೇಳಿ ಕೆರಳಿದ ಗಾಂಧೀ ಟೋಪಿಯ ಗುರುವಣ ಗೌಡನು – ದುಡ್ಡಿಲ್ಲದೆ ಸರಕಾರ ನಡೆಯುವುದು ಹೇಗೆ ಎಂದು ಗುಡುಗಿಬಿಟ್ಟನು. ದೇಶೋದ್ಧಾರ ಮಾಡುವ ಮಂದಿ ವ್ಯಾಪಾರಿಗಳ ಮೇಲೆ ಕರ ಹಾಕುತ್ತೇವೆ ಎಂದು ಅಸಂಖ್ಯ ಬಡ ಗಿರಾಕಿಗಳನ್ನು ಸುಲಿಯುತ್ತಿರುವುದು ಸರಕಾರ ನಡೆಸುವ ಕ್ರಮ ಏನಂದು ಗಂಗವ್ವ ಗಡುಸಾಗಿ ಕೇಳಿಯೇ ಬಿಟ್ಟಳು. ಕಕ್ಕುಬಿಕ್ಕಾದ ಗುರುವಣ್ಣ ಬೆಕ್ಕು ಬಿಕ್ಕಳಿಸತೊಡಗಿದಂತೆ 'ನಮ್ಮ ಸರಕಾರಕ್ಕೆ ಹಾಗೆ ಹೀಗೆ ಟೀಕೆ ಮಾಡಬಾರದು' ಎಂದು ವಟಗುಟ್ಟಿದನು. ಆ ಪಕ್ಷ ಈ ಪಕ್ಷ ಹಿಡಿದು ಒಬ್ಬರ ಮೇಲೊಬ್ಬರು ವಾದಿಸತೊಡಗಿದರು. ದುಡ್ಡಿಲ್ಲದೆ ಸರಕಾರ ನಡೆಯದು, ಬಡವರಿಂದಲ್ಲದೆ ಇತರರಿಂದ ದುಡ್ಡು ವಸೂಲು ಮಾಡಲು ಸಾಧ್ಯವಾಗದು ಎಂಬುದೇ ವಾದದ ಸಾರಾಂಶ. ಇದಕ್ಕೆ ನಿರ್ಣಯ ಕೊಡಬೇಕಾಯಿತಲ್ಲವೆ? ಆ ಕೆಲಸವನ್ನು ಕೀರ್ತನ ಕೇಸರಿ ಕರಿಬಸಪ್ಪ ಶಾಸ್ತ್ರಿಗಳೇ ಮಾಡಿಬಿಟ್ಟರು.

ಭಾ.ಷ.

ಮುನಿಗಳನು ಸುಲಿಯುವುದು ರಾಕ್ಷಸ
ಜನಪತಿಗೆ ತಾ ಶೌರ್ಯವಾಯ್ತಾ
ದಿನಪ ತೇಜದ ವೀರರನು ಗೆಲಲಾರದಾಗಿರಲು
ಘನ ಪರಾಕ್ರಮವಾಯ್ತು ಕೇಳಾ
ವನನೃಪಾಲಗೆ ಮೊಲವ ಹಿಡಿವುದು
ತನುವು ಮುಪ್ಪಾಗಿರಲು ಶಿಥಿಲೇಂದ್ರಿಯತೆಯೊದಗಿರಲು!
  ಪಾಪಿಗಳ ಶಿಕ್ಷಿಸಲು ಬಾರದ
  ಭೂಪತಿಗಳಿಗೆ ಪಾಪಭೀರುಗ –
  ಳಾಪದವ ಹೆಚ್ಚಿಸುವುದೊಂದೇ ರಾಜನೀತಿಯಲಾ,
  ಶ್ರೀಪತಿಗಳಿಗೆ ಬೆದರಿ ಬಾಳುವ
  ಕೂಪಕರ್ಮದಹಿಂಸೆ ಸತ್ಯದ
  ಲೇಪಕರ್ಣಾಪೇಯವೆಂದೇರಿದನು ಶಿವ ಗಿರಿಯ!

***

'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ' ಎಂದು ಕವಿಗಳೊಬ್ಬರು ಹೇಳಿದ ಮಾತನ್ನು ಸಿದ್ಧಾಶ್ರಮದ ಚರ್ಚಾಕೂಟದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ವಾದಿಯು ವಸ್ತುಮಂಡನ ಮಾಡುವಲ್ಲಿ ಸೌಂದರ್ಯವು ದಿವ್ಯವೆಂದೂ ಚಕ್ಷುರಾದಿ ಇಂದ್ರಿಯಗಳಿಂದ ಅಗ್ರಾಹ್ಯವೆಂದೂ ಸಾಧಿಸಿದನು. ಪ್ರತಿವಾದಿಯು 'ಚಕ್ಷುರ್ಮಾತ್ರ ಗ್ರಾಹ್ಯೋ ಗುಣೋ ರೂಪಂ' ಎಂದು ರೂಪವಿಲ್ಲದಲ್ಲಿ ಸೌಂದರ್ಯವಿಲ್ಲ, ರೂಪ ಕಣ್ಣಿಂದಲ್ಲದೆ ಮತ್ತಾವುದರಿಂದ ಗ್ರಾಹ್ಯ? ಎಂದು ಸವಾಲು ಹಾಕಿದ. ಇವರಾದ ಮೇಲೆ ಮಾತಾಡಿದ ವಾಗ್ಮಿಗಳು ಸೌಂದರ್ಯವೆಂದರೆ ಸತ್ಯ ಎಂದೂ ಸತ್ಯ ಮನೋಗೋಚರವೆಂದೂ ಹೇಳಿದರೆ ಮತ್ತೊಬ್ಬರು 'ಭಿನ್ನ ರುಚಿರ್ಲೋಕಃ' ಎಂಬ ಆಧಾರದ ಮೇಲೆ ಎಲ್ಲರಿಗೂ ಸುಂದರವೆನಿಸಬಹುದಾದ ಒಂದು ಸೌಂದರ್ಯ ಪ್ರತೀತಿ ಇಲ್ಲವೇ ಇಲ್ಲ. ಆದುದರಿಂದ ಅವರವರು ಕಂಡದ್ದು ಸುಂದರ ಎಂದರು. ಮಧ್ಯಸ್ಥಿಕೆಗೆ ಕುಳಿತ ವೀರಭದ್ರ ಪುರಾಣಿಕರು, "ಹಾಗೂ ಅಲ್ಲ ಹೀಗೂ ಅಲ್ಲ. ಅದೇ ಕವಿ ಇನ್ನೊಂದೆಡೆ ಹೇಳಿದಂತೆ 'ಕಂಡವರಿಗಲ್ಲ ಕಂಡವರಿಗಷ್ಟೆ ತಿಳಿಧದ ಅದರ ನೆಲೆಯು' ಅಂದರೆ ಸೌಂದರ್ಯ ಕಣ್ಣಿಗೇನೋ ಗೋಚರವಾಗುವುದು, ಆದರೆ ಎಲ್ಲರ ಕಣ್ಣಿಗೂ ಅಲ್ಲ, ಸೂಕ್ಷ್ಮಗ್ರಹಣ ಶಕ್ತಿಯುಳ್ಳ ಪರೇಂಗಿತಜ್ಞರ ಕಣ್ಣಿಗೆ ಮಾತ್ರ' ಎಂದು ತೀರ್ಮಾನಿಸಿಬಿಟ್ಟರು. ಅಷ್ಟು ಹೊತ್ತಿಗೆ ಬೀದಿಯ ಭಿಕ್ಷುಕಿಯೊಬ್ಬಳು ಸ್ವರೂಪತಃ ಸ್ವಲ್ಪ ಸುಂದರಿಯಿದ್ದಳು, ಆದರೆ ಅವಳು ಈ ಕೆಳಗಿನ ಹಾಡನ್ನು ಹೇಳುತ್ತಿದ್ದಳು. ದೊಡ್ಡ ದನಿಯಿಂದ ಹಾರ್ಮೋನಿಯಂ ಮೇಳದೊಡನೆ. ಅದು ಸುಂದರವಲ್ಲ ಸುಂದರವಿದ್ದರೂ ಎನ್ನಿಸಿತು ನನಗೆ. ಹೌದಂತೀರೋ ಅಲ್ಲಾ ಅಂತೀರೋ?

ಮಲ್ನಾಡ್ ಸೀಮಿ ದುರ್ಗೀ ನಾನು
ಎಲ್ಲಾ ಊರಾ ತಿರ್ಗೀ ಬಂದೆ
ಎಲ್ಲೂ ಯಾರ್‍ರಿಲ್ಲ, ನನಗೆ ಸಂಗಾಂ ಜೋಡಿ॥

ಚಂದಾ ಚಂದಾವೆಲ್ಲ ಕೂಡಿ
ಒಂದು ರೂಪವನ್ನು ಮಾಡಿ
ಏನು ಸುಂದರೀ ನಾನಿನ್ನೆಂಥ ಸುಂದರಿ॥

ರಾಗೀ ಜೋಳದ ಯಾಪಾರ ಮಾಡಿ
ಬೂದೀನಾಮ ಹಚ್ಚೀಕೊಂಡು
ಸಾಧೂವಾಗಿ ತಿರುಗೂತೇನೆ ಬೀದಿ ಸುಂದರಿ ನಾನು॥

ಚಿನ್ನ ಬೆಳ್ಳೀ ಮಿಸ್ರೀ ಪಾನೂ
ಒಳ್ಳೇ ನಾಣ್ಯದ ಯಾಪಾರ ಮಾಡಿ
ಎಲ್ಲೂ ಯಾರಿಲ್ಲ ನಂಗೆ ಸಂಗಾಂ ಜೋಡಿ॥

***

'ನಮ್ಮ ಸಿದ್ದಪ್ಪಣ್ಣ ಬಹಳ ಒಳ್ಳೆಯವರು' ಅಂತಾರೆ ಗೆಳೆಯ ಪರಮಹಂಸ ಅಲ್ಲಮಯ್ಯನವರು. ಅದೇಕೋ ನಾ ಬೇರೆ ಕಾಣೆ. ಯಾರಿಗೂ ಏನನ್ನೂ ಮಾಡದಿರುವುದು ಒಳ್ಳೆಯತನವೇನು? ಹಾಗಾದರೆ ಹೇಡಿಗಳೂ ಅಂಜುಬುರುಕರೂ ಎಲ್ಲರಿಗಿಂತ ಒಳ್ಳೆಯುವರಾದಾರು. ಆದರೆ ಅಲ್ಲಮಯ್ಯ ಈ ಅರ್ಥವಿಟ್ಟು ನನ್ನನ್ನು ಹಾಸ್ಯಮಾಡಿರಬಹುದೇ? ಲೋಕದಲ್ಲಿ ಇಂಥ ಒಳ್ಳೆಯತನಕ್ಕೆ ಬೆಲೆಯಿಲ್ಲವೆಂದಲ್ಲ. ಅಷ್ಟಕ್ಕಷ್ಟೇ ಒಳ್ಳೆಯದು. ಕೇಡಿಯಾದರೆ ಹಿಂಸಾವಲಂಬಿಯಾದರೆ ಮತ್ತೂ ಕೆಟ್ಟದ್ದು ಅಂತಾರೆ. ಆದರೆ ಸ್ವಲ್ಪವಾಗಲಿ ಹೆಚ್ಚಾಗಲಿ – ನಿಷೇಧಾತ್ಮಕವಾದುದು ಎಷ್ಟಾದರೂ ನಿಷಿದ್ಧವೇ ಅಲ್ಲವೇ? ಕೇಡಿಗೆ ಒಂದು ಶಕ್ತಿಯಿದೆ, ಕಾರ್ಯಮಾಡುವ ಉತ್ಸಾಹವಿದೆ. ಮನಸ್ಸು ಮಾಡಿದರೆ ಅವನು ಒಳ್ಳೆಯದನ್ನು ಮಾಡಬಲ್ಲ. ಆದರೆ ನಿಷೇಧಾತ್ಮಕ ವ್ಯಕ್ತಿಗಳಿಗೆ ಮನಸ್ಸು ಮಾಡುವುದೆಂಬುದೇ ಇಲ್ಲ. ಎಲ್ಲವುದರಿಂದಲೂ ದೂರ–ಅಲಕ್ ನಿರಂಜನ್! ಸಮಾಜದಲ್ಲಿ ಇಂಥ ನಿಷ್ಕ್ರಿಯರಿಗೆ ಸ್ಥಾನವುಂಟೆ? ಗೀತೆಯ ಕರ್ಮಯೋಗ ಮನಸ್ಸಿನಿಂದಾಗಲಿ, ಬಾಯಿಯಿಂದಾಗಲಿ, ಕಾರ್ಯದಿಂದಾಗಲಿ ಕರ್ತವ್ಯ ಮಾಡುವುದನ್ನು ಒತ್ತಿ ಹೇಳುತ್ತಿರುವಾಗ ಈ ಮೂರರಿಂದ ಏನನ್ನೂ ಮಾಡದವರಿಗೆ ಮನಸ್ಸಿದೆ ಎನ್ನಲು, ಅವರು ಮನುಷ್ಯರೆನ್ನಲು ಬಂದೀತೆ? ಮನಸ್ಸಿದ್ದವರ ಮನಸ್ಸು ಮಾತು, ಅಂಗವಿನ್ಯಾಸ ಮತ್ತು ಕಾರ್ಯಗಳ ಮೂಲಕ ತಿಳಿಯುವುದಲ್ಲದೆ ಮತ್ತಾವುದರಿಂದಲೂ ತಿಳಿಯದು ಎಂಬ ವಿಚಾರವನ್ನು ಕಾಪಾಲಿ ಶಾಸ್ತ್ರಿಗಳ ಮುಂದೆ ಹೇಳಿದೊಡನೆಯೇ ಅವರು ಚೆನ್ನಾಗಿ ನಕ್ಕು ತಮ್ಮದೇ ಆದ ಪ್ರಗತಿಶೀಲ ಶೈಲಿಯಲ್ಲಿ ರಾಗ ಎತ್ತಿಬಿಟ್ಟರು –

ಕಲೆ ಕಲೆಯ ಮುಚ್ಚಿಕೊಳ್ಳುವುದರಲ್ಲಿದೆ ರಸಿಕ,
ಮುಚ್ಚಿಕೊಂಡೇ ಬಿಚ್ಚಿದಂತೆ ತೋರಿಸಬೇಕು,
ಸುಳ್ಳಿಗಿಂತಲು ಸುಂದರದ ವಸ್ತುವುಂಟೇನು?
ಅದೆ ಕಾವ್ಯ, ಚಿತ್ರಕಲೆ, ಮೂರ್ತಿಶಿಲ್ಪ ಕಣಯ್ಯ,
ಮಾತುಕತೆ ನಡೆನುಡಿಗಳೊಂದುತೆರನಿರಬೇಕು,
ಮನಮಾತ್ರ ಪ್ರತ್ಯೇಕ, ಪ್ರತ್ಯೇಕ, ಪ್ರತ್ಯೇಕ।
ಇದುವೆ ನೋಡಾಕರ್ಷಣದ ಸೂತ್ರ ಕೃಷ್ಣಾಸ್ತ್ರ
ತಾನೆಂದುದೇ ಸತ್ಯ ಸತ್ಯವೆಂದೊದರಿದರೆ
ಸೌಂದರ್ಯ ಕಮನೀಯ ಗಾತ್ರದಿಂದಪ್ಪುವುದು।
ಅದಕಿಂತ ಒಳ್ಳಿತೆಲ್ಲಿಂದ ಬಂದೀತಿನ್ನು?
ಅದು। ಲೋಕದಾನಂದ, ಚಂದ, ಚಂದ್ರಾಕಾರ!
ಆ ಚಂದವೊಂದನಳವಡಿಸಿಕೊಂಡರೆ ಸಾಕು,
ಸುಮ್ಮನಿದ್ದರು ಸುಭಗ, ಸುಂದರ, ಸುಮಾಕಾರ –

ಸರ್ವಹಿತಕರ, ವಶೀಕರಣ ನರ್ತನಸಾರ,
ಸರ್ವಪ್ರಯೋಜನ, ಸುಸಮ್ಮೋಹನ ವಿಚಾರ!
ಇದನಂತ, ಸತ್ಯ, ಸುಂದರ, ಸತ್‌ಸದಾನಂದ,
ಇದಪಾರ ಮಹಿಮೆ, ಕಲೆ, ಕರ್ಮಯೋಗದ ಛಂದ!
ಸುಳ್ಳನ್ನು ಸುಳ್ಳೆಂಬ ಮರುಳನನು ಮಾನಿಸರು
ಮಾನಿಸರು ಸತ್ಯವನು ಸುಳ್ಳೆಂಬರೇ ನಿಜರು!
ನಿಜದ ನಿಜವಿದು ಮರುಳು ಸಿದ್ಧೇಶ್ವರಾ ನಿನ್ನ
ಮರುಳು ಸುಂದರವೆಂದರಂದು ನೀನೊಳ್ಳೆಯವ!

***

ಸಂಯುಕ್ತ ರಾಷ್ಟ್ರ ಸಂಘದ ವಿಶ್ವಸ್ತ ಮಂಡಲಕ್ಕೆ ಕಪ್ಪು ಸದಸ್ಯರನ್ನು ಅಂದರೆ ಶ್ವೇತೇತರರನ್ನು ಸೇರಿಸಿಕೊಳ್ಳಬಾರದೆಂದು ಬಿಳಿಯರು ತೀರ್ಮಾನಿಸಿದ್ದಾರೆ. ಅಮೇರಿಕ ಮತ್ತು ಯುರೋಪಿನವರಲ್ಲದೆ ಅನ್ಯರಾರೂ ಬಿಳಿಯರಲ್ಲ, ಸುಂದರರಲ್ಲ, ಶ್ರೇಷ್ಠರಲ್ಲ ಎಂದು ಇಂದಿನ ನಾಗರಿಕತೆ ಹೇಳುತ್ತದೆ. ಇದು ಬಿಳಿಯ ನಾಗರಿಕತೆ. ಇಲ್ಲಿ ಬೆಳ್ಳಗಿರುವುದಷ್ಟೇ ಹಾಲು ಡೊರಕಿರುವುದಷ್ಟೇ ಚೆಂದ, ಗೋಲಾಕಾರವಾಗಿರುವುದಷ್ಟೇ ಸತ್ಯ ಸಿಗರೇಟಿನ ಹೊಗೆಯೊಂದೇ ಆನಂದ, ಧೂಪಧೂಮ ಕಲಾವಿನ್ಯಾಸ, ಕಲಿಸುವವರು ಗುರುಗಳು, ಕಲಿತುಕೊಳ್ಳುವವರು ಶಿಷ್ಯರು, ನಾವು ಕಲಿತುಕೊಂಡದ್ದು ಅವರಿಂದ. ಆದುದರಿಂದ ಅವರೊಡನೆ ನಮಗೆಲ್ಲಿಯ ಸಮಾನಾಧಿಕಾರ? ನಮ್ಮಲ್ಲಿ ಗಂಡನು ಹೆಂಡತಿಯನ್ನು ಮದುವೆಯಾಗುವನಲ್ಲದೆ ಹೆಂಡತಿ ಗಂಡನನ್ನೆಂದಾದರೂ ಮದುವೆಯಾಗುವುದುಂಟೇ? ಗಂಡಸಿಗಾಗಿ ಹೆಂಡತಿಯಲ್ಲದೆ ಹೆಂಡತಿಗಾಗಿ ಗಂಡನಿರುವುದಿಲ್ಲ ಎಂದು ಗಂಡ ಹೆಂಡಿರಿಬ್ಬರೂ ನಂಬಿರುವಾಗ ಹೆಂಡತಿಗೆಲ್ಲಿಯ ಸಮಾನಾಧಿಕಾರ? ನಾವು ಹೆಂಡತಿ ಅವರು ಗಂಡ ಅಂತ ಅವರಷ್ಟೇ ತಿಳಿದುಕೊಂಡಿದ್ದರೆ ಆ ಮಾತು ಬೇರೆ. ನಾವೂ ಹಾಗೇ ತಿಳಿದುಕೊಂಡಿರುವುದಿಲ್ಲ. ಇದಕ್ಕೇನು ಹೇಳುತ್ತೀರಿ? ನಮಗೆ, ಹೆಂಡತಿಗೆ ದೇಹಬಲ ನ್ಯಾಯವಾಗಿ ಕಡಿಮೆಯಿರುವಂತೆ ಶಸ್ತ್ರಬಲ ನ್ಯಾಯವಾಗಿ, ಕಡಿಮೆಯಿದೆ. ಆದರೆ ಸದ್ಬುದ್ಧಿ ಬಲ ಹೇಗೆ ಸಮಾನಾಧಿಕಾರಕ್ಕೆ ಅವಶ್ಯಕವೋ ಹಾಗೇ ರಾಜತಂತ್ರಜ್ಞತೆ ಇಲ್ಲಿ ನಮ್ಮ ಸಮಾನಾಧಿಕಾರಕ್ಕೆ ಅವಶ್ಯಕ. ಏಶಿಯನ್ ಪರಿಷತ್ತಿನ ಸದಸ್ಯ ರಾಷ್ಟ್ರಗಳಿಗೆ ಇನ್ನೂ ಆಂಗ್ಲೋ–ಅಮೇರಿಕನ್ನರ ಬಾಲ ಬಡಿಯುವ ಬುದ್ಧಿ ಹೋಗಿಲ್ಲ. ಅದು ಹೋಗುವವರೆಗೆ ಇವರಲ್ಲಿ ಬಿಳಿಯರಿಗಿಂತ ಬಿಳಿಯರಿದ್ದರೂ ಅವರು ಕಪ್ಪೆಂದರೆ ಒಪ್ಪಿಕೊಳ್ಳಬೇಕು. ಕಪ್ಪಿನೊಳಗೆ ಈ "ಬಿಳಿಯ ಬುದ್ಧಿ" ಹುಟ್ಟದ ಹೊರತು ಈ ಅವಮಾನಕ್ಕೆ ಪ್ರತೀಕಾರ ಮಾಡಲಾಗಲ್ಲ. ಬಿಳಿಯದು ಚೆನ್ನವಾದರೆ ಕಪ್ಪನ್ನು ಬಿಳಿಯದೆನ್ನಬಾರದೇಕೆ ನಮ್ಮ ಜನ? ಅದಾದರೂ ಅಂದು ಅಂದು ಚೆನ್ನಾಗಿರುವಾಗ, ಶ್ರೇಷ್ಠವಾಗಿರುವಾಗ, ಇದನ್ನಾದರೂ

ಅಂದು ಅಂದೇ ಬೆಳಗೆ ಮಾಡಬಹುದಲ್ಲವೇ? ಇದೇ ಗುಟ್ಟು ಕೌಟಿಲ್ಯ ಶಾಸ್ತ್ರದಲ್ಲಿ ಉಕ್ತವಾಗಿದೆ –

'ಕಲಾ'ಕಾಲ ಪ್ರಯಾಣೇನ
'ಕಾಲೋ'ಭವತಿ ಧೀಮತಾಂ।
ಕಾಲಧರ್ಮಾನುಸಾರೇಣ
ಶ್ವೇತಾಶ್ವೇತ ವಿಪರ್ಯಯಃ।
    ವರ್ಣವೇ ಗುಣವಾದಾಗ
    ಬಿಳಿದಕ್ಕು ಸುವರ್ಣವು।
    ಗುಣವೇ ವರ್ಣವೆಂದಾಗ
    ಕಪ್ಪೇ ಸ್ವರ್ಣಪ್ರಭಾನ್ವಿತ।
ವಾಕ್ಕರ್ಮದಿಂದ ನಾವೆಲ್ಲ
ಒಂದಾದಾಗ ವರಿಷ್ಠರು।
ನಾವೇ, ನಮ್ಮದೇ ಶ್ವೇತ,
ಬ್ರಹ್ಮನೇ ಬೈಬಲೇಶ್ವರ॥
    ಕೃಷ್ಣನೇ ಕ್ರಿಸ್ತನಾದಾನು
    ಗಾಂಧಿಗಣ್ಣಿನಿಂದ ನೋಡಲು।
    ಕಪ್ಪಾದರೂ ಕಣ್ಣು ಚೆಂದ
    ಕನ್ನಡರ್ ಕಣ್ಣಿಗರ್ ಕಣಾ॥
ಶ್ಯಾಮ ಸುಂದರಿಯಂ ಕಂಡಾ
ಪಂಪಾದಿ ಕವಿಪುಂಗವರ್।
ಮಹೋಲ್ಲಾಸ ವಿಲಾಸೇನ
ಮಹಾಕಾವ್ಯವ ಗೀಚಿದರ್॥
    'ತನ್ವೀ ಶ್ಯಾಮಾ' ಯಕ್ಷಿಯೆಂದ
    ಕಾಲೀದಾಸ ಕವೀಶ್ವರ!
    ನೀಲೋತ್ಪಲದಲ ಶ್ಯಾಮೆ
    ತಾನೆಂದಳ್ ವಿಜಯಾಂಬಿಕೆ॥

ನಿಷ್ಪ್ರಭಶ್ವೇತರಂ ಕಂಡು
ಬಿಳಿಹಲ್ ಬಿಡಬಾರದು।
ಕಟೂಕ್ತಿ ಕಲೆಯಂ ಬಲ್ಲ
ಕೌಟಿಲ್ಯಮತವಿಂತಿದೆ!

***

ನಮ್ಮ ಬಯಲುಸೀಮೆಗೀವರ್ಷ ಇಂದ್ರಕೃಪೆ ಚೆನ್ನಾಗಿ ಲಭಿಸಿದಂತೆ ತೋರುತ್ತದೆ. ಪ್ರತಿ ಸಾಯಂಕಾಲ ಮೂರು ಗಂಟೆಗೆ ಉಧೋ ಎಂದು ಮಳೆ ಸುರಿಯಲಾರಂಭಿಸುತ್ತದೆ. ಹಾದಿಹೋಕರಿಗೆ ಕೆನ್ನೀರ ಜಳಕ. ಮನೆಯಲ್ಲಿ ಕುಳಿತ ಅಜ್ಜ ಮೊಮ್ಮಕ್ಕಳಿಗೆ ಮುಸುಕಿನ ಜೋಳ ಸುಟ್ಟುಕೊಂಡು ತಿನ್ನುವ ಧಂದೆ. ಅಕ್ಕಿ ತಿಂದವ ಹಕ್ಕಿಯಾಗ್ತಾನೆ, ಜೋಳ ತಿಂದವ ತೋಳನಾಗ್ತಾನೆ ಎಂಬುದು ನಮ್ಮ ಗಾದೆ. ಜನರಲ್ ಮೆಕಾರ್ಥರರು ಜೋಳ ತಿನ್ನದೆಯೇ ತೋಳನಾದದ್ದು ಹೇಗೆ? ಎಂಬುದು ನಮ್ಮ ಸಿದ್ಧಪ್ಪನ ಬಿಡಿಸಲಾರದ ಸಮಸ್ಯೆ. ಏಶಿಯಾ ಖಂಡವನ್ನೇ ನುಂಗುವೆನೆಂಬ ಆ ಪ್ರಾಣಿಯ ಗಂಟಲು ಎಷ್ಟು ದೊಡ್ಡದಿರಬಹುದು? ಎಂದು ಮಕ್ಕಳಿಗೆಲ್ಲ ಕುತೂಹಲ.

ತೀಗುವಿನ ಹತ್ತಿರ ಭೀಕರ ಯುದ್ಧ ನಡೆಯುತ್ತಿದೆಯೆಂದೂ ಸಂರಾ ಸಂಘದ ಸೈನ್ಯಕ್ಕೆ ಗಂಡಾಂತರ ಬಂದಿದೆಯಂದೂ ಓದಿದ ಲಿಂಗವ್ವಕ್ಕ ಕೇಳುತ್ತಾಳೆ. ಹೆಣ್ಣುಮಕ್ಕಳು ಬೇರೆ ಗಂಡನ್ನ (ಒಬ್ಬನಿಗೆ ಸೋಡಚೀಟಿ ಕೊಟ್ಟು) ಮಾಡಿಕೊಂಬೋದದ, ದಂಡೆಲ್ಲಾದರೂ ಗಂಡಾಂತರ ಮಾಡಿ ಕೊಂಬೋದೈತೇ? – ಎಂದು. 'ಹೌದು ಯಾಕಾಗಬಾರದು' ಅಂದ ನಮ್ಮ ಸಿದ್ಧಲಿಂಗಪ್ಪ 'ಒಬ್ಬ ಸೇನಾಪತಿ ತೀರಿಕೊಂಡ ಅಂದರೆ ಮತ್ತೊಬ್ಬನ್ನ ನೇಮಿಸಿಕೊಂಬೋದಿಲ್ಲೇನು? ಅದೂ ಗಂಡಾಂತರಾನೇ!' 'ಎಲೇ ಇವನ, ಗಂಡಾಂತರ ಅಂದರ ಕಠಿಣ ಪರಿಸ್ಥಿತಿ ಅಂಬೋ ಅರ್ಥವೇನೋ' ಅಂತ ಶ್ಯಾಮ ಚಂದ್ರಬಾಬು ಪ್ರಶ್ನೆ ಹಾಕಿದ್ರು. 'ಅದೇ ಹೇಳಿದ್ನಾನೂ. ಗಂಡ ಹ್ವಾದರ ಪರಿಸ್ಥಿತಿ ಕಠಿನಾಗೋದಿಲ್ಲೇನು ಹೆಣ್ಣಮಕ್ಕಳಿಗೆ?' ಸಿದ್ಧಲಿಂಗ ದನಿ ಎತ್ತರಿಸಿದ. 'ಈಗಿನ ಕಾಲದ ಹೆಣ್ಣುಮಕ್ಕಳು ಗಂಡ ಹ್ವಾದರ ಒಂದು ಪೀಡೆ ಹೋತು ಅಂತಾವ' ಅಂದಳು ಲಿಂಗವ್ವಕ್ಕ. 'ಮನ್ನಿ ಒಂದು ಕನ್ನಡ ನಾಟಕ ಹಿಂಗೇ ಆತು ನೋಡವ್ವಾ. ನಾಟಕದ ಪಾತರದಾಕಿ ಗಂಡನ್ನ ಕುಂಡರ್ಸಿಕೊಂಡು ಏನ್ಹೇಳ್ತಾಳಂತೀರಿ – ಅಂತ ಸಿದ್ಧಲಿಂಗ ಸುರು ಹಚ್ಚಿದ –

ಏ ಕಲ್ಯಾ, ನಾನು ಹಿಂದಿನಾಕೇ ಅಲ್ಲ ನೋಡು
  ಹೊಸ ದಿರುಸಿನಾಕಿ,
ನನಗ್ ಸರೀ ಆಗಿ ನೀ ದಿರಸೂ ಹಾಕಿಕೊಂಡು
  ಬರಲೇಬೇಕು ಜ್ವಾಕಿ!

ಕಸ ಮುಸರೀಗಿಸರಿ ಮಾಡೊವಾಕಿ ಅಲ್ಲ
 ನಾನು ಮ್ಯಾಡಂ ಅಂತ ತಿಳಕೋ,
ಕೈಯಲ್ಲಿ ಕೈಯ ಹಾಕಿ ತಿರಗಸ್‌ಬೇಕು, ನನ್ನ
 ಸೇವಾ ಮಾಡಿ ಉಳಕೋ!
ರೊಕ್ಕ ಪಕ್ಕ ನೀ ದುಡ್ದದ್ದೆಲ್ಲಾನೂ
 ಉಡೀಲ್ಹಾಕಬೇಕು,
ನಾ ಕೊಟ್ರೇ ಐತಿ ನಿನಗಿಲ್ಲದ್ರಿಲ್ಲ ನೋಡು
 ಎಚ್ರಾ ಇಟ್ಕೋಬೇಕು!
ನೀ ಹಾಂಗ ಹೀಂಗ ಮತ್ತಂದೀಗಿಂದಿಅಂದ್ರ
 ಕೊಟ್ಟೇನ್ ಸೋಡ ಚೀಟಿ।
ನಾ ಕುಂತುಣ್ಣಾಕಿ, ನೀ ದುಡ್ಯೋ ಮನ್‌ಶ್ಯ
 ನಿನಗಷ್ಟೇ ಚೂರು ರೊಟ್ಟಿ!
ಇದ್‌ಕೇನಾದ್ರೂ ನೀ ತೆಪ್ಪೀದ್ಯಂದ್ರ ಗಂ–
 ಡಾಂತ್ರಾ ಖಾತ್ರಿ ನಿನಗ,
ಸೆಟ್ಟೀ ಇಳ್ದ ಕಡೆ ಪಟ್ಣಾ ಅಂತಾರಲ್ಲ
 ಹಾಂಗ ಹಾದೀ ನನಗ!

***

'ಗಣೇಶ ಚತುರ್ಥೀ ಅಂಬೋದು ನಮ್ಮ ರಾಷ್ಟ್ರೀಯ ಹಬ್ಬ – ಇದು ನಿಮಗೆಲ್ಲರಿಗೂ ಗೊತ್ತೇ ಅದ' – ಅಂತ ದನಿ ತೆಗೆದರು ನಮ್ಮ ರಾಮಾಶಾಸ್ತ್ರಿಗಳು. ಅದೇನಪಾ ಅಂತ ಕೇಳಿದರೆ ಅವರದ್ದೊಂದು ಭಾಷಣ ಇತ್ತಂತೆ ಕೊಪ್ಪಳದಲ್ಲಿ. 'ಜ್ಞಾನ ಹೆಚ್ಚು ಬೆಳೆಯಿರಿ' ಎನ್ನುವುದು ಭಾಷಣದ ವಿಷಯವಾಗಿತ್ತು. ಅದನ್ನು ಕೇಳಿದ ನಮ್ಮ ಆಶ್ರಮದ ಉಪಸಂಪಾದಕ ಮಹಾಶಯನು (ಉಪಸಂಪಾದಕನೆಂದರೆ ಬಹಳ ವಿಷಯಗಳ ಬಗ್ಗೆ ಸ್ವಲ್ಪ ಸ್ವಲ್ಪ ತಿಳಿದವನು ಎಂದು) ಉದ್ಗರಿಸಿದ. ಅಂದರೆ ಹೆಚ್ಚು ಜ್ಞಾನ ಪರಿಮಾಣದಂತೆಯೋ ಪ್ರಕಾರದಂತೆಯೋ? ಎಂದು ಚರ್ಚೆ ಎದ್ದಿತು. ಈಗಿನ ಕಾಲದಲ್ಲಿ ಬಹಳ ತಿಳಿದವರೂ ಪ್ರಯೋಜನ ಇಲ್ಲ – ಅಂದ ನಮ್ಮ ಬರೇಮನಿ ಬೂದ್ಯ. 'ಅದ್ಹೇಂಗಲೇ?' ಅಂತ ಎಲ್ಲರೂ ಕೇಳಿಬಿಟ್ಟರು. 'ಒಂದು ಬಹಳ ಬಟ್ಟೆ ಹೊತ್ತ ಕತ್ತೆ, ಇನ್ನೊಂದು ಸ್ವಲ್ಪ ವಸ್ತ್ರ ಉಟ್ಟ ಸಿನಿಮ ನಟಿ! ಎಂದು ಬೂದ್ಯ ಉತ್ತರಿಸಿದ. ಈ ಒಗಟು ಬಹಳ ಜನರಿಗೆ ಆಶ್ಚರ್ಯವಾದರೂ ಅರ್ಥವಾಗಲಿಲ್ಲ. ಆಗ ಅವನು 'ಕೇಳ್ರಿಲ್ಲೆ' ಅಂತ ಒಂದು ಅನುಭವಾಮೃತ ಅನ್ನಲಾರಂಭಿಸಿದ –

ಒಂದು ರಾಜೇಶ್ವರನ ಲಾಯದೊ
ಳೊಂದು ಕತ್ತೆಯದೊಮ್ಮೆಯಗಸನು
ಚೆಂದದಿಂದಲಿ ಹೊರಿಸಿದಂತಹ ಸೀರೆ ಕುಬುಸಗಳ
ಮಂದಗತಿಯಲಿ ಹೊತ್ತು ನಡೆದಿರೆ
ಸುಂದರಾಂಗದ ರಂಭೆಯೊಬ್ಬಳು
ಬಂದು ಕೇಳಿದಳೇಕೆ ರಾಸಭರಾಜ ನೀನಿಂತು ॥೧॥

ನಿನ್ನಲಂಕಾರಕ್ಕೆ ಬಾರದ
ಸೊನ್ನದುಡುಗೆಯ ಹೊತ್ತು ಸಾಗುವೆ?
ನನ್ನ ಸೊಬಗಿಮ್ಮಡಿಸುವುದು ಕೊಡು ರನ್ನದುಡಿಗೆಗಳ
ಎನ್ನುತಲೆ ನಾನಾ ವಿಚಿತ್ರದ
ಬಣ್ಣದುಡುಗೆಯನೆತ್ತಿ ಕೊಟ್ಟಿತು
ತನ್ನ ಕಜ್ಜವ ಮರೆತು ಮೆದುಳಿನ ಸೊನ್ನೆತನದಿಂದ ॥೨॥

ಅತಿಯುಡುಗೆ ಸಿಂಗಾರದಿಂದಾ
ವರದೆ ವಾರ ಸ್ತ್ರೀ ನಡೆಯುತಿರೆ
ಪುರದ ಪೋಲೀಸರು ತರುಬಿದರು ರಾಜವಸನಗಳು
ದೊರೆತವೆಲ್ಲಿಂದೆಂದು ಗದರಿಸಿ
ಚರುಮವನು ಸುಲಿಸಿದರು! ಧಾವಕ
ಖರರ ಕೊಲಿಸಿದರಿಕ್ಕಿ ಶೂಲಕೆ ನ್ಯಾಯಮಂದಿರದಿ ॥೩॥

ಬಹಳ ವಿಷಯಜ್ಞಾನ ಹೊತ್ತವ
ರಹಹ ಗುರಿಮರೆದಜ್ಞರಪ್ಪರು!
ಸಹಿಸದಲ್ಪ ವಿಶಿಷ್ಟ ಸುಕಲಾವಿದರು ತಮ್ಮಿದರ
ಸಿಹಿಯ ಹೆಚ್ಚಿಸಿಕೊಂಬ ಲೋಭದೆ
ಬಹಿರನಂತವ ಕದ್ದು ಬಳಸುವ
ಕಹಿಗೆಲಸಕೆಯ್ದುತ್ತೆ ಹಾಳಾಗುವರು ಸೂಳೆವೊಲು! ॥೪॥

***

ತಿರುವಾಂಕೂರು ಕೊಚ್ಚಿ ಪ್ರಾಂತ್ಯದಲ್ಲಿ ವಾರಕ್ಕೆ ತಲಾ ಎರಡು ಔನ್ಸು ಅಕ್ಕಿ ರೇಷನ್ ಕೊಡುತ್ತಿರುವ ಸುದ್ದಿಯನ್ನು ಕೇಳಿ ಆ ಮೂಲಕ ಅಲ್ಲಿಯ ಮತ್ತು ಕೇಂದ್ರದ

ಆಡಳಿತೆಯ ಸೊಗಸನ್ನು ಅಳತೆ ಮಾಡಿತು ಆಶ್ರಮ. ರಾಮರಾಜ್ಯದಲ್ಲಿ ಅನ್ನಕ್ಕೆ ತತ್ವಾರವಾಗುವುದೇನು ಆಶ್ಚರ್ಯವಲ್ಲ, ಇದೇನು ಅನ್ನಪೂರ್ಣೇಶ್ವರ ರಾಜ್ಯವೆಂದು ಘೋಷಿಸಲ್ಪಟ್ಟಿಲ್ಲವಲ್ಲ? ಎಂದು ಕಾಯಿದೆ ವಾದ ತೆಗೆದರು ಆಶ್ರಮದ ಕಾಂಗ್ರೆಸ್ ಭಕ್ತರೊಬ್ಬರು. ಹತ್ತಿರದ ಅನ್ನಪೂರ್ಣೇಶ್ವರಿ ಲಾಜಿನ ಒಡೆಯರು ಅದಕ್ಕೆ ವಿರೋಧವನ್ನೆತ್ತಿದರು. ಏಕೆಂದರೆ ತಮ್ಮ ಹೋಟೇಲಿನಲ್ಲಿ ಕೂಡ ಸಾಕಷ್ಟು ರೇಷನ್ ಸಿಗದೆ ಜೊತೆಗೆ ಅಶ್ವಖಾದ್ಯಗಳನ್ನು ಊಟಗಾರರಿಗೆ ಬಡಿಸುವ ಪ್ರಸಂಗ ಬಂದಿದೆ ಎಂದು. ಡಾರ್ವಿನ್ನಿನ ಎವೊಲ್ಯೂಶನ್ ಥಿಯರಿಯ ಪ್ರಕಾರ ಬೆನ್ನೆಲುಬಿನ ಅಶ್ವಾದಿ ಪ್ರಾಣಿಗಳ ಮುಂದಿನ ವಿಕಾಸ ಫಲವೇ ಮಾನವನಾದುದರಿಂದ ಅಪತ್ಕಾಲದಲ್ಲಿ ಅವನು ಒಂದು ಹೆಜ್ಜೆ ಹಿಂದಿಡುವುದು ಅಷ್ಟೇನೂ ಅನೈಸರ್ಗಿಕವಲ್ಲ ಎಂದರು ಪ್ರೊ ಗದಿಗೆಯ್ಯನವರು. ಮಕ್ಕಳಾಗಿಯೆ ದೊಡ್ಡವರಾದ ಮನುಷ್ಯರಿಗೆ ಚತುಷ್ಪಾದ ಅವತಾರ ಸ್ವಾಭಾವಿಕ ಎಂದರು ಮನೋವಿಜ್ಞಾನಿ ಮರ್ಕಟ ಬಾಬುಗಳು. ದ್ವಿಪಾದಗಳ ಆಹಾರ ಹೆಚ್ಚು ಪುಷ್ಟಿಕರ ಎಂದರು ಆರೋಗ್ಯ ವಿಜ್ಞಾನಿ ಅಮೃತ ಸುಂದರರು. ಆಹಾರಗುಣ ಬುದ್ಧಿಗುಣವನ್ನು ನಿರ್ಣಯಿಸುವುದರಿಂದ ಸದ್ಯದ ನೈಸರ್ಗಿಕ ಕಂಟಕವನ್ನು ದಾಟುವವರೆಗೆ ಪಶುಬಲ ಸಂಪನ್ನತೆ ಮಾನವರಿಗೆ ಅನವಶ್ಯಕವೆಂದರು ತತ್ವಜ್ಞಾನಿ ತಿರುಮುರುಗಯ್ಯನವರು. ಪಾಶ್ಚಾತ್ಯ ದೇಶಗಳು ಪಾಶವೀ ದಲದಲ್ಲಿ ನಮಗಿಂತ ಮುಂದಾಗಿ ಜಗತ್ತಿನಲ್ಲಿ ಆಕ್ರಮಣ ನೀತಿಯನ್ನು ಹಿಡಿದಿರುವ ಈ ಸಂಧಿಯಲ್ಲಿ ಅದಕ್ಕೆ ಮಾರಾಂತು ಹೋರಾಡಿ ಹೊಸದಾಗಿ ಗಳಿಸಿದ ನಮ್ಮ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳಬೇಕಾದರೆ ನಮಗದು ನಿಸರ್ಗದತ್ತವಾದ ಸದವಕಾಶ ಎಂದು ರಾಜತಂತ್ರ ಧುರೀಣ ತಿರುವಯ್ಯಂಗಾರ್ಯರು ಸಾಧಿಸಿದರು. ಈ ಸರಕಾರೀ ಧೋರಣದ ಮಹಾ ಸಮರ್ಥನೆಯ ವಾಗ್ಝರಿಯನ್ನಾಲಿಸುತ್ತಿದ್ದ ಗರತಿ ಗೌರಕ್ಕನು ಇದ್ದಕ್ಕಿದ್ದ ಹಾಗೆಯೇ ಒಂದು ಒನಕೆವಾಡನ್ನು ಗೊಣಗು ದನಿಯಿಂದ ಹೇಳತೊಡಗಿದಳು –

ನಾನು ಬಯಸಿದ್ದನ್ನೇ ಮಾಡುವಳು ನನ್ನಾಕೆ
ನಾನೆಣಿಸಿದ್ದನ್ನೇ ನುಡಿವಳು।
ಮಾನಿನಿ ಎಂದು ಮೋಹಿಗಂಡೆಂಬನು
ಕಾಣನು ತನ್ನ ಹಿತವನು ॥೧॥

ಕುನ್ನಿ ಹೆಣ್ಣನು ಹಡೆದ ಬಿನ್ನಾಣಗಿತ್ತಿಯು
ತನ್ನ ಕೂಸೊಂದೇ ಋಷಿಪತ್ನಿ।
ಇನ್ನೊಬ್ಬರಳೆಯರು ದೈತ್ಯಪುತ್ರಿಯರೆಂದು
ಹೊನ್ನ ಹೂವನ್ನೇ ಮುಡಿಸ್ಯಾಳು ॥೨॥

ಸಂಕ ಮುರಿದೆಡೆಯಲ್ಲೇ ಸ್ನಾನವಾಯ್ತೆಂಬರು
ಮಂಕು ಜೋಯಿಸರು ನೆರೆಮನೆಯ।
ಲಂಕಿಣಿಯಿದ್ದರು ರಾಣಿಯ ಕವಿಯೆಂಬ
ಪಂಕಜನೇತ್ರ ಇವಳೆಂದು ॥೩॥

ಹೊಟ್ಟೆ ತುಂಬಿದ ಮಂದಿ ಹತ್ತು ಪುಸ್ತಕವೋದಿ
ಒಟ್ಟೆಲ್ಲ ಕಜ್ಜ ಸೊಗಸಂದು।
ಇಟ್ಟುಕೊಳ್ಳುವ ಸಾಹೇಬಜನಗಳ
ಮುಟ್ಟಿ ಮುಜರಾಯಿ ಸಲಿಸ್ಯಾರು ॥೪॥

***

"ಬಲಭೀಮ ವ್ಯಾಯಾಮಶಾಲೆಯ ಪರವಾಗಿ ಕೇವಲ ಸ್ತ್ರೀಯರ ಸಲುವಾಗಿ ಶಾಸ್ತ್ರೀಯ ಗಾಯನ ಸ್ಪರ್ಧೆ ಏರ್ಪಡಿಸಲಾಗಿದೆ" ಮೊದಲಿನ ಪುಟದಲ್ಲೇ ನಿನ್ನೆಯ ಪತ್ರಿಕೆಯಲ್ಲಿ ಈ ಪ್ರಕಟಣೆ ಬಂದಿರುವುದನ್ನು ಕಂಡು ನಮ್ಮ ಚೋದ್ಯ ರಂಗಾಚಾರ್ಯರ ದೃಷ್ಟಿ ಚಕಿತವಾಯಿತು. ಸ್ತ್ರೀ–ಪುರುಷರು ಕಾಯೇನ ವಾಚಾಮನಸಾ ಸಮಾನರೆಂಬ ಈ ಪ್ರಗತಿ ಶೀಲದ ಯುಗದಲ್ಲಿ ಹಿಂದುಗಳಿಗೆ ಕೋಡು ಮೂಡಿದ್ದು ಇಂಥ ಸರಸ ಪ್ರಸಂಗದಿಂದಲೇ ಎಂದು ಅವರು ಉದ್ಗರಿಸಿದರು. ಬಲಭೀಮನಿಗೂ ಸ್ತ್ರೀಯರಿಗೂ ಯಾವ ಸಂಬಂಧವಿದೆ ಎಂಬುದನ್ನು ದ್ರೌಪದೀ ದಾಸನಾದ ಮಹಾಭಾರತದ ಹುಂಬ ಭೀಮನು ನಿದರ್ಶಿಸುತ್ತಾನೆ. ಸ್ತ್ರೀಯರಿಗೂ ಶಾಸ್ತ್ರಜ್ಞಾನಕ್ಕೂ ಯಾವ ಸಂಬಂಧವಿದೆ ಎಂಬುದನ್ನು ವೇಮನ ಕವಿ 'ವಾದಿಸದಿರ್ವನಿತೆಯರೊಳ್' ಎಂಬ ನೀತಿಪದ್ಯದಲ್ಲಿ ಹೇಳಿದ್ದಾನೆ. ಇನ್ನು ವ್ಯಾಯಾಮಕ್ಕೂ ಗಾಯನಕ್ಕೂ ಇರುವುದು ಮಿಲಿಟರಿ ಸಂಬಂಧ. ವ್ಯಾಯಾಮಕ್ಕೂ ಶಾಸ್ತ್ರಜ್ಞಾನಕ್ಕೂ Brawn ಮಾಂಸಬಲಕ್ಕೂ Brain ಬುದ್ಧಿಬಲಕ್ಕೂ ಇರುವುದು ಬೆಣ್ಣೆ ತೂಗಿಸಿಕೊಂಡ ಬೆಕ್ಕುಗಳಿಗೂ ಮಂಗಕ್ಕೂ ಇರುವ ಸಂಬಂಧ ಎಂಬುದು ಸುಪ್ರಸಿದ್ಧವಾಗಿದೆ ಎಂದರು ಆಚಾರ್ಯರು. ಆದರೆ ಆ ಕೂಡಲೆ ಆಶ್ರಮದ ಆಧುನಿಕ ಮಹಿಳೆಯಾದ ಉಮೇದಬಾನು ಎದ್ದುನಿಂತು ಘನ ಕೋಪಾಟೋಪಮಂ ತಾಳ್ದು ಅರುಣತರ ತರತ್ತಾರನೇತ್ರಳಾಗಿ –

'ನೀಚನೇ ದುರಾತ್ಮನೇ ಕಠೋರ ಖೂಳಹೇಡಿಯೇ
ಡೇಮೊಕ್ರೆಸಿಯಲ್ಲಿ ಸ್ಥಾನವಿಲ್ಲ ನಿನಗೆತ್ತಿನಗಾಡಿಯೇ।'

ಎಂದು ಮಹಾಕವಿಯ ಸ್ಫೂರ್ತಿಯಿಂದ ದಂಗೆಯೆದ್ದಳು. ಇಡಿ ಸಭೆ ಅವಾಕ್ಕಾಯಿತು! ಸೂಜಿ ಉದುರಿದರೆ ಸದ್ದಾದೀತು ಅಂಥ ನಿಃಶಬ್ದತೆಯುಂಟಾಯಿತು ಸುತ್ತು ಮುತ್ತ. ಅಷ್ಟು ಹೊತ್ತಿಗೆ ಬೆಳಗಿನ ೮೧/೨ ಗಂಟೆಯಾಗಿತ್ತಾದ್ದರಿಂದ ಶಂಖ ಹಿಡಿದು ನಮ್ಮ

ಮೂಗೂರಿನ ಮರಿದಾಸಯ್ಯನು ಬಾಗಿಲ ಬಳಿ ಬಂದು ಜಗನ್ನಾಥ ಜೇಗಟೆ ಹೊಡೆದು ಈ ರೀತಿ ನಕ್ಕ –

ನಗೆಯು ಬರುತಿದೆ । ನನಗೆ
ನಗೆಯು ಬರುತಿದೆ ॥
ಸೊಗಸಿನ ಹೊಸ ಹುಂಬರಿಂದು
ಹಗರಣ ಹೇಳುವುದ ಕಂಡು ॥ಪಲ್ಲ॥

ರೇವತಿಯನು ಉದ್ದವೆಂದು
ರಾಮ ಒನಕೆಯೆತ್ತಿ ಹೊಡೆದು।
ಸಾವರಿಸಿದ ಸಣ್ಣ ಮಾಡಿ
ಎಂಬ ಕತೆಯ ನಂಬುವಂಥ ॥೧॥ ಸೊಗ

ಭೂಮಿ ಗಗನ ಒಟ್ಟಿದ್ದವು
ಪ್ರಾಣಿಗಳೂ ಮನುಜರೊಡನೆ।
ಪ್ರೇಮದಿಂದ ಮಾತನಾಡು
ತಿದ್ದುದನ್ನು ನಂಬುವಂಥ ॥೨॥ ಸೊಗ

ಹಿಟ್ಟು ಬೂದಿ ಮಣ್ಣು ಕಲ್ಲು
ಎಲ್ಲ ಒಂದೆ ಎಂಬ ಬುದ್ಧಿ।
ದಿಟ್ಟನಾದ ಪಶುಪತಿವೊಲು
ತಾಳಿದಂಥ ಪಶುಗಳಾದ ॥೩॥ ಸೊಗ

ಅರ್ಥ ಸಾಮ್ಯದಿಂದ ಹೊರಟು
ವ್ಯರ್ಥ ಸಾಮ್ಯಗಳನು ನಂಬಿ
ಮತ್ಸರಿಸುವ ಮಂಗತನದ
ಕುತ್ಸಿತತೆಯನಪ್ಪಿಕೊಂಬ ॥೪॥ ಸೊಗ

***

'ವ್ಯಾಪಾರಿಗಳು ಲಾಭಬಡಕರಾದರು. ನೌಕರರು ಲಂಚಗುಳಿಗಳಾದರು, ಒಕ್ಕಲಿಗರು, ಹಾಲಿಗರು, ತರಕಾರಿಗರು ಧನಮತ್ಕುಣಗಳಾದರು (ದುಡ್ಡು ಹೀರುವ ತಗಣಿಗಳಾದರು) ಪೋಲೀಸರು ದುಷ್ಕೃತ್ಯ ಪ್ರೇಕ್ಷಕರಾದರು. ರೈಲಿನವರು ನಿದ್ರಾಮುದ್ರಿತರಾದರು. ಕೂಲಿಕಾರರು ಮುಷ್ಕರಕಾರರಾದರು. ಕಳ್ಳರು ಕುಬೇರರಾದರು. ಸಾತ್ವಿಕರು ಸಾಯದವರೂ ಬದುಕಲಾರದವರೂ ಆದರು' – ಏನಪಾ ನಿನ್ನದು? ಮಧ್ಯಮವರ್ಗದವನಂತೆ ನೀನು!

ನೀನ್ಹೇಗಿದ್ದೀಯಾ? ಹೇಡಿ! ಮತ್ತೇಕೆ ಹೀಗೆ ಎಲ್ಲರನ್ನೂ ದೂರುವೆ? ನಾಲಿಗೆ ಹೆಚ್ಚಾದರೆ ನಿನ್ನನ್ನು ಕಮ್ಯುನಿಸ್ಟನೆಂದು ಸರಕಾರ ಹಿಡಿದು ಹಾಕೀತು, ಜೋಕೆ! ನಿನ್ನಂಥ ದಾಸಪಂಥ ಹಿಡಿದವರು ಹೆಚ್ಚಾಗಿಯೇ ಉಳಿಗಾಲ ಹೋಗಿ ಅಳಿಗಾಲ ಬಂದಿರುವುದು. ಪೂರ್ವದಲ್ಲಿ ಧರ್ಮೋತ್ಥಾಪನಕ್ಕೆ ಬ್ರಾಹ್ಮಣರು ಕ್ರಾಂತಿಕಾರಿಗಳಾದರೆ ಇಂದು ನಿನ್ನ ವರ್ಗದವರಿಗೆ ಆ ಕರ್ತವ್ಯ ಗಂಟುಬಿದ್ದಿದೆ. ಆದರೆ ನೀನು ಹೇಡಿ – ಹೆಂಡತಿ ಮಕ್ಕಳ ಹೊಟ್ಟೆ ಹೊರೆಯಲಾರದೆ ಅವಳಿಗೆ ಸ್ವತಂತ್ರಳಾಗೆಂದು ಹೇಳಿ, ಅಪ್ಪನ ಆಸ್ತಿಯಲ್ಲಿ ಪಾಲು ತೆಗೆದುಕೊಂಡು ಬಂದ ಹೊರತು ಮನೆಮೆಟ್ಟಿಲು ಹತ್ತಬೇಡ ಎಂದು ಹೆದರಿಸಿ, ಹೆಚ್ಚಿಗೆ ಮಾತಾಡಿದರೆ ವಿವಾಹವಿಚ್ಛೇದ ಮಾಡಿಕೊಡಲಿಕ್ಕೆ ಪ್ರಾರಂಭಿಸಿಬಿಟ್ಟಿದ್ದೀಯಾ! ಅಯ್ಯೋ ಗಂಡಸೇ–ಮೀಸೆ ಬೋಳಿಸಿದವನೇ! ಸಂಸ್ಕಾರ, ವಿದ್ಯೆಯಾವುದಿದ್ದರೇನು, ಧೈರ್ಯವಿಲ್ಲದವನಿಗೆ, ನೀನು ಹೀಗೇ ಇರುವೆಯಾದರೆ ಮಧ್ಯಮವರ್ಗವೆಂದರೆ ಗಂಡಸರಿಲ್ಲದ ಹೆಂಗಸರ (ಹಳೇ ಈಡಿಯುಂ ಪ್ರಕಾರ, ಹೆಂಗಸರು ಕೋಪಿಸಿಕೊಳ್ಳಬಾರದು) ವರ್ಗ ಎಂದು ಜಗತ್ತಿಗೆ ಸಾರಿಬಿಡುತ್ತೇನೆ ನೋಡು!

ಕಲಿಯುಗದಲ್ಲಿ ಕಲ್ಲುಕೋಳಿ ಕೂಗಿ ಮುಲ್ಲಾ ಸಾಬ ಚೂರಿ ಹಾಕಿದರೂ, ನೀರುದನವನ್ನು ಕಲ್ಲುಹುಲಿಯೆದ್ದು ತಿನ್ನಹೋದರೂ ಮೊಲ ಹೋಗಿ ಆಟಂಬಾಬು ತೆಗೆದುಕೊಂಡು ಸಿಂಹವನ್ನು ಕೊಂದರೂ ಮಧ್ಯಮವರ್ಗದವನು ಹುಚ್ಚರಾಸ್ಪತ್ರೆಗಳಲ್ಲದೆ ಇನ್ನಾವುದಕ್ಕೂ ಅರ್ಹನಾಗನಯ್ಯ ಮರುಳಸಿದ್ಧ ಮಹೋದರಾ!

   ಮಧ್ಯವರ್ಗದಮಾನವಾ
ನಿ!ರ್ವಿದ್ಯರಿಗು ಕೀಳಾದವಾ!
   ಮದ್ಯಕೂಡಾ ಸಿಕ್ಕದೋ
ನೀ। ವಧ್ಯನೇ ಎಂದಪ್ಪುದೋ।
   ಮರಣ ನಿನಗೋಬಾರದು
ಜೀ। ವನವು ನಿನ್ನೆದೆ ಸೇರದು,
   ಹಗಲು ಬೆಳಕನು ತೋರದು
ಇ।ರುಳಲ್ಲಿ ಕಣ್ ಕೈ ಸಾರದು।
   ನೀನೆ ನಿನ್ನನು ನಂಬೆಯೋ
ನಿ। ನ್ನಲ್ಲೆ ನಿನಗೆಡೆಯಿಲ್ಲವೊ,
   ಸಿರಿಯ ಲೋಕವ ಹಿಡಿಯುವೆ
ಕೈ। ಜಾರೆ ಹೋಯ್ತೆಂದೊರಲುವೆ!
   ಗಂಡಸಿಗೆ ನೀ ಹಗುರವೋ

ಹೆಂ!ಡಂದಿರಿಗೆ ಗಿರಿಭಾರವೋ,
ಬಡವನೋ ದೊಡ್ಡಾತನೊ?
ಮತ್ತದರೊಳೋತಪ್ರೋತನೋ!

***

"ಒಡೆಯತನ ಗೊತ್ತಿಲ್ಲದ ಒಡೆಯರ ಹಾವಳಿಯಿಂದ ಅಧಿಕಾರ, ಅರ್ಥ, ಭೂಮಿ, ಕಾರಖಾನೆ, ವಸ್ತುಸಂಗ್ರಹ, ಜ್ಞಾನ ಎಲ್ಲವೂ ಅಪಾತ್ರ ವಿನಿಯೋಗಕ್ಕೆ ತುತ್ತಾಗಿವೆ. ನಾನು ಪಾತ್ರ ತಾನು ಪಾತ್ರ ಎಂದು ಪ್ರತಿಯೊಬ್ಬ ಅಪಾತ್ರನೂ ತನ್ನ ಪಾತ್ರವನ್ನು ಪ್ರದರ್ಶಿಸುತ್ತಾನೆ. ಎಲ್ಲ ಮಣ್ಣು ಪಾತ್ರಗಳೇ! ಚಿನ್ನದ ಪಾತ್ರಕ್ಕೆ ಮಾತ್ರ ಬಾಯಿ ಇಲ್ಲ. ಬಾಯಿ ಇದ್ದರೂ ಬೀಗದೊಳಗೆ!" ಎಂದು ಹೇಳುವ ಸಂದರ್ಭ ಬಂತು. ಇಂದು ನ್ಯಾಯದರದ ಅಂಗಡಿಗೆ (Fair Price Shop) ಹೋಗಿದ್ದೆ. ಅಲ್ಲಿ ಸಾಲುಪಟ್ಟಿಯಲ್ಲಿ ನಿಂತೆ (ಕ್ಯೂ ಕೂಡಿಕೊಂಡು). ನನ್ನ ಸರದಿ ಬಂದರೆ ಮುಂದಿನ ಸರದಿಯವರು ಬಳಸಿಕೊಳ್ಳುತ್ತ ನಡೆದರು. ಹೇಳುವವರಿಲ್ಲ, ಕೇಳುವವರಿಲ್ಲ. ಅಧಿಕಾರಿ ಕಡೆಗೆ ಕೇಳುತ್ತೇನೆ ಸುಮ್ಮನಿದ್ದಿರೇಕೆ? ಎಂದು. ಏನು ಎರಡು ಬಿಗಿಯಬೇಕಾಗಿತ್ತೆ ಬಲಾತ್ಕಾರ ಮಾಡಿದವನಿಗೆ? ಎಂದರೆ, ನಿಮ್ಮಂಥ ಮುದುಕರು ಇಲ್ಲಿಗೆ ಬರಬಾರದು ಎನ್ನುತ್ತಾನೆ. ಹಣ್ಣೆಲೆ ಉದುರುವಾಗ ಕಾಯೆಲೆ ನಕ್ಕ ಹಾಗಾಯಿತಲ್ಲವೇ ಇದು? ಹಾಗೆ ಖಾಲಿ ಜೋಳಿಗೆ (ಹಸಿಬೆ) ಹಿಡಿದು ಮನೆಗೆ ಬರುವಾಗ ಹಾದಿಯಲ್ಲೊಬ್ಬ ಬೀದಿಗವಾಯಿ ಅಮೃತ ಉಣಿಸಿದ

ಮುದುಕನಾಗೀ ಬದುಕಿ ಫಲವೇನು?
ಈ ಲೋಕದಲ್ಲಿ ॥ಪ॥
ಎಲ್ಲಿ ಹುಟ್ಟಿದರೇನು ನರನಾತ್ಮ।
ಭೂವಲಯದಲ್ಲಿನ್ನೇನ ಕಲಿತೊಡದೇನು ಪುರುಷಾರ್ಥ॥
ಎಲ್ಲಿ ಮುಟ್ಟಿದರಲ್ಲಿ ದಹಿಸುವ
ಎಲ್ಲಿ ಮೆಟ್ಟಿದರಲ್ಲಿ ಕಚ್ಚುವ
ಬಲ್ಲಿದನ ಬಲವಿಲ್ಲವಾದರೆ
ಕಲ್ಲಿಗೂ ಕಡೆ ನರನ ಜೀವನ ॥೧॥
ಸರದಿ ಕಾಯುವ ನಾಗರಿಕನಾಗಿ
ಭಾರತದಿ ಬಾಳುವ। ಸದಭಿಮಾನವ ಬಿಟ್ಟವನೆ ಗೆದ್ದ॥
ಧುರದಿ ಶಾಪ ಶರಪ್ರಯೋಗದೆ
ಶಿರವ ಕಡಿಯಲು ಬರದ ಜನಗಳು

ಮುದುಕರೆನಿಸುವರಯ್ಯ ಅವರನು
ವಧಿಸಿದರು ಕೇಳ್ವವರೆ ಸಿಕ್ಕರು ॥೨॥
ಕೊಲ್ಲಬಲ್ಲವರಷ್ಟೆ ಯುವಜನರು।
ಕೋವಿಗಳ ಗುಂಡಿಯ। ನೊತ್ತಬಲ್ಲವರಷ್ಟೆ ಕೋವಿದರು॥
ಎಲ್ಲವನು ಕದ್ದೊಯ್ವ ಬುದ್ಧಿಯು
ಎಲ್ಲಿ ಕಾಣದೊ ಅಲ್ಲಿ ಮುಪ್ಪಿದೆ
ಎಲ್ಲ ಕಾಂಗ್ರೆಸ್ಸೆಲ್ಲ ಕಾಯದ
ಕಾಯಿದೆಗೆ ಕಾವಲುಗಳಿರದೆಲೆ ॥೩॥

***

ಯಾರೋ ಹೇಳುತ್ತಿದ್ದರು – ಆಟಂ ಬಾಂಬನ್ನು ಅಮೇರಿಕ ಪ್ರಯೋಗಿಸಿತು. ಹ್ಯೂಮನ್ (ಮಾನವ್ಯ) ಬಾಂಬನ್ನು ಜಪಾನು ಪ್ರಯೋಗಿಸಿತು. ಇದರ ಮೇಲೆ ಹಾಲಿವುಡ್ಡಿನವರು ಅನಟಾಮಿಕ್ ಬಾಂಬನ್ನು (ಶರೀರ ವಾಯುಗಳ ಬಾಂಬನ್ನು) ಪ್ರಯೋಗಿಸಿದರು ಎಂದು. ಒಂದನೆಯದರ ಅರ್ಥ ಹೇಳುವುದೇ ಬೇಡ. ಎರಡನೆಯದೆಂದರೆ ಬಾಂಬೊಯ್ವ ವಿಮಾನದ ಸಾರಥಿ, ಬಾಂಬು ಮತ್ತು ವಿಮಾನ ಈ ಮೂರೂ ಏಕಕಾಲದಲ್ಲಿ ಶತ್ರುವಿನ ಮೇಲೆ ಬಿದ್ದು ಅವನನ್ನು ಇಲ್ಲವೆ ಅವನ ಆಸ್ತಿಯನ್ನು ನಾಶಮಾಡಿ ಅಲ್ಲೇ ಸ್ವತಃ ನಷ್ಟ ಹೊಂದುವುದು, ವಿನಾಶವಾಗುವುದು. ಮೂರನೆಯದೇನಪಾ? ಅಂದೆ. ತಿಳಿಯತೆ? ಏನು ತಿಳಿಯಿತು ನಿಮಗೆ? ಸ್ವಲ್ಪ ತಡೆಯಿರಿ. ಶರೀರದ ವಿಶಿಷ್ಟ ಅವಯವಗಳಲ್ಲಿ ಕೆಲವನ್ನು ಆಯುಧವನ್ನಾಗಿ ಬಳಸುವವರು, ಸಾಧನವನ್ನಾಗಿ ಮಾಡಿಕೊಂಡು ಹಣ ಗಳಿಸುವವರು ಯಾರು? ಒಂದು ಡೊಂಬರು, ಸರ್ಕಸ್ಸಿನವರು, ಜಟ್ಟಿಗಳು. ಎರಡು ಅವರಿಗಿಂತ ಹೆಚ್ಚು ಗಳಿಸುವವರು ನರ್ತಕರು, ಗಾಯಕರು, ಅಭಿನಯಕಾರರು, ವೇಶ್ಯೆಯರು. ಹಾಲಿವುಡ್ಡೆಂದರೆ ತಾರಾಲೋಕ, ಚಲನಚಿತ್ರದ ತವರೂರು, ಶೃಂಗಾರ ಸಮುದ್ರ, ಅಭಿನವ ಪ್ಯಾರಿಸ್ ಇಲ್ಲವೆ ಇಂದ್ರಭವನ. ಅಲ್ಲಿ ಅನಟಾಮಿಕ್ ಬಾಂಬ್ – ಅಂದರೆ ಶಾರೀರಿಕ ಶತಘ್ನಿ – ಮಾನವನ ಮನಸ್ಸು, ದೇಹ, ಅರ್ಥಗಳನ್ನು ಲಯಗೊಳಿಸುವ ಸಾಧನದ ಎಂದರೆ ಪಣ್ಯಾಂಗಯಷ್ಟಿಯ ಪ್ರಯೋಗ ನಡೆಯಿತಂತೆ! ಇದೇನು ಹೊಸದೆ? ಇಂಥ ಪ್ರಯೋಗಗಳು ಭೋಗದಾಸರಾದ ಕುಬೇರರಲ್ಲಿ ಅನಾದಿಯಿಂದಲೂ ನಡೆದುಕೊಂಡು ಬಂದಿವೆ. ಮಾಡುವವರಿದ್ದರೆ ನೋಡು ನನ್ನ ಭಾಗ್ಯ, ಕೊಳ್ಳುವವರಿದ್ದರೆ ಕಾಳಿನ ಬೆಲೆಗೇನು ಕಡಿಮೆ? ಅರಕ್ಷಿತ ದೇಹ ಮನಸ್ಸು – ಅರ್ಥಗಳಿದ್ದಲ್ಲಿ ಬಾಂಬಿನ ಬಿಂಕಕ್ಕೆ ಮೇರೆಯುಂಟೇ? ಹಾಲಿವುಡ್ಡಿಗೆ ಹೋಗುವವರು ಭೋಗಿಗಳು, ಭುಜಂಗರು, ಧನ ದೈವತರು – ಅಂದ ಮೇಲೆ ಅವರಿಗೆ ಅದೇ ಸುಕುಮಾರಪ್ರಹರಣ! ಹೆಣವಿದ್ದಲ್ಲಿ ಹದ್ದು ಹಾಯುತ್ತದೆ. ಇಂಥವರಿದ್ದೆಡೆಗೇ ಅಂಥ

ಬಾಂಬು ಬೀಳುತ್ತದೆ. ದೀಪವಿದ್ದೆಡೆಗೇ ಪತಂಗ ಹಾರುತ್ತದೆ. ಅಂಥ ಬಾಂಬಿನ ಮೇಲೆ ಹಾರಿಯೇ ಸರ್ವಸ್ವ ಕಳೆದುಕೊಳ್ಳುವರು. ಅದರಲ್ಲೇನಾಶ್ಚರ್ಯ?

ನಾಯಿಗು ಕೋಲಿಗು, ಕೋತಿಗು ಕೊರಡಿಗು
ಕತ್ತೆಗು ಲತ್ತೆಗು ಗಂಟಣ್ಣ।
ದಡ್ಡಗು ಬೆತ್ತಕು, ಕೇಡಿಗು ಬೇಡಿಗು
ಹುಲಿಗೂ ಬೋನಿಗು ನಂಟಣ್ಣ॥ ॥೧॥
ತುಂಟಗು ಬಂಟಗು, ತುರುಸಿಗು ಮೆಣಸಿಗು
ಲೋಭಿಗು ಕಳ್ಳಗು ಗಂಟಣ್ಣ।
ಲಂಚಗುಳಿಗು ಜೇಲಿನ ಹುರಿಮಂಚಕು
ಎಣ್ಣೆಗು ಸೀಗೆಗು ನಂಟಣ್ಣ ॥೨॥
ಅಮೇರಿಕದ ಬ್ಯಾಂಕಿಗನಿಗು ಹಾಲೀ
ವುಡ್ಡಿನ ತಾರೆಗು ಗಂಟಣ್ಣ।
ಭಾರತ ದೇಶದ ಹೇಡಿ ಪ್ರಜೆಗೂ
ಮಹಾಮದರಿಗೂ ನಂಟಣ್ಣ ॥೩॥

***

ಕುಬೇರರ ಲೋಭದಿಂದ ಕುಚೇಲರು ಬಳಲುವರೆಂಬ ಕೂಗು ಕನಿಕರ ಹುಟ್ಟಿಸುವಂಥದೆಂಬುದರಲ್ಲಿ ಸಂಶಯವಿಲ್ಲ. ಹಲವರು ಹೌದೆಂದು ತಿಳಿದರೆ ತಪ್ಪಲ್ಲ. ಆದರೆ ಮೊನ್ನೆ ರೈಲು ಬಂಡಿ ಹತ್ತಿದ ರಂಗಕ್ಕನ ಅನುಭವವೇ ಬೇರೆ. ರೈಲು ಬಂದಿತು. ಜನ ನುಗ್ಗಿತು. ಹೇಗೆ? ದಿವಾಳಿಯಲ್ಲಿ ಬೆದರಿದ ದನ ಬೇಲಿಯಲ್ಲಿ ನುಸುಳುವಂತೆ. ಕೈಯಲ್ಲಿ ಗಂಟನ್ನು ಹಿಡಿದ ರಂಗಕ್ಕನು ಪ್ರವೇಶಿಸುವಷ್ಟರಲ್ಲಿ ರೈಲು ಹೊರಟಿತು. ಕಣ್ಣಿದ್ದೂ ಕುರುಡನಾದ ಪ್ಯಾಸೆಂಜರ್ ಪಿಶಾಚನೊಬ್ಬನು ಅವಳನ್ನು ಹೊರನೂಕಿದನು. ಕಾಂಬವರಾರು? ಕೇಳುವವರಾರು? ಜನಜಂಗುಳಿ ಜಾತ್ರೆ ಸೇರಿತ್ತು. ಕಣ್ಣು ಬಿಡುವುದರ ಹೊರತು ಬಾಯಿ ಬಿಡುವುದನ್ನು ಬಲ್ಲುದೇ ಅದು? ಗಾಂಧೀಜಿ ಅಂದಂತೆ ಅದು ಮೂಕಕೋಟಿ. ಅಧಿಕಾರಿಗಳೋ ಕುಚೇಲತನದಿಂದಲೇ ಕಣ್ಣನ್ನು ಕಳೆದುಕೊಂಡವರು, ಅದೆಂತು? ಪೀನೋ ದೇವದತ್ತಃ ದಿವಾ ನ ಭುಂಕ್ತೆ– ಹಗಲಿನಲ್ಲಿ ಊಟ ಮಾಡುವುದಿಲ್ಲ. ಆದರೆ ದೇವದತ್ತನು ಆನೆಮರಿಯುಂತಿದ್ದಾನೆ. ಅಂದರೆ ರಾತ್ರಿಯಲ್ಲಿ ಚೆನ್ನಾಗಿ ಕತ್ತರಿಸುತ್ತಾನೆ. ಅಧಿಕಾರಿಗಳು ಕತ್ತರಿಸುವುದೇನನ್ನು? ಲಂಚದ ಪಂಚಭಕ್ಷಪರಮಾನ್ನವನ್ನು. ಬಸುರಿ ರಂಗಕ್ಕನ ಗತಿ? ದೇವರೇ ಗತಿ! ಬಿಟ್ಟಿ ಉಂಡ ಬಸವಯ್ಯ ಕೆಟ್ಟು ಹೋದ ಎಂಬಂತೆ ಅಧಿಕಾರಿಗಳು ಸರ್ಕಾರಕ್ಕೂ ಹೆದರರು, ಜನರಿಗೂ ಅಂಜರು. ಸಂಬಳವಿಲ್ಲದೆ ಅತ್ತವರು

ಕುಂಬಳವನ್ನು ಕದ್ದು ಮಾರಲು ಕಲಿತಿದ್ದಾರೆ. ರಂಗಕ್ಕ ಸುಧಾರಿಸಿಕೊಂಡೇಳುವಷ್ಟರಲ್ಲಿ ರಂಗನಾಥನ ಭಕ್ತ ರಾಮದಾಸನು ಬರಬೇಕೆ? ಬಂದವನು ಹಾಡಿಯೇ ಹಾಡಿದ –

ರಂಗನನ್ನು ನಂಬಿದವಗೆ
ರಾಜ್ಯ ಕೋಶದಾಶೆಯಿಲ್ಲ
ಅಂಗಜ ಪಿತ ಭಕ್ತ ವರಗೆ
ಅಂಗನೆಯರ ಪರಿವೆಯಿಲ್ಲ!
ರಾಧೆಯೋಪನೆಡೆಗೆ ಸೇರಿ
ಹೋದ ನನಗೆ ಹೆಂಡಿರೆಲ್ಲ,
ಕಾದಲೆಯರ ಮೇದಿನಿಯಲಿ
ಯೋಧ ನಾನು ಬಲ್ಲರೆಲ್ಲ!
ಭಾರತದಲಿ ಹುಟ್ಟಿ ಭೂಮಿ
ಭಾರರಾಗಿ ಬಾಳ್ವ ಯೋಗ,
ಯಾರಿಗುಂಟು ನನ್ನ ಹಾಗೆ
ಊರನುಂಡು ಮೆರೆವ ಭೋಗ?
ಪ್ರೇಮಿಸುವೆನು ನೀಡುವವರ,
ಹೋಮಿಸುವೆನು ನೀಡದವರ,
ರಾಮದಾಸ ಬೋಧಿಸುವೀ
ನೇಮವನ್ನು ಪಾಲಿಸು ನರ!

***

ಗಣೇಶಚೌತಿ ಮಾಡಿಯೇ ಮಾಡಿತು ನಮ್ಮೂರ ಜನ. ಕಡುಬಿನ ಕಾಳಗ, ಉಂಡೆಯ ಪಂದ್ಯ, ಪಂಚಕಜ್ಜಾಯದ ಪಂಚಾಯತಿಕೆ – ಒಂದೇ ಎರಡೇ ವಿಧಾನಗಳು! 'ಅಬ್ಬಾ!' ಎನ್ನುವಂತೆ ಹಬ್ಬ ಮಾಡಿತು ಮಂದಿ. ಸಾರ್ವಜನಿಕ ಗಣಪತಿ, ಮನೆಗಣಪ್ಪ, ಸಾಲಿಯ ವಿನಾಯಕ ಎಂಬ ವಿವಿಧ ಜಾತಿಯ ಗಣಪತಿಗಳು ತಂತಮ್ಮ ದರ್ಬಾರು ಹಾಲಿನಲ್ಲಿ ಒಡ್ಡೋಲಗ ಕೊಡುತ್ತಿದ್ದವು. ಒಂದಕ್ಕಿಂತ ಒಂದರ ಹೊಟ್ಟೆ ದಪ್ಪ, ಆದರೆ ತಲೆ ಮಾತ್ರ ಒಂದಕ್ಕಿಂತ ಒಂದರದು ಸಣ್ಣ! ಅದು ಮಾಡಿದವನ ತಲೆಯನ್ನು ಪ್ರತಿಬಿಂಬಿಸುತ್ತದೆ. ಮಾಡಿಸಿದವನ ಹೃದಯವನ್ನು ಚಿತ್ರಿಸುತ್ತದೆ, ನೋಡುವವರ ದೃಷ್ಟಿಯನ್ನು ಸ್ಪಷ್ಟಪಡಿಸುತ್ತದೆ. ಹಿಂದುಸ್ಥಾನದಲ್ಲಿ ಎಂದರೆ ಬಹಳ ವಿಶಾಲವಾಗಿ ಹೋದೀತು – ತಂತಮ್ಮ ಎಡಬಲದ ಮನೆಗಳಲ್ಲಿ ಅನ್ನ ವಸ್ತ್ರ ವಿದ್ಯೆಗಳಿಲ್ಲದ ಅಭಾವರಸಕ್ಕೆ ಕರಗಿದ ರಸಿಕರು ವಿದ್ವಾಂಸರ

ವ್ಯಾಖ್ಯಾನ ಕೇಳಲು ಕುಳಿತಿರುವ ಮೋಜೇಮೋಜು! ಸಾಹಿತ್ಯವು ಜೀವನದ ಪ್ರತಿಬಿಂಬವಾದರೆ ಗಣಪತಿಯ ಹೊಟ್ಟೆಯು ಭಕ್ತರ ಉದರನೀತಿಯನ್ನು ಪ್ರತಿಬಿಂಬಿಸುತ್ತದೆ ಎನ್ನಬೇಕು ಇಂದಿನ ಕಾಲದಲ್ಲಿ. ನಾನೂ ಪ್ರಚ್ಛನ್ನನಾಗಿ ಒಂದು ವ್ಯಾಖ್ಯಾನವನ್ನು ಕೇಳಲು ಹೋಗಿದ್ದೆ. ಭಾಷಣಕಾರ ವಿದ್ಯಾಮೂರ್ತಿಯಾದ ಗಣಪತಿಯಿಂದ ನೈವೇದ್ಯಮೂರ್ತಿತ್ವವನ್ನು ಮಾತ್ರ ಅನುಕರಿಸುವ ದ್ವಿಪದಿ (Bipeds)ಗಳನ್ನು ಕುರಿತು ನಮ್ಮ ಬಸವಪ್ಪನಲ್ಲೊಂದು ಪದ್ಯ ಹಾಡಿದ. ಅದು ಹೀಗಿತ್ತು –

ಶಂಭುಶಿವೆಯರಂದೊಮ್ಮೆ ಗಣಪತಿಯ
    ರೂಪಿಸಿದರು ಕುಳಿತು
ತಲೆಯದಪ್ಪಿಸಿದರೆಂದು ಬುದ್ಧಿಬಲ
    ತೇಜವಿರುವುದೊಳಿತು
ಗಂಗೆ ಕಂಡಳೀಸವತಿಯ ಮಗನಿಗೆ
    ಮಾಡುತೇನೆ ಮದ್ದು –
ಎಂದು ನೀರು ತುಂಬಿದಳು ಹೊಟ್ಟೆಯಲಿ
    ಕಲಿಯುಗದಲ್ಲೆದ್ದು!
ಸಿಟ್ಟಿಗೆದ್ದು ಗಣಪತಿಯು ಮೂಗನು –
    ದ್ದುದ್ದ ನೀಡಿಸುತ್ತ,
ಕುಡಿದು ಗಂಗೆಯನು ಜಡರತಲೆಗಳಲಿ
    ಹರಿಸಿಬಿಟ್ಟನತ್ತ!
'ಜಡ'ಕೆ ನೀರು ಎಂದರ್ಥ ಬಂತು ಈ
    ಜಂಡಭವಾಂಡದಲ್ಲಿ;
ಜಡರು ಹೆಚ್ಚಿ ನೀರುಂಡರಾದರೋ
    ಕಲಿಯ ಕಾಲದಲ್ಲಿ!
ತೊಗಲಿಗಲ್ಲದೇ ತಲೆಗೆ ಬೆಲೆಯ ಕೊಡ
    ದಾಯ್ತು ಲೋಕವಿಂದು...
ಹಗಲಿನಲ್ಲೆ ಕಂಡರೂ ಸತ್ಯದಾ
    ಗುರುತುಹತ್ತದೆಂದೂ!
ಬಾಲ ಸುಟ್ಟರೂ ತಿಳಿಯದಂಥ ನರಿ
    ಯಾಯಿತಿಂದು ಮಂದಿ....

ನಾಯಿ ಹಿಡಿದರೂ ತನ್ನ ಮುಖವ ಮು
 ದ್ದಿಸುತ್ತಿತ್ತು ಹಂದಿ!
ಪರರಮನೆಗೆ ಬೆಂಕಿಯನು ಹಾಕಿ ಸುಡು
 ವರು ಪಟಾಕಿಯನ್ನು,
ನರರು ನರರನೇ ತಿಂದು ತೇಗುವರು
 ಕೊಟ್ಟು ಸಾಲವನ್ನು!
ಕೊಬ್ಬಿದವರದೀಹಬ್ಬ! ಡುಬ್ಬ ಕರ–
 ಗಳಿವಹಾಗೆ ದುಡಿವ
ಮಬ್ಬುಜನಕೆ ತೋರುವರು ಹಾರವನು
 ಹೊಟ್ಟೆ ಹೊತ್ತು ಮುಡಿವ!

***

ಅತ್ತೆ ಸೊಸೆಯಲ್ಲಿ ಯಾರದು ನ್ಯಾಯ? ಎಂಬ ಚರ್ಚೆ ಶಿಷ್ಯವರ್ಗದಲ್ಲಿ ನಿನ್ನೆ ಬಂದಿತು. ಸೊಸೆ ಮೊದಲು ಮನೆ ಹೊಕ್ಕಾಗ ಅಜ್ಞಾನಿಯೂ ಮೂರ್ಖಳೂ ಅವಿನಯ ಸಂಪನ್ನಳೂ ಹೃದಯಹೀನಳೂ ಆಗಿದ್ದಳು. ಅತ್ತೆ ತಾಯಿಯಂತೆ ಇದ್ದಳು. ಕಾಲ ಕಳೆದಂತೆ ಸೊಸೆ ಜಡಳೂ ಮೂರ್ಖಳೂ ಕೋಪಿಯೂ, ಪಿಸುಣಳೂ ಆದಳು. ಅತ್ತೆಯ ಸಹನೆ ಕಡಿಮೆಯಾಗುತ್ತ ಹೋಯಿತು. ಒಂದು ವರುಷದ ನಂತರ ಗಂಡನ ಕೈಬಲದಿಂದ ಅಪ್ಪನ ಉಪದೇಶಬಲದಿಂದ ಸೊಸೆಯೆಂಬ ಹೆಣ್ಣಿನ ಹೃದಯ ವಿಕಾಸ ಹೊಂದ ತೊಡಗಿತು. ಆದರೆ ಅಷ್ಟು ಹೊತ್ತಿಗೆ ಅತ್ತೆಯ ಮನಸ್ಸು ಕಹಿಯಾಗಿ ಹೋಗಿತ್ತು. ಅವಳಿಗೆ ಸೊಸೆಯನ್ನು ಕಂಡರೆ ಮಾರಿ, ಮಸಣಿ, ಪಿಶಾಚದಂತೆ ಕಾಣುವಷ್ಟಾಗಿ ಹೋಗಿತ್ತು. ಆದುದರಿಂದ ಅವಳು ಸೊಸೆ ಮಾಡಿದ್ದೆಲ್ಲ ತಪ್ಪೆಂದು ಉಗ್ರವಾಗಿ ಪ್ರತಿಭಟಿಸತೊಡಗಿದಳು. ಮೊದಲು ಸೊಸೆ ಜನರಿಗೆ ಅಪ್ರಿಯಳೆನಿಸಿದ್ದಳು. ಅವಳೀಗ ಸುಪ್ರಿಯಳಾಗಿ ಅತ್ತೆಯೇ ಕೆಟ್ಟವಳೆನಿಸುವ ಹೊತ್ತು ಬಂದಿತು. ತಪ್ಪು ಯಾರದಿಬ್ಬರಲ್ಲಿ? ಇಬ್ಬರನ್ನೇ ತೆಗೆದುಕೊಂಡರೆ ಸೊಸೆಯದೇ ತಪ್ಪು. ಏಕೆಂದರೆ ಗಂಡನ ಮನೆಗೆ ಬರುವಾಗ ಪರೀಕ್ಷೆ ಪಾಸಾಗಿ ಡಿಗ್ರಿ ಪಡೆದು ನೌಕರಿಗೆ ಸೇರುವವನಂತೆ ಗುಣಶೀಲ ಕರ್ಮಗಳಲ್ಲಿ ಒಂದು ಮಟ್ಟಕ್ಕೆ ಮುಟ್ಟಿದವಳೆಂದೇ ಗಂಡನ ಮನೆಯವರು ತಿಳಿದುಕೊಳ್ಳಬೇಕಾಗುವುದಲ್ಲದೆ ಅವಳೊಂದು ಮಗುವೆಂದು ಪಾಠಶಾಲೆಗಾರಂಭಿಸುವುದು ಅಸ್ವಾಭಾವಿಕ. ಹೀಗಾಯಿತು ನಮ್ಮ ಲೀಲಮ್ಮನಿಗಿಂತ ಅವಳನ್ನು ಭೂಲೋಕಕ್ಕೆ ತರಲು ದೇವರೊಡನೆ ನೂರಕ್ಕೆ ೫೦ ಪಾಲುದಾರರಾಗಿ ನಿಂತ ಅವಳ ತಾಯ್ತಂದೆಯರೇ ಕಾರಣರೆನ್ನಬೇಕಾಗುವುದಿಲ್ಲವೆ? ಅವರೇ ಮಕ್ಕಳಿಗೆ ಮೊದಲ ಗುರುಗಳು. ಅವರು ಪ್ರೇಮಪಾಠವನ್ನು, ಶುಶ್ರೂಷಾಶ್ರದ್ಧೆಯನ್ನು, ವಿನಯಸೌಂದರ್ಯವನ್ನು, ವಿಚಾರಶಕ್ತಿಯನ್ನು ಮಗಳಿಗೆ ಕೊಡದುದೇ ಇಷ್ಟು ಅನಾಹುತಕ್ಕೆ

ಕಾರಣವಾಯಿತಲ್ಲವೆ? ಅದರಲ್ಲೂ ತಂದೆಗಿಂತ ಮಕ್ಕಳಿಗೆ ತಾಯ ನೀತಿಧರ್ಮ ಸದ್ಭಾವ ಪ್ರಚೋದನೆಯೇ ಹೆಚ್ಚು ಪರಿಣಾಮಿಯಾದುದರಿಂದ ತಾಯಭಾಗದ ತಪ್ಪೇ... ಅದರಲ್ಲೂ ಹೆಮ್ಮಗಳಿಗೆ – ಹೆಚ್ಚಲ್ಲವೇ? ಮೇಲಿನ ವಾದವನ್ನು ನನ್ನ ಗುರುಸಿದ್ಧ ಈ ದಿನ ತೆಗೆದ. ಅವನು ಆಧುನಿಕ ಮನಃಶಾಸ್ತ್ರಿಯಿದ್ದಾನೆ. ಆದರೆ ನಮ್ಮ ಕರಕರೆದಾಸರು ಅಧ್ಯಾತ್ಮ ಭಕ್ತರಿದ್ದಾರೆ. ಅವರ ಹೇಳಿಕೆಗೂ ಅವನ ಹೇಳಿಕೆಗೂ ವ್ಯತ್ಯಾಸವೇ ಇಲ್ಲ.

ತಾಯಿ ತಂದೆಗಳೆಂಬರಾರು?
ತಮ್ಮ। ಕಾಯದ ಸುಖವೊಂದನೆಣಿಸುವರೇನು? ॥ಪ॥
ಹೊಣೆಯರಿಯದ ಹುಚ್ಚುಮಂಗ
ದೊಡ್ಡ। ಬೆಣೆಕಿತ್ತು ಬಾಲ ಸಿಕ್ಕಿಸಿಕೊಂಡಿತಂತೆ॥
ಋಣಭಾರವರಿಯದ ಲೋಕ।
ತನ್ನ। ಅಣುಗರಿಂದಪಕೀರ್ತಿಗಾಳಾಯಿತಂತೆ॥
ಕೆಸರಿಗೆ ಕೈಯ್ಯಿಕ್ಕಲಾರ।
ಕೆನೆ। ಮೊಸರಿಗೆ ಬಾಯ್ನೀರುಬಿಡುವನು ಪೋರ॥
ಖುಶಿಬಂದಂತಿರಬೇಕೆಂಬಾಕೆ।
ತನ್ನ। ಹಸುಳೆಗಳಿಗೆ ಮೃತ್ಯುವಾದಾಳು ಜೋಕೆ॥
ಬೇಲಿ ಹಾರುವ ಬುದ್ಧಿ ಬೇಡ।
ನಿನ್ನ। ಕಾಲಿಗೆ ಮುಳ್ಳು ಚುಚ್ಚುವುವಲ್ಲೋ ಮೂಢ॥
ಹಾಲು ಕುಡಿದು ಹೋಗುವಾಗ।
ನಿನ್ನ। ಪಾಲಿನ ಹಣಕೊಟ್ಟು ಹೋಗಯ್ಯ ಹೋತ॥
ಅಜ್ಞಾನಿಗಿಲ್ಲ ಸ್ವಾತಂತ್ರ್ಯ
ಸೊಸೆ। ಗಜ್ಞಾನದಿಂದಲೆ ಬಂದಿತುದಾಸ್ಯ॥
ವಿಜ್ಞಾನ ವಿಧಿಯಾವುದೊಂದೂ॥
ನಿನ್ನ। ಪ್ರಜ್ಞೆಯಿಲ್ಲದೆ ಫಲಿಸವು ಪೋರಿಕಂಡ್ಯಾ॥
ಸ್ಥಾನಮಾನವನರಿತಾಡು।
ನೀನು ಶ್ವಾನನಾದರೂ ಲೋಕಮರ್ಯಾದೆ ಕೊಡುಗು॥
ಕಾಲಾಕಾಲವನರಿತೋಡಿ।
ಚಿಕ್ಕ। ಆವೆ ಗೆದ್ದಿತು ನರಿಯನು ಕೂಡ ನೋಡು॥

***

'ಜಿನ್ನಾ ಸಾಹೇಬರು ತೀರಿಕೊಂಡರು!' ಎಂದು ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗಿದೆ ಈ ದಿನ. ಕಡೆಗೂ ಪಾಕಿಸ್ತಾನ ಪಡೆದೇ ಸತ್ತ – ಎಂದು ಅವರ ಛಲದಂಕಮಲ್ಲತನವನ್ನು ಕೊಂಡಾಡುವವರೂ ಅಲ್ಲಲ್ಲಿ ಸಿಕ್ಕಿದರು. ಅವರು ಪಡೆದದ್ದು ಪಾಕಿಸ್ತಾನವನ್ನೋ ಪರದೇಶಿಸ್ತಾನವನ್ನೋ – ಎಂಬುದಿನ್ನು ಬಯಲಾಗುವ ಕಾಲಬಂತು. 'ಸತ್ತಮೇಲೆ ಗೊತ್ತಾಯ್ತು ಸೆಟ್ಟಿಯ ಬಂಡವಾಳ' ಎಂಬ ಗಾದೆಯಂತೆ ಜಿನ್ನಾ ಸಾಹೇಬರ ಇಹಲೋಕದ ಆಳಿಕೆ ಮುಗಿದನಂತರವೇ ಅವರು ಸಾಧಿಸಿದ್ದೇನೆಂಬುದನ್ನು ಜಗತ್ತು ತಿಳಿಯಲಿದೆ. ಪಾಕಿಸ್ತಾನದಲ್ಲಿ ಇದ್ದಷ್ಟು ದಿನ ಸರ್ವಾಧಿಕಾರ ವಹಿಸಿ ಮೆರೆದದ್ದೊಂದೇ ಅವರ ದೊಡ್ಡ ವೈಭವ! ಈಗ ಖುದಾಸಾಹೇಬರು ಅವರನ್ನು ಸ್ವರ್ಗದಲ್ಲಿ ಚಿನ್ನದ ತೇರಿನ ಮೇಲೆ ಕೂರಿಸಿ ಮೆರವಣಿಗೆ ಮಾಡುತ್ತಿರಬಹುದು. ಇಸ್ಲಾಂ ಧರ್ಮವನ್ನು ರಕ್ಷಿಸಿದ ಬಿರುದು ಅವರದಲ್ಲವೆ? ಧರ್ಮರಕ್ಷಕರಾದುದರಿಂದ ತಮ್ಮ ಪ್ರಜೆಗಳಿಗೆ ಈ ಕಲೀಫರು ತೊಂದರೆ ಕೊಡಬಾರದೆಂದು ತಾವೇ ಸ್ವತಃ ಅಪ್ಪಣೆಕೊಟ್ಟು ರಾಜ್ಯ ನಡೆಸಿದ್ದಲ್ಲದೆ, ಪಾಕಿಸ್ತಾನದ ಕಾಯಿದೆಗಳನ್ನು ಸ್ವತಃ ದಾರ್ಶನಿಕರಂತೆ ತಮಗೆ ಕಂಡಂತೆ ನಿಮಿಷಾರ್ಧದಲ್ಲಿ ರಚಿಸಿ ಫರ್ಮಾನ್ ಹೊರಡಿಸುತ್ತಿದ್ದರು! 'ಏಕಮೇವಾದ್ವಿತೀಯಂ ಬ್ರಹ್ಮ' ಎಂದ ಆದಿ ಋಷಿಗಳನ್ನು ಮೀರಿಸಿದ ವ್ಯಕ್ತಿ ಎಂದರೆ ಇವರೇ ಅಲ್ಲವೆ? ಇದೇ ಮಾತು ನಮ್ಮ ಫಕೀರ ಸೈಯ್ಯದ್ ಸಾಹೇಬರು ತಮ್ಮ ಶಾಯಿರ್‌ಗಳಲ್ಲಿ ಹೇಗೆ ವರ್ಣಿಸುತ್ತಾರೆ ಗೊತ್ತೇ?

ಯಾಹಿಲಾಹಿ ಯಾಹಿಲಾಹಿ ಯಾಹಿಲಾ।
  ಫಾತಿಮಾಕೋ ಮುಸ್ತಫಾ ಏಕ್‌ಚೂಮ್ ದಿಲಾ ॥ಪ॥
ಅ–ಲ್ಲಾಕೆನಾಮ್‌ಸೇ ಬೋಲ್‌ರಹಾಹೂ
  ಬಾತ ಮೇರೀ ತುಂ ಸುನೋ।
ಇ–ಸ್ಲಾಮಕೋ ಆಜಾದ ಜಿನ್ನಾ
  ಕರ್‌ದಿಯಾ ಆಜ್ ಭಾಯಿಯೋ॥
ಯಹ್ ಜಿಂದಗೀ ಅಂಧೇರೆಮೇ ಸಬ್
  ಪಡ್‌ಗಯಾಥಾ, ದೇಖ್ ವೋ।
ಅಲ್ಲಾ ಉಪರಸೇ ಫಾತಿಮಾಕೋ
  ಚೂಮ್‌ದಿಯಾ ಹಸ್‌ಕರ್ ಸುನೋ॥
ತಬ್ ಕ್ಯಾ ಹುವಾ? ಆಕಾಶಮೇ
  ಬಿಜುಲೀ ಚಮಕತೀ ಆಗಯೀ।
ಜಿ–ನ್ನಾಕೆ ಮಾಬಾಪ್ ದೇಖ್‌ಗಯೀ
  ವೋ ರಾತ್ ಖುಶೀಸೇ ಚಲ್‌ಗಯೀ।

ಪೈ–ದಾಹುವಾ ಇಸ್ಲಾಮಕಾ ಪರ್–
ವರ್‌ದಿಗಾರ್ ಲೀಡರ್ ಬಡೇ–
ಝಂ–ಡಾ ಖುದಾಕಾ ಝೂಲೆ ಹಿಂದು–
ಸ್ತಾನಮೇ ಇಸ್ಲಾಂ ಬಢೇ॥
ಅ–ಲ್ಲಾಕೆವೋ ಹೈ ರೋಶನೀ ಇ–
ಸ್ಲಾಮಿಯೋಂಕಾ ಸಬ್‌ಕೆ ಸಬ್।
ಚಲ್–ದಿಲ್‌ಮೆ ಪಾಕಿಸ್ತಾನಕೋ ತ–
ಯ್ಯಾರಕೀ, ದೇಖೋ ಜನಾಬ್॥
ಉಸ್–ಕಾಮಮೇ ಫತ್ತೇ ಮಿಲಾಯಾ
ಜಿನ್ನ ಸಾಹಬ್ ಅಬ್‌ತೊ, ಹಾಯ್
ವೇ–ಚಲ್‌ಗಯೇ ದುನಿಯಾಸೆ ಹಮ್ ಸಬ್
ಆಜ್ ಬಿಚಾರೇ ಬನ್‌ಗಯೇ॥

ಗಾಂಧಿಯವರು ಹಿಂದುಸ್ತಾನದ ನೀತಿಯ ಊರುಗೋಲಾಗಿದ್ದರು. ಮುಸಲ್ಮಾನರು 'ಬಿಸ್ ಮಿಲ್ಲಾಹ್' ಎಂದು ತಮ್ಮ ಸರ್ವಕಾರ್ಯಗಳನ್ನೂ ಪ್ರಾರಂಭಿಸುವಂತೆ ಹಿಂದೀಯರು ಹಿಂಸೆ, ಅಹಿಂಸೆ, ಸತ್ಯಾಗ್ರಹ, ಅಸತ್ಯಾಗ್ರಹ, ಧರ್ಮ, ಅಧರ್ಮ, ಉಪಕಾರ, ಅಪಕಾರ, ಸ್ವಾರ್ಥ, ಪರಾರ್ಥ ಈ ಎಲ್ಲವನ್ನೂ ಮಹಾತ್ಮರ ಹೆಸರಿನಲ್ಲಿ ಮಾಡಿಬಿಟ್ಟರೆ ಪಾವನವಾಗಿ ಬಿಡುತ್ತದೆಂದು ತಮ್ಮ ಪಾವನ ಸ್ವಾತಂತ್ರ್ಯ ಸಮರವನ್ನು ಪ್ರಾರಂಭಿಸಿ, ಅದನ್ನು ತಮ್ಮ ಕುಲಗುರುವಿನ ಕೊಲೆಯಿಂದ ಕೊನೆಗಾಣಿಸಿ ಬಿಟ್ಟರು. ಎಲ್ಲ ಹಾಲನ್ನೂ ಒಂದೇ ಬಾರಿಗೆ ಅರೆದು ಬಿಡುವೆನೆಂದು ಕೆಚ್ಚಲು ಕೊಯ್ದ ಹಾಲಿಗನಂತೆ ತಮ್ಮ ಸಾರ್ವಕಾಲಿಕ ಅರಾಜಕ ಕಾರ್ಯಗಳಿಗೆ ಒಮ್ಮೆಲೇ 'ಲಾಯಿಸೆನ್ಸ್' ಪಡೆದು ಬಿಡುವೆನೆಂದು ಇವರು ಬುಡಕ್ಕೇ ಕೊಡಲಿ ಹಾಕಿದರು. ಈ ಬೃಹಸ್ಪತಿ ಬುದ್ಧಿಯು ಹಿಂದೀಯರಲ್ಲಿ ಹುಟ್ಟಲು ಕಾರಣವೇನು? ಎಂದು ತಜ್ಞರೆಲ್ಲರೂ ಸೇರಿ ಭಾರಿ ಸಂಶೋಧನೆ ನಡೆಸಿದರು. ಎಷ್ಟು ತಿಣುಕಿದರೂ ಗುಟ್ಟು ಗೊತ್ತಾಗಲಿಲ್ಲ. ಕೆಲವರೆಂದರು ಜ್ಯೋತಿರ್ಮತಿ ತೈಲವನ್ನು ತಲೆಗೆ ಪ್ರಯೋಗ ಮಾಡಿಕೊಂಡಿದ್ದರಿಂದ ಎಂದು. ಹಿಂದೊಬ್ಬ ಪೆಣ್ಮಣಿ ಅದನ್ನು ಕುಡಿದು ಸಾಯದೆ ಬದುಕಿ, ಅಮರ ಕವಯಿತ್ರಿಯಾದಳೆಂದು ಐತಿಹಾಸಿಕ ಸಂಶೋಧಕನೊಬ್ಬನು ಆಧಾರಕೊಟ್ಟನು. ಆದರೆ ಆಧುನಿಕರಾದ ಉಳಿದ ವಿಜ್ಞಾನಿಗಳು ಅದೆಲ್ಲ ಪೌರಾಣಿಕವೆಂದು ಪರಿಹಾಸಮಾಡಿಬಿಟ್ಟರು.

ಅಷ್ಟರಲ್ಲಿ ಕುಲಶೈಲದಂತಹ ತನ್ನ ತಲೆಯನ್ನೆತ್ತಿ ಜ್ಞಾನೇಂದ್ರ ಪಂಡಿತನೆಂಬ ಶಾಸ್ತ್ರಜ್ಞನು – ಅದೆಲ್ಲ ಗ್ರಾಹ್ಯವೆನಿಸಲಾರದು. ಅವರು ಜ್ಞಾನಚೂರ್ಣವನ್ನು ಸೇವಿಸಿದ್ದರಿಂದಲೇ ಅಂತಹ ಕುಶಾಗ್ರಮತಿಯನ್ನು ಪಡೆದರೆಂದು ನನಗೆ ಭಾಸವಾಗುತ್ತದೆ ಎಂದನು. ಇದನ್ನು

ಕೇಳಿ ಎಲ್ಲರೂ ಅವಾಕ್ಕಾದರು! ಇದಾವ ಅಭಿನವ ಧನ್ವಂತರಿಯ ಶೋಧವೆಂದು ತಮ್ಮ ಚಕಿತ ನಯನಗಳಿಂದಲೇ ಪ್ರಶ್ನಿಸಿದರು. ಆಗ ಭಾರತೀಯ ಭಿಷಗ್ರತ್ನನೆನಿಸಿದ ಜ್ಞಾನೇಂದ್ರಪಂಡಿತನು ಜ್ಞಾನಚೂರ್ಣದ ಹದವನ್ನು ಬಿತ್ತರಿಸಿದನು –

ತಮಾಖುಪತ್ರವೆಂಬ ಒಂದು ಬಗೆಯ ವನಸ್ಪತಿಯುಂಟು. ಅದರ ಬಗ್ಗೆ ಭಿಷಗಿಂದುಗ್ರಂಥದಲ್ಲಿ ಹೀಗೆ ಹೇಳಿದೆ...

'ತಮಾಖು ತ್ರಿವಿಧಿಂ ಪ್ರೋಕ್ತಂ

ದೇವಾನಾಮಪಿ ದುರ್ಲಭಂ।

ಕ್ವಚಿದ್ಧುಕ್ಕಾ ಕ್ವಚಿ ತ್ಥುಕ್ಕಾ

ಕ್ವಚಿನ್ನಾಸಾಗ್ರಗಾಮಿನೀ॥'

ಅರ್ಥಾತ್ ದೇವತೆಗಳಿಗೂ ದುರ್ಲಭವಾದ ತಮಾಖುಪತ್ರವನ್ನು ಮಾನವ ಪ್ರಪಂಚದಲ್ಲಿ ಮೂರು ರೂಪಗಳಲ್ಲಿ ಕಾಣಬಹುದು. ಒಂದನೆಯದಾಗಿ, ಹುಕ್ಕಾ ಇಲ್ಲವೆ ಸೇದುಗಡ್ಡಿಯಲ್ಲಿ ಶಕಲರೂಪದಲ್ಲಿ, ಥುಕ್ಕಾ ಇಲ್ಲವೆ ತಾಂಬೂಲದೊಡನೆ ತನ್ನ ಸ್ವರೂಪದಲ್ಲಿ ಸುಣ್ಣದೊಡನೆ ಸೇರಿ, ಮೂರನೆಯದಾಗಿ ಲೌಕಿಕರು ನಶ್ಯವೆಂದು ಕರೆಯುವ ಮತ್ತು ವಿಜ್ಞಾನಿಗಳು ಜ್ಞಾನಚೂರ್ಣವೆಂದು ಕರೆಯುವ ಚೂರ್ಣರೂಪದಲ್ಲಿ. ಈ ಜ್ಞಾನಚೂರ್ಣವೆಂಬುದು –

'ಅರಸುಗಿಳಿಗಿದು ವೀರ, ಮೈಯಂ

ತುರಿಸುವರಿಗಿದು ಮದ್ದು, ನಿರತಂ

ಹಿರಿಯರಾಜ್ಞೆಯ ಮೀರ್ವ ತುಂಟರ ಕಣ್ಣಿಗಮೃತವಲಾ।

ವರ ಕವಿಗಳಾಸ್ಫೂರ್ತಿ ಪಂಡಿತ

ವರರ ಪಂಚೆಯ ಕೀರ್ತಿ, ಸನ್ಯ

ಸ್ತರ ಸುಬೋಧದ ಮೂರ್ತಿ, ಶೀತಾ

ದ್ಯಖಿಲ ರೋಗಹರ॥

ಎಂದು ವಿಜ್ಞಾನವಲ್ಲಿಯೆಂಬ ಉಪನಿಷತ್ತಿನಲ್ಲಿ ಹೇಳಿದೆಯೆಂದು ಎರಡನೆಯ ಕುಮಾರವ್ಯಾಸನು ಸಾರಿದ್ದಾನೆ.

ಈ ವಿವರದಿಂದ ಸಮಸ್ತರೂ ಸಂತೃಪ್ತರಾದರು.

ಜ್ಞಾನಚೂರ್ಣಕ್ಕೆ ಜಯವಾಗಲಿ।

***

ಕಾಂಗ್ರೆಸ್ಸನ್ನು ಪುನರ್ಘಟಿಸಬೇಕೆಂದು ಮಹಾತ್ಮರೆಂದಂತೆ ಕಾಂಗ್ರೆಸ್ಸಿಗರಿಂದು ಹೊಸ ಘಟನೆಯ ಕರಡೊಂದನ್ನು ತಯಾರಿಸಿದ್ದಾರೆ. ಅದರಲ್ಲಿ ಹಳ್ಳಿಯ ಪಂಚಾಯತವನ್ನೇ

ಮೂಲಾಧಾರವನ್ನಾಗಿ ತೆಗೆದುಕೊಳ್ಳಲಾಗಿದೆ. ಹಿಂದುಸ್ಥಾನದ ೭೦ ಲಕ್ಷ ಹಳ್ಳಿಗಳ ಉದ್ಧಾರವೇ ಅವರ ಧ್ಯೇಯ. ಘಟನೆಯ ಕರಡನ್ನು ಸಮೀಕ್ಷಿಸಿದರೆ ಅದು ಗಾಂಧೀ ತತ್ವಮಯವಿದೆಯೆಂಬುದು ಸ್ಪಷ್ಟವಾಗುತ್ತದೆ. ಇಂತಹ ಗ್ರಾಮಪಂಚಾಯಿತಿಗಳನ್ನು ಒಂದಕ್ಕೊಂದು ಜೋಡಿಸಿ ಹೆಣೆದು, ವೃತ್ತದೊಳಗೆ ವೃತ್ತ ತಯಾರಿಸಿ ಕೇಂದ್ರದಲ್ಲಿ ಅಧ್ಯಕ್ಷನನ್ನು ಕುಳ್ಳಿರಿಸಲಾಗಿದೆ. ಈ ಕ್ರಮವೇನೋ ನ್ಯಾಯವಾದದ್ದೇ ಇದೆ, ಪ್ರಜಾಸತ್ತಾತ್ಮಕವೇ ಇದೆ. ಆದರೆ ಇದರಲ್ಲಿ ಒಂದು 'ಪಂಚಾಯಿತಿ' ಅಡಗಿ ಕುಳಿತಿದೆ. ಅದೆಂದರೆ ಗಾಂಧೀ ನಿಯಮಪಾಲಕ ಮಾತ್ರ. ಈ ಪಂಚಾಯತಕ್ಕೆ ಸದಸ್ಯನಾಗಬಲ್ಲ, ಅಂದರೆ ಸ್ವಂತ ತಯಾರಿಸಿದ ಖಾದಿವಸ್ತ್ರ ಧರಿಸಿಕೊಂಡು ನಯೀತಾಲೀಮಿನ ಶಿಸ್ತನ್ನು ಪಾಲಿಸಿಕೊಂಡಿರಬೇಕಲ್ಲದೆ ಅಹಿಂಸಾಚರಣ ನಿಷ್ಠನಾಗಿರಬೇಕು. ಈ ಶುದ್ಧ ಸನಾತನಿ ತತ್ವಗಳನ್ನು ಕಪಟಿಗಳು ನಾಟಕೀಯವಾಗಿ ಆಚರಿಸಿ ಗಾಂಧಿಯವರ ಹೆಸರನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳದಿರರೆಂಬುದು ಅನುಭವಸಿದ್ಧವಾದುದು. ಜಾತೀಯತೆಯನ್ನು ಬೋಧಿಸಿದ ಗಾಂಧಿಯವರು ಈ ಖಾದಿಜಾತಿಯೊಂದನ್ನು ನಿರ್ಮಿಸಿದ್ದರಿಂದ ಜನಿವಾರ ಮಾತ್ರದಿಂದ ಬ್ರಾಹ್ಮಣನಾಗಿ ಉಳಿದ ಇಂದಿನ ನಾಸ್ತಿಕರಂತೆ ವಸ್ತ್ರಮಾತ್ರದಿಂದ ಕಾಂಗ್ರೆಸಿಗರಾಗಿ ಉಳಿವ ಸದಸ್ಯರನ್ನು ಉಳಿದ ರಾಜಕೀಯ ಪಕ್ಷಗಳ ವಿರುದ್ಧ ನಿಲ್ಲಿಸಿದಂತಾಗಿದೆ. ಹಾಗಲ್ಲದೆ ರಾಜಕೀಯ ನಿಯಮಗಳಷ್ಟನ್ನೇ ವಿಧಿಸಿದ್ದರೆ ಹಿಂದುಸ್ತಾನದ ೩೦ ಲಕ್ಷ ಹಳ್ಳಿಗರೂ ಪಂಚಾಯತ ಸದಸ್ಯತ್ವಕ್ಕೆ ಸುಲಭವಾಗಿ ಅರ್ಹರಾಗಬಹುದಿತ್ತಲ್ಲದೆ ಕಾಂಗ್ರೆಸ್ಸಿನಲ್ಲಿರುವ ರಾವಣಸನ್ಯಾಸಿಗಳ ಮಾಯಾಜಾಲದಿಂದ ದೂರ ಇರಲು ಅನುಕೂಲವಾಗುತ್ತಿತ್ತು

ಒಟ್ಟಿನ ಮೇಲೆ ಈಗಾದ ಪಂಚಾಯಿತಿಯೆಂದರೆ–

ಗಡ್ಡದ ಪೈರನು ಬೆಳೆಸಿದ ನರರಲಿ
  ಯತಿಯೂ ಇರಬಹುದು –
ಬಲು ದು। ರ್ಮತಿಯೂ ಇರಬಹುದು,
  ಲುಂಗಿಯ ಸುತ್ತಿದ ಮಾನವರಲ್ಲಿ,
ಮುಸ್ಲಿಮನಿರಬಹುದು–
  ಮೇಣ್ ಮ। ದ್ರಾಸಿಯು ಇರಬಹುದು।
ಮೊಲೆಯುಳ್ಳಂತಹ ಜೀವಿಗಳಲ್ಲಿ
  ಮೇಕೆಯು ಇರಬಹುದು –
ಅಲ್ಲದೆ ಹೋತನು ಇರಬಹುದು,
  ಖಾದಿಯ ಧರಿಸಿದ ಕರ್ಮಠರಲ್ಲಿ

ಕುಬೇರನಿರಬಹುದು–

ಅವನಾಳ್ । ಕುಚೇಲನಿರಬಹುದು।

ಹೀಗೆ ಗೋಮುಖ ಪ್ರಾಣಿಗಳಲ್ಲಿ ವ್ಯಾಘ್ರವು ವೇಷಾಂತರದಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಸದವಕಾಶ ಸಿಕ್ಕಂತಾಗಿದೆ. ವ್ಯಾಪಾರಿ ಮಧ್ಯಸ್ಥರು, ದೊಡ್ಡ ದೊಡ್ಡ ಜಮೀನುದಾರರು ಮತ್ತು ಗಿರಣಿ ಕಾರಖಾನೆ ಮಾಲೀಕರು ತಮ್ಮ ಆಳುಗಳ ಆರ್ಥಿಕೋನ್ನತಿಯನ್ನು ಇಷ್ಟರ ಮಟ್ಟಿಗೆ ಸಾಧಿಸಿದಲ್ಲದೆ ಸದಸ್ಯರಾಗಲಾರದೆಂಬ ಮೂಲಭೂತ ತತ್ವವನ್ನೇ ಮರೆತ ಮೇಲೆ ಇಂತಹ ಕರಡಿನಿಂದ ದೀನೋದ್ಧಾರವಾದೀತೆ?

***

ಗಾಂಧಿ ಕೊಂದ ಗೋಡ್ಸೆಗೆ ಮರಣದಂಡನೆ ವಿಧಿಸಿದರೆ ಗಾಂಧಿತತ್ವವಾದ ಅಹಿಂಸೆಗೆ ಅವಮಾನ ಮಾಡಿದಂತಾಗುವುದೆಂದು ಗಾಂಧೀಭಕ್ತರ ಅಂಬೋಣ. ಆದರೆ ಗೋಡ್ಸೆ ಯಾವುದೋ ಬಗೆಯ ಬ್ರಾಹ್ಮಣನೆನಿಸಿದ್ದ ಮಾತ್ರಕ್ಕೆ ಆಸೇತು ಹಿಮಾಚಲ ಪರ್ಯಂತ ಇರುವ ಬ್ರಾಹ್ಮಣ ಪ್ರಮುಖರಲ್ಲಿ ಹಲವರನ್ನು ಜಾತ್ಯಂಧರು ಚಿತ್ರಹಿಂಸೆಗೆ ಗುರಿಮಾಡಿದರೆ ಎಲ್ಲ ಕಾಂಗ್ರೆಸ್ ಸರಕಾರಗಳ ಪೋಲೀಸರೂ ಮನೆ ಸುಟ್ಟಮೇಲೆ ಬಾವಿ ತೋಡಹೊರಡುವ ಧೋರಣೆ ತಳೆದಿದ್ದಕ್ಕೆ ಅನೇಕ ನಿದರ್ಶನಗಳು ಸಿಕ್ಕಿವೆ. ಈ ಕಾಯಕದ ಒಳಗುಟ್ಟೇನು? ಸರದಾರ ಪಟೇಲರ ಗರ್ಜನೆ, ಕುಣಿತ, ಶಂಖನಾದ ಮೊಳಗಿಯೇ ಮೊಳಗಿತು, ಕಾಶ್ಮೀರದಲ್ಲಿ ದಿಲ್ಲಿ ಸರಕಾರ ದಿನಕ್ಕೆ ನಾಲ್ಕು ಲಕ್ಷ ವೆಚ್ಚ ಮಾಡಿಯೇ ಮಾಡುತ್ತಿದೆ – ದಂಗೆಗಾರರು ತಮ್ಮ ಹಲ್ಲೆ ನಡೆಸಿಯೇ ನಡೆಸಿದ್ದಾರೆ. ಇದರಿಂದ 'ಮೆತ್ತಗಿದ್ದವನಿಗೆ ಮತ್ತೊಂದು ಗುದ್ದು, ಧುತ್ತೆಂದು ಬಂದವನಿಗೆ ದೂರದ ಸಲಾಮು' ಎಂಬ ಪ್ರವೃತ್ತಿ ಕಾಂಗ್ರೆಸ್ ಅಧಿಕಾರಿಗಳಲ್ಲಿ ಕಂಡು ಬರುವುದಿಲ್ಲವೇ? ಆಳಿಗೆ ಬೂಟಿನಿಂದ ಹೊಡೆದ ಅಧಿಕಾರಿ ಹೆಂಡತಿಯೆದುರು ಥರಥರಿಸಿದಂತೆ ದೇಶದ ಮಹಾಸಭೆ, ಸಮಾಜವಾದಿ ಸಂಘ ಇವುಗಳ ಮೇಲೆ ಹರಿಹಾಯ್ದು ಈ ಪೋಲಿಸು ಸರಕಾರ ಸಶಸ್ತ್ರ ಪುಂಡರೆದುರು ಗರುಡನಿಗೆದುರಾದ ನಾಗದಂತೆ ನರ್ತಿಸುತ್ತಿದೆ. ಇದು ಖಾದಿಯ ಗುಣವೋ ಇಲ್ಲವೆ ಲಂಚತನವೋ – ಹಾಗೂ ಇರಬಹುದು. ಬಂಡವಾಲಿಗರನ್ನು, ಕೂಲಿಕಾರನನ್ನು, ಜಾತ್ಯಂಧರನ್ನು, ಪುಂಡರನ್ನು, ಪರದೇಶದ ಬಲಿಷ್ಠ ರಾಷ್ಟ್ರಗಳ ಮುತ್ಸದ್ದಿಗಳನ್ನು, ಗಾಂಧಿಯವರ ಈ ಅಹಿಂಸಾವಾದವನ್ನು – ಈ ಸಕಲ ಪರಸ್ಪರ ವೈರಭಾವುಳ್ಳ ವರ್ಗಗಳನ್ನು ಏಕಕಾಲದಲ್ಲಿ ಮೆಚ್ಚಿಸ ಹೋಗಿ ಅ. ಭಾ. ಕಾಂಗ್ರೆಸ್ಸಿಂದು ಏನು ಮಾಡಬೇಕೆಂಬುದರಿಯದೆ ಕುರುಡಾಗಿದೆ – ಮೂಢವಾಗಿದೆ – ಕೆಲವೊಮ್ಮೆ ಮೂರ್ಖವಾಗಿದೆ. ಸಂಗತಿ ಸಂಗದೋಷ, ಕೊರಳಿಗೆ ಶಿವದೊಣ್ಣೆಯೆಂಬಂತೆ ಮುದುಕ ಕಟ್ಟಿದ ಸಂಸ್ಥೆ ಮುದುಕನಷ್ಟೇ ಕಾರ್ಯದಕ್ಷತೆಯುಳ್ಳದ್ದೆನಿಸಿದರೆ ಆಶ್ಚರ್ಯವೇನು? ಒಮ್ಮೆ ೮೦ ವರ್ಷದವನು ೧೪ ವರ್ಷದ ಹುಡುಗಿಯನ್ನು ಮದುವೆಯಾದನು. ಪತಿವ್ರತೆಯಾದ ಅವಳಿಗೆ ಚೊಚ್ಚಿಲ ಸಂಭ್ರಮವಾದ ೮೦ ವರ್ಷದ ಕಳೆಯೇ ಮೊಗದಲ್ಲಿ ತುಂಬಿಕೊಂಡಿತು.

ಹಾಗೇ ಕಾಂಗ್ರೆಸ್ಸಿಂದು ವೃದ್ಧಪತ್ನಿಯಾಗಿ ಪತಿವ್ರತೆಯೆನಿಸಿದೆ! ಕಲಿಕಾಲದ ಒಬ್ಬ ಸುಖಪರಾಯಣೆಯಾದ ನಾಲ್ಕನೆಯ ಹೆಂಡತಿ ಹೇಳಿದಳಂತೆ:

ಹಾಸಿಗೆಯಲಿ ಹೊರಳುತಿಹನು
ನನ್ನ ಮುದುಕ ಗಂಡನು,
ವಾರಗಿತ್ತಿ ಬೈಯುತೆನ್ನ
ನಾಚೆ ಮನೆಗೆ ನಡೆದಳು –
ಮನೆಯ ಆಳು ದನವ ಹುಡುಕಿ
ಕೊಂಡು ಬರಲು ಹೋದನು,
ಎಲೆಲೆ ಪಥಿಕ, ಒಬ್ಬಳೇ ಅ–
ದೆಂತು ಕಾಲ ಕಳೆವೆನು!

ಪಥಿಕ ಆ ಮಾತಿಗೆ ಕಾರ್ಯರೂಪದಿಂದ ಉತ್ತರಕೊಟ್ಟನು. ಮುದುಕನು ಕಂಡು ಹೌಹಾರಿ –

ಕುಟ್ಟಿಬಿಡುವೆನಲ್ಲಿ ಆಳು
  ಮಗನು ಬರಲಿ ಸೂ ಮಗ
ಎತ್ತಹೋದಳೀಕೆ ಅಯ್ಯೋ
  ಎತ್ತಲೆಂತು ಈ ಮೊಗ?
ಬದುಕಬೇಕು ನೂರು ವರುಷ,
  ಮಕ್ಕಳೆರಡು ಬೇಕಲಾ –
ಆದರಾಕೆ ಗರತಿಯಾಗಿ ನಡೆದು
  ಉಳಿಯಬೇಕಲಾ!

ಗೋಡ್ಸೆ ವಿಚಾರಣೆಯೆಂಬ ಮಹಾನಾಟಕವನ್ನು ದಿಲ್ಲಿ ಸರಕಾರ ಆರಂಭಿಸಿ ಮನೋರಂಜನೆ ಮಾಡಿ ಹೊಟ್ಟೆಗಿಲ್ಲದ ಜನರ ಮನಸ್ಸನ್ನು ಕೆಲಕಾಲ ಅನ್ಯಾಸಕ್ತ ಮಾಡುವ ಪ್ರಯತ್ನದಲ್ಲಿದೆ. ಈ ಆಟ ಎಲ್ಲಿಯವರೆಗೆ ಸಾಗೀತು? ದಿನವೂ ಸಾಯುವ ಗಂಡನ ಬಗ್ಗೆ ಅಳುವವಳಾವಳು? ಈ ನರ ನಾಟಕವನ್ನು ಸವಾಲು, ಪ್ರತಿಸವಾಲು, ಧರ್ಮ, ಅಧರ್ಮ ಎಂದುಕೊಂಡು ಇಷ್ಟೆಲ್ಲ ವಿಸ್ತಾರವಾಗಿ ಮಾಡುತ್ತಿರುವುದರಿಂದ ಯಾರಾದರೂ ಚಲಚ್ಚಿತ್ರ ನಿರ್ಮಾಪಕರು ಈ ದೃಶ್ಯವನ್ನು ಗ್ರಹಿಸಲು ಬಂದಿರಲೇ ಬೇಕೆನ್ನಿಸುತ್ತದೆ. ಬಂಡವಾಲಿಗರನ್ನು ಬೆಂಬಲಿಸಲು ಇದೂ ಒಂದು ಸಾಧನವಾದಂತಾಯಿತು. ಗಾಂಧಿಯವರ ಜೀವನಚರಿತ್ರೆಯನ್ನು ಗ್ರಹಿಸಿ ಚಿತ್ರ ತಯಾರಿಸಿ ರೊಕ್ಕ ಸುಲಿದವ ಸುಲಿದೇ ಸುಲಿದ. ಈಗ ಇದು ಅದರ ಮುಂದಿನ ಪ್ರಕರಣ. ಹದ್ದಿದ್ದಲ್ಲಿ ಯಾವುದಾದರೂ

ಹೆಣ ಬಿದ್ದೇ ಇರುತ್ತದೆ ಎಂಬಂತೆ ಈ ಬಂಡವಾಲಿಗರಿದ್ದಲ್ಲಿ ಪ್ರತಿನಿತ್ಯವೂ ಜನಮನವಂಚನೆಯ ಯಾವುದಾದರೂ ಒಂದು ಪ್ರಕರಣವನ್ನು ಸರಕಾರ ತೆಗೆಯುತ್ತಲೇ ಇರುತ್ತದೆ! ಇಲ್ಲದಿದ್ದರೆ ವಿಚಾರಣೆಯನ್ನು ಸರಸರ ಅಂತ ಮುಗಿಸಿ ಅಧ್ಯಾಯ ಮುಕ್ತಾಯವಾಯಿತು ಎನ್ನಿಸಬಾರದಾಗಿತ್ತೇ? ಹೊಟ್ಟೆಗಿಲ್ಲದ ಕಾಲದಲ್ಲಿ ಸರಕಾರ ಘಟೋತ್ಕಚನ ಮಾಯಾಬಜಾರ ತೋರಿಸುತ್ತಿರುವುದೇನು?

ಗಾರುಡಿಗನು ನಾನೂದುವ ಪುಂಗಿಗೆ
    ಬಾರದ ಹಾವುಂಟೇ?
ಸಾರಾಸಾರ ವಿಚಾರವ ಮರೆಸುವ
    ಸ್ವರ ಬೇರೊಂದುಟೇ?
ಪಂಚಾಂಗವ ತೋರಿಸುವ ಸಿನಿಮಾ
    ತಾರೆಗೆ ಸೋಲುಂಟೇ?
ಪಂಚಪ್ರಾಣಗಳನ್ನೂ ಕೊಂಬ ಕು–
    ಬೇರನಿಗೆದುರುಂಟೆ?
ಹೊಟ್ಟೆಯ ದಳ್ಳುರಿ ಮರೆಯಲು ಎರಡೇ
    ಎರಡು ಉಪಾಯಗಳು
ಮುಟ್ಟದೆ ಲಕ್ಷ್ಯವ ಸೆಳೆಯುವ ನಾಟಕ,
    ಮತ್ತಡವಿಯ ಬಾಳು!
ನೀತಿಯನಾವುದು ಘಾತಿಸುವುದೊ ಆ
    ನಿರ್ಲಜ್ಜೆಯೆ ಚೆಂದ!
ನೀತಿಯ ಬಣ್ಣಿಸಿ ಬೇಳೆಯ ಬೇಯಿಸಿ
    ಕೊಳ್ಳದ ನರ ಮಂದ!
ಸೀರೆಗೆ ಸಾವಿರ ಕುಬಸಕೆ ಕೋಟಿ, ಹೃ–
    ದಂತರ್ಗುಹೆಯಲ್ಲಿ
ತೋರಿಯು ತೋರದೆ ಗಲಿಬಿಲಿಯಾಡುವ
    ಪ್ರೇಮಕೆರಡು ಬಿಲ್ಲಿ!
ಸರಕಾರದ ದೌಲತ್ತಿಗೆ ಕೋರ್ಟಿನ
    ಅಬ್ಬರವೇ ಸಾಕು–

ತರಕಾರಿಯ ಸತಿಗೊಯ್ದೀಯಲು ದು–
ಡ್ಡಿರದವಗದೆ ಬೇಕು!

***

ಅಮೇರಿಕದ ಗಂಡಸರಿಗೆ ರಶಿಯಾದ ಗ್ರಾಮಿಕೋ ಅವರನ್ನು ಕಂಡರೆ ಆಗುವುದಿಲ್ಲವಂತೆ. ಆದರೆ ಹೆಂಗಸರು ಅವರ ಗಂಡುತನವನ್ನು ನೋಡಿ ಮೆಚ್ಚಿಕೊಂಡಿರುವರಂತೆ. ಇದರಿಂದ ಒಬ್ಬ ಹೇಳುತ್ತಾನೆ – ಅಮೇರಿಕ್ಕೆ ನಾಳೆ ಹೆಂಗಸೊಬ್ಬಳು ಅಧ್ಯಕ್ಷೆಯಾದರೆ ಅಮೇರಿಕ ಮತ್ತು ರಶಿಯಗಳಲ್ಲಿಯ ವೈಷಮ್ಯ ಹೋಗಿ ಸ್ನೇಹ ಬೆಳೆಯಬಹುದು – ಎಂದು. ಭೇಷ್ ಎನ್ನಬೇಕಲ್ಲವೇ ಈ ಸಲಹೆಗೆ? ಕೆಲವು ಸಮಾಜಗಳಲ್ಲಿ ಗಂಡಸರು ಕೃಪಣರೂ ದಯಾಹೀನರೂ ವ್ಯಾಪಾರಿಬುದ್ಧಿಯವರೂ ಇದ್ದರೆ, ಹೆಂಗಸರು ಉದಾರಿಗಳೂ ದಯಾವತಿಯರೂ ಧಾರ್ಮಿಕ ಬುದ್ಧಿಯವರೂ ಇರುವುದು ಉಂಟು. ಇದು ಆಯಾ ಸಮಾಜದಲ್ಲಿ ಆಯಾ ಸ್ತ್ರೀ–ಪುರುಷರು ತಮ್ಮ ಕುಟುಂಬದ ಜೀವನದಲ್ಲಿ ಮಾಡಿಕೊಂಡ ಕರ್ಮವಿಭಜನೆಯ ಫಲವಾಗಿ ಅವರ ಸ್ವಭಾವ ಮತ್ತು ನಡತೆಗಳು ಬಹುಕಾಲದಲ್ಲಿ ಹೀಗೆ ವಿರುದ್ಧ ರೂಪಕ್ಕೆ ತಿರುಗಿದ್ದು ಸಹಜವಾಗಿದೆ. ಅಮೇರಿಕದಲ್ಲಿ ಗಂಡಸರು ದುಡ್ಡನ್ನು ಗಳಿಸುವ ಯಂತ್ರಗಳೂ ಕಲಹಪ್ರಿಯರೂ ಹೆಣ್ಣಿನಾಳುಗಳೂ ಆಗಿದ್ದರೆ ಹೆಂಗಸರು ಗಂಡನಿಂದ ದುಡ್ಡು ಕಸಿದುಕೊಂಬವರೂ, ನಿರುಪಯೋಗಿಗಳೂ, ಶೀಲಭ್ರಷ್ಟರೂ, ಗುರಿಯಿಲ್ಲದವರೂ, ಸ್ವಾರ್ಥಿಗಳೂ ಆಗಿದ್ದಾರೆ. ಇದಕ್ಕೆ ಕಾರಖಾನೆಗಳು ಹೆಚ್ಚಾಗಿ, ಜನರಲ್ಲಿ ಸೋಮಾರಿತನ, ಸುಖಲೋಲುಪತೆ ಹೆಚ್ಚಾದುದೇ ಕಾರಣ. ಮೇಲಿನ ವಾಕ್ಯದಿಂದ ಅವರೊಳಗೇ ಹೆಂಗಸರು ಉತ್ತಮ ಎನ್ನುವಂತಿದೆ. ಪರೀಕ್ಷಿಸಿದರೆ ತದ್ವಿರುದ್ಧವಾದರೂ ಆಗಬಹುದು. ಹೇಗೇ ಆಗಲಿ ಒಂದು ಸಲ ನೋಡುವುದು ಉತ್ತಮವಲ್ಲವೆ?

ಹೆಣ್ಣು ಗಂಡಾಗ ಬಯಸಿ
ಆದಳೋ–ಎರಡು ತಾನಲ್ಲವಾಗಿ;
ಗಂಡು ಹೆಣ್ಣಾಳ್ಕೆಗೆಳಸಿ
ಹೋದನೋ–ಹೆಣ್ಣಿಗೂ ಹೀನವಾಗಿ!
ಹೆಂಗೆಲಸ ಮಾಡಹೋಗಿ
ಗಂಡು ತಾ–ಎರಡನ್ನು ಮಾಡದಾದ,
ಗಂಡುಗೈಮೆಯಲಿ ನುಗ್ಗಿ
ಹೆಣ್ಣು ತಾ–ಮಾಡಳೋ ತನ್ನದನ್ನೂ!
ಬಾಲದಂತಾಗ ಹೋಗಿ

ನಾಯಿ ನಾ–ಯಾಗಿಯೂ ಉಳಿಯಲಿಲ್ಲ
ಬಾಲ ನಾಯಾಗ ಹೋಗಿ
ಬಾಲ ತಾ–ನಾಗಿಯೂ ಬಾಳಲಿಲ್ಲ!
ಕಣ್ಣು ಕೈಯಾಗಲೆಳಸಿ
ಕಾಣಲೂ ಇಲ್ಲ, ಕೈ ಹಿಡಿಯಲಿಲ್ಲ,
ಕೈಯು ಕಣ್ಣಾಗ ಹೋಗಿ
ಹಿಡಿಯಲೂ – ಇಲ್ಲ ಕಂಗಾಣಲಿಲ್ಲ!
ನರ ದೇವನಾಗಬಯಸಿ
ದೇವನೂ–ಅಲ್ಲ, ನರನಲ್ಲವಾದ,
ದೇವ ನರನಾಗಲೆಳಸಿ
ದೇವನೂ–ಅಲ್ಲ ನರನಲ್ಲವಾದ!
ಕವಿ ಕತೆಯ ಬರೆಯ ಹೋಗಿ
ಕಾವ್ಯವೂ–ಅಲ್ಲ, ಕತೆಯಲ್ಲವಾಯ್ತು!
ಹುಲಿ ಹಲ್ಲುಗಳೆದುಕೊಂಡು
ಹಸುವನೂ–ಹುಲ್ಲನೂ ತಿನ್ನದಾಯ್ತು!
ಬಾಲ ತಲೆಯಾಗದೆಂದೂ
ತಲೆ ಬಾಲ–ವಾಗದೋ ಆಗದೆಂದೂ,
ಕಾಲು ಮೇಲಾಗಿ ನಡೆಯೆ
ಮೇಲು ಕೆಳ–ಗಾಗದೋ ಆಗದೆಂದೂ!

***

ಹಿಂದುಸ್ಥಾನಕ್ಕಿಂದು ಅಂತಾರಾಷ್ಟ್ರೀಯ ಭೀತಿಯ ಭೂತ ಬಡಿದುಕೊಂಡಿದೆ. ಒಮ್ಮೆ ಒಬ್ಬನಿಗೆ ಮಲೆನಾಡಿಗೆ ಹೋದರೆ ಜ್ವರ ಬರುತ್ತದೆ ಎಂಬ ಹೆದರಿಕೆಯಿತ್ತಂತೆ. ಆಗ ಅವನು ಸರಕಾರೀ ನೌಕರನಾದುದರಿಂದ ವರ್ಗವಾದಾಗ ಹೋಗಲೇಬೇಕಾಗಿ ಬಂತು. ಹೋಗುವ ಹಿಂದಿನ ದಿನ ಬೆಂಗಳೂರಲ್ಲಿ ತನ್ನ ಮನೆಯ ಕೊಠಡಿಯಲ್ಲಿ ಅದೇ ಯೋಚನೆಯಲ್ಲಿ ಮಲಗಿದ. ರಾತ್ರಿಯೇ ಜ್ವರ ಬಂದಿತು. ನೆಹರೂ ಸರಕಾರಕ್ಕೀಗ ಇಂಥದೇ ಜ್ವರ ಬಂದು ಬಿಟ್ಟಿದೆ. ಇರದಿದ್ದರೆ ಹೈದರಾಬಾದಿನ ನಿಜಾಮನ ದೂತರ ಹಾವಳಿಯನ್ನು ಇನ್ನೂ ಸಹಿಸಿಕೊಂಡು ಯಾರಾದರೂ ಬಿದ್ದಿರುತ್ತಿದ್ದರೆ? ಅವನಿಗೇನು? ಬಂದರೆ ಬೆಟ್ಟ, ಹೋದರೆ... ಎಂಬಂತಿದೆ. ಉಳಿದರೆ ಸಾರ್ವಭೌಮತ್ವ, ಹೋದರೆ

ಒಕ್ಕೂಟದೊಡನೆ ಸೇರ್ಪಡೆ – ಇಷ್ಟೇ ಅಲ್ಲವೆ? ಅವನಿಗೇನು ಮಹಾನಷ್ಟ? ನೋಡೋಣ ಆದಷ್ಟು ಕಾಟಕೊಟ್ಟು ಎನ್ನುತ್ತಾನೆ. ಅವನಿಗೆ ಅವನ ಪದವಿಯೇ ಮುಖ್ಯ. ಅವನ ಪ್ರಜೆಗಳು ವಿಧರ್ಮೀಯರು. ಹಿಂದೀ ಒಕ್ಕೂಟ ವಿಧರ್ಮೀಯರದು. ಇಬ್ಬರಿಗೂ ನಷ್ಟವಾದರೂ ಅವರಿಗೇನೂ ನಷ್ಟವಿಲ್ಲ. ಒಟ್ಟಿನಲ್ಲಿ ಅಸುರೀತೃಪ್ತಿಯೇ! ಮಾಂಕ್ಟನ್ ಸಾಹೇಬನ ಕೈಯಲ್ಲಿ ಕೋಟಿಗಟ್ಟಲೆ ಕೊಟ್ಟು 'ತಮ್ಮಾ ಕೊಳ್ಳಲಿಕ್ಕೆ ಬರುವ ಎಲ್ಲ ಶಸ್ತ್ರಾಸ್ತ್ರಗಳನ್ನೂ ಕೊಳ್ಳು" ಎಂದು ತಣ್ಣಗೆ ಕುಳಿತಿದ್ದಾನೆ. ರಜಾಕಾರರು ಬೇಟೆಗಾರ ನಾಯಿಗಳಂತೆ ನಿಜಾಮನ ವಿರುದ್ಧ ನಿಂತ ಎಲ್ಲರನ್ನೂ ಬೊಗಳಿ ಕಚ್ಚಿ ಯಥಾಶಕ್ತಿ ಕಿರುಕುಳ ಕೊಡುತ್ತಿದ್ದಾರೆ. ಇದು ಅವನಿಗೊಂದು ಮೋಜು. ಹಿಂದೀ ಸರಕಾರ ಉಗುಳಿದರೆ ತುಪ್ಪ ಕೆಡುತ್ತದೆ, ನುಂಗಿದರೆ ಗಂಟಲು ಸುಡುತ್ತದೆ ಎಂದು ತನ್ನ ಕಟ್ಟಿನಲ್ಲೇ ತಾನು ಸಿಕ್ಕಿಕೊಂಡು ಒದ್ದಾಡುತ್ತಿದೆ! ಅಯ್ಯೋ ಫಜೀತಿಯೇ! ಇದಕ್ಕೆ ನಗಬೇಕೋ ಅಳಬೇಕೋ ತಿಳಿಯುವುದಿಲ್ಲ. ಸ್ವಯಂ ಮಹೇಶ, ಮಾವ ನಗೇಶ, ಗೆಳೆಯ ಧನೇಶ, ಮಗ ಗಣೇಶ, ಹೀಗಿದ್ದರೂ ಶಿವ ಭಿಕ್ಷೆ ಬೇಡಬೇಕಾಗಿ ಬಂತಂತೆ ಬ್ರಹ್ಮಕಪಾಲ ಹಿಡಿದಾಗ. ದಿಲ್ಲಿ ಸರಕಾರದ ಕತೆ ಇಂಥದೇ!

ಹೋತನ ಕೊರಳಲಿ ಮೊಲೆಯುಂಟು
  ಹಿಂಡಲು ಹಾಲಿಲ್ಲ,
ಕೋತಿಯ ತಲೆಯಲಿ ಮಿದುಳುಂಟು
  ಆದರೆ ಮತಿಯಿಲ್ಲ
ಕುರ್ಚಿಗೆ ಕಾಲ್ಗಳು ನಾಲ್ಕುಂಟು
  ನಡೆಯಲು ಬರದಲ್ಲ,
ಕನ್ನಡಿಯೊಳಗಡೆ ಗಂಟುಂಟು
  ತೆಗೆಯಲು ಬರದಲ್ಲ,
ಚಂದ್ರಾನನೆ ಮನೆಯೊಳಗಿದ್ದೂ
  ಕತ್ತಲು ಹರಿದಿಲ್ಲ,
ಹೇಡಿಗೆ ಕೈಯಲಿ ಕೋಲಿದ್ದೂ
  ಹೊಡೆಯಲು ಬರದಲ್ಲ!
ರೇಶನ್ ಕಾಲದಿ ದುಡ್ಡಿದ್ದೂ
  ಕೊಳ್ಳಲು ಸಿಗಲಿಲ್ಲ,
ಹಿಂದುಸ್ತಾನಕೆ ಬಲವಿದ್ದೂ
  ಹಗೆಯನು ಸೋಲಿಸಲೆಡೆಯಿಲ್ಲ!

ಕೈಹಿಡಿದಾಕೆಗೆ ಒಲವಿದ್ದೂ
   ಒಲಿಸಲು ಬಲವಿಲ್ಲ,
ಒಲಿದವನಿಗೆ ಹೆದ್ದಲೆಯಿದ್ದೂ
   ಕಲಿಸುವ ಭಾಗ್ಯವೆ ಇಲ್ಲಲ್ಲ!

***

ಸಂಯುಕ್ತ ರಾಷ್ಟ್ರ ಸಂಘದಿಂದ ಸದಿಚ್ಛಾ ಮಂಡಲವೊಂದು ಕಾಶ್ಮೀರಕ್ಕೆ ಬಂದಿದೆ. ಪಾಕಿಸ್ತಾನ ಹಿಂದುಸ್ತಾನಗಳೆರಡೂ ಅದರ ಅಭಿಪ್ರಾಯವನ್ನು ಎಂದೋ ವಿರೋಧಿಸಿವೆ. ಆದರೂ ಮೀಸೆ ಹೊಕ್ಕರೆ ಸಾಕೆಂಬ ಬೆಕ್ಕಿನಂತೆ ಆ ಮಂದಿ ಭಾರತಕ್ಕೆ ಬಂದಿದ್ದಾರೆ. ಕಾಶ್ಮೀರವನ್ನು ಎರಡು ಮಾಡಿ ನ್ಯಾಯದಾನ ಮಾಡಿ ಬಿಟ್ಟಿದ್ದೇವೆ ಎಂದು ಜಂಭ ಹೊಡೆಯಬೇಕೆಂಬುದೇ ಈ ಕಂಕನರಿಗಳ ಆಂತರ್ಯ. ಆದರೆ ನೆಹರು ಸರಕಾರ ಕಾಶ್ಮೀರದ ವಿಷಯದಲ್ಲೇನೋ ಗಟ್ಟಿ ಹಿಡಿದು ಕುಳಿತಿದೆ. ಆ ಗಟ್ಟಿತನ ಮತಗಣನೆಯಲ್ಲಿ ಹಾರಿಹೋದಿತೆಂಬ ಹೆದರಿಕೆ ಇನ್ನೂ ಪೂರ ಹೋಗಿಲ್ಲ. ಮತಗಣನೆಯೆಂಬುದು ದಿಲ್ಲಿ ಸರಕಾರ ತನಗೆ ತಾನೇ ಹಾಕಿಕೊಂಡ ಕೋಳ. ವ್ಯಕ್ತಿನೀತಿ, ರಾಜನೀತಿಗಳು ಒಂದೇ ಎಂದು ಗಾಂಧಿ ತಮ್ಮನ್ನು ಬಲಿಕೊಟ್ಟುಕೊಂಡರು. ನೆಹರು ಅದೇ ಜಾತಿಯ ಮನುಷ್ಯ. ಏನು ಮಾಡಲಿರುವರೆಂಬುದು ಸಂಶಯಾಸ್ಪದ. ವ್ಯಕ್ತಿಯಾದ ಸೀತೆಗೋಸ್ಕರ ರಾಮನು ರಾಜ್ಯವನ್ನು ಮಾರಿಕೊಳ್ಳಲಿಲ್ಲ. ಆದರೆ ನೆಹರು ತನ್ನ ಇಷ್ಟಕ್ಕಾಗಿ ಕಾಶ್ಮೀರದಲ್ಲಿ ಹಣ ಸುರಿದಿದ್ದಾರೆ, ಸೈನ್ಯ ಕಳಿಸಿದ್ದಾರೆ. ಉಳಿದರೆ ಮರ್ಯಾದೆ ಉಳಿದ ಹಾಗೆ, ಇಲ್ಲದಿದ್ದರೆ ಹೋದ ಹಾಗೆಯೇ. ಕಡೆಗೂ ಹೀಗಂದರು ಯಾರೋ ಅಂತ ಹೇಳಿದರೆ ಸೀತೆಯನ್ನು ಬಿಟ್ಟಂತೆ ಕೈಗೆ ಬಂದ ಕಾಶ್ಮೀರವನ್ನು ಬಿಟ್ಟುಬಿಡುವರೋ ಏನೋ. ಯಾರಿಗೆ ಹೇಳಲು ಸಾಧ್ಯ?

ಉದಾತ್ತಚರಿತರು ನಾಯಕರಾದರೆ
   ಉದಾರನೀತಿಯ ಹಿಡಿಯುವರು
ಅವರನ್ನವಲಂಬಿಸಿದವರೆಲ್ಲರು
   ಹೆದ್ದಾರಿಯಲೇ ಬೀಳುವರು!
ಹಸುವಿನಂತೆ ಸುಮ್ಮನೆ ಹಾಲಿತ್ತರೆ
   ಯಂತ್ರಗಳನ್ನೇ ಹಚ್ಚುವರು,
ಹುಚ್ಚರಂತೆ ಹೋಯೆಂದರೆ ಹೊದ್ದಿಹ
   ಹಚ್ಚಡಕೇ ಕೈಹಚ್ಚುವರು!

ಪ್ರೀತಿಯ ಹುಡುಗನು ಪ್ರೀತಿಸಿದರೆ, ಅದು
ಹುಚ್ಚೆನ್ನುವಳಿಂದಿನ ಹುಡುಗಿ,
ಘಾತಿಸುವವರೇ ಘನವಂತರಲಾ,
ನಮಿಸುವಳಂಥವರಿಗೆ ನಡುಗಿ!
ಹೆಣವಿದ್ದಲ್ಲಿಗೆ ಹದ್ದೆಯ್ತರುವುದು,
ರಣವಿದ್ದಲ್ಲಿಗೆ ರಣಮಾರಿ,
ಹಣವಿದ್ದಲ್ಲಿಗೆ ಬೆಡಗಿಯರೆಲ್ಲರು,
ಬರುವರಿದೇ ನಿತ್ಯದ ದಾರಿ!
ಹಾರುವುದೆಲ್ಲಾ ಹಕ್ಕಿಯು ಎಂದೇ
ತಿಳಿವನು ಕೋವಿಯ ಹಿಡಿದಾತ,
ಹಿಂದುಗಳೆಲ್ಲಾ ಹೇಡಿಗಳೆಂಬನು
ಪಾಕಿಸ್ತಾನಕೆ ನಡೆದಾತ!
ಅಯ್ಯೋ ಎಂದವಗಾರೇ ತಿಂಗಳು,
ಎಲ್ಲರು ಆತನ ಕೊಲ್ಲುವರು,
ಹುಯ್ಯೋ ಎಂದರಚುವ ಕೇಡಿಗಳಿಗೆ
ಎಲ್ಲರು ನೆರವನ್ನೀಯುವರು!
ಮೀಸೆಯ ಸುಟ್ಟರೆ ಬೆಕ್ಕನು ಗೆಲಬಹು
ದಾಸೆಯ ಸುಟ್ಟರೆ ಬಂಧನವ,
ಯಜಮಾನನ ಬಗ್ಗಿಸಿದರೆ ಬಗ್ಗಿಸ
ಬಹುದಾತನ ಬಳಗದ ಬಲವ!

***

ಸ್ತ್ರೀಯರ ಸ್ವಾತಂತ್ರ್ಯ ಮತ್ತು ಹಿಂದುಳಿದವರ ಏಳಿಗೆ ಇವುಗಳ ಬಗ್ಗೆ ಬಹಳ ಮಾತು ಕೇಳಿಬರುತ್ತದೆ. ಇದು ರಾಜಕೀಯವಲ್ಲ. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸ್ವಾತಂತ್ರ್ಯವನ್ನು ದೇಹಬಲ, ಕಾಯದೆ ಬಲಗಳಿಂದ ಪಡೆದಂತೆ ಇದನ್ನು ಪಡೆಯಬಹುದೆಂದು ಕೆಲವರ ತಿಳಿವಳಿಕೆಯಿದೆ. ಅದರಿಂದಲೇ ಹೆಂಗಸರಿಂದು ಆರ್ಥಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಕೂಲಿಮಾಡಲು (ನೌಕರಿ, ಚಾಕರಿ ಹುಡುಕಲು – ಗಂಡನ ದಾಸ್ಯಕ್ಕಿಂತ ಅನ್ಯದಾಸ್ಯವೇ ಲೇಸೆಂದು) ಹೊರಟಿದ್ದಾರೆ. ಅಧಿಕಾರಲಾಲಸೆಯಿಂದ ಹಿಂದುಳಿದ ವರ್ಗದವರೂ ನೌಕರಿ ಮಾಡಲು ಹತ್ತಿ ವ್ಯಾಪಾರ, ಕೃಷಿ, ಕೈಗಾರಿಕೆಗಳನ್ನು

ಬಿಟ್ಟು ಬಡಬ್ರಾಹ್ಮಣರಾಗಲು ತೊಡಗಿದ್ದಾರೆ. ಇದು ಕಾಲಗುಣವೋ ನಿಂದ ನೆಲದ ಗುಣವೋ ಎಂದು ನನ್ನ ಬಡಶಿಷ್ಯೆ ಸಂಗಮ್ಮ ಕೇಳುತ್ತಾಳೆ. ಏನೆನ್ನಬೇಕು? ಇದು ಕಾಲಗುಣವೂ ಅಲ್ಲ, ನೆಲದ ಗುಣವೂ ಅಲ್ಲ ಮೆದುಳಿನ ಗುಣ! ದಾಸ್ಯವಿರುವುದು ಹೃದಯದಲ್ಲಿ ಹೆಂಗಸಿಗೆ, ಬುದ್ಧಿಯಲ್ಲಿ ಹಿಂದುಳಿದವರಿಗೆ. ಒಬ್ಬಳಿಗೆ ರೂಪದಾಸ್ಯ, ಮತ್ತೊಬ್ಬರಿಗೆ ಧನದಾಸ್ಯ. ಈ ದಾಸ್ಯಕ್ಕೆ ಆಳಾಗಿ ಅವರೀಗ ಮತ್ತೊಂದು ಗುರುತರ ದಾಸ್ಯಕ್ಕೆ ಕೈಯೊಡ್ಡಿ ನಿಂದಿದ್ದಾರೆ; ಅಧಿಕಾರದಾಸ್ಯ ಅದು. ಅದಕ್ಕೆ ನಮ್ಮ ಸಂಗನ ಬಸವನೆಂದ –

ಆನೆ ಬೇಕು ಎಂದು ಬಯಸಿ
  ಹಾರುವಯ್ಯ ದಾನ ಹಿಡಿದ,
ಸಾಕಲಾರದಾಗಿ ರಾಜ –
  ಭಟರಿಗಿತ್ತು ಕಳೆದುಕೊಂಡ!
ನಾಯಿಬೇಕು ಎಂದು ಭಟ್ಟ
  ಕೊಂಡುಕೊಂಡು ಸಾಕಹೋದ
ಸ್ನಾನಮಾಡಿ ಬಂದ ಮೇಲೆ
  ತೋರಬಂತು ತನ್ನ ಲೀಲೆ!
ಬೆಕ್ಕು ನಾಯ ಹಾಗೆ ಕೂಗಿ
  ಹಿಂಡು ತಪ್ಪಿ ಸೊರಗಿತು,
ನಾಯಿಗಳಲಿ ಸಿಕ್ಕಿಬಿದ್ದು
  ಸಾವವರೆಗೆ ಕೊರಗಿತು!
ನಾಯಿ ಬೆಕ್ಕಿನಾಟವಾಡಿ
  ನಾಯೆ ಅಲ್ಲವಾಯಿತು,
ಬೆಕ್ಕು ಪರಚಿದಾಗ ನೊಂದು
  ಅತ್ತು ಸತ್ತು ಹೋಯಿತು!
ಹಲ್ಲುಬಿಡುವ ಹುಡುಗ ಚೆಂದ–
  ವೆಂದು ಮದುವೆಯಾದ ಹುಡುಗಿ
ಸಾವಕಾಲದಲ್ಲಿ ಕೂಡ
  ಹಲ್ಲುಬಿಡಲು ನೊಂದಳು

ತಾನು ಹುಚ್ಚಿಯಾದಳು!
　ಎದೆಯ ನೀಡಿ ತಿರುಗುವಂಥ
ಹುಡುಗಿ ಚೆಂದವೆಂದ ಹುಡುಗ,
　ಸಾಯುವಾಗ ಕೂಡ ಗಂಡ,
ಎದೆಯ ಚಾಚಿ ನಿಲ್ಲಲು –
　ಬೇಗ ಸಾವೆನೆಂದನು!
ಕಾಲ ಮೇಲೆ ಕಾಲುಹಾಕಿ
　ಕುಳಿತ ಸೆಟ್ಟಿಗೆ
ಮಾಲು ಉಳಿಯೆ ರೊಕ್ಕವಿಲ್ಲ –
　ವಾಯ್ತು ಹಿಟ್ಟಿಗೆ!
ಬಾಲ ಬೇಡವೆಂದ ಮಂಗ
　ಬಾಳಲಾರದು
ಮೀಸೆ ಬೇಡವೆಂದ ಗಂಡು
　ಆಳಲಾರದು!

***

ವಿದ್ಯಾಭ್ಯಾಸ, ವಿದ್ಯಾಭ್ಯಾಸ – ಎಲ್ಲಿ ಕೇಳಿದರೂ ಇದೇ ಮಾತು. ಏನಪಾ ವಿದ್ಯಾಭ್ಯಾಸ ಅಂದರೆ? ಅಂತ ಕೇಳಿದರೆ ಉತ್ತರ ಹೇಳುವವರು ಬಹಳ ಜನ ಸಿಗಲಿಕ್ಕಿಲ್ಲ, ಅಪಪ್ರಚಾರ, ಡಿಗ್ರಿದಾನ, ಸಾಮಾನ್ಯಜ್ಞಾನ ಪ್ರಸರಣ, ರೇಡಿಯೋ ಪ್ರಚಾರ, ಭಾಷಣೌಷಧ ಪ್ರಯೋಗ – ಇತ್ಯಾದಿಗಳಿಂದ ದಡ್ಡರನ್ನು ವಿದ್ಯಾವಂತರನ್ನಾಗಿ ಮಾಡುವ ಹುಚ್ಚೊಂದು ಎಲ್ಲೆಲ್ಲೂ ಹರಡಿಹೋಗಿದೆ. ಹುಚ್ಚೆಂದ ಕೂಡಲೆ ಯಾರೂ ಸಿಟ್ಟಿಗೇಳಕೂಡದು – ಶಿಷ್ಯರೇ ಎಚ್ಚರಿಕೆ. ವಿದ್ಯಾಭ್ಯಾಸದ ಮುಖ್ಯ ಗುರಿ ಗುಣಶೀಲರೂಪಣ ಎಂದು ಪಠ್ಯ ಪುಸ್ತಕಗಳಲ್ಲಿ ಬರೆದಿಡಲಾಗಿದೆಯೆಂಬುದನ್ನು ಬಲ್ಲವರು, ಅದು ಪುಸ್ತಕಗಳಿಂದ ಕಲಿವ ಜ್ಞಾನವಲ್ಲ, ಸತ್ಸಹವಾಸದಿಂದ ಗಳಿಸಿಕೊಂಬ ಒಂದು ಮಾಧುರ್ಯ ಎಂಬುದನ್ನು ತಿಳಿಯಲಾರರೇ? ಗುರುವಿನಂತೆ ಶಿಷ್ಯ, ಶಿಷ್ಯನ ಅಪ್ಪ ಇಲ್ಲವೆ ಸರಕಾರ ಕೊಡುವ ಸಂಬಳ ಮತ್ತು ಮರ್ಯಾದೆಗಳಿಗನುಗುಣವಾಗಿ ಗುರು ಇರುವುದು ಸ್ವಾಭಾವಿಕವಿರುವಂತೆ ತದನುಗುಣವಾಗಿ ಗುರು ತೋರುವ ವಿದ್ಯೆ, ಶಿಷ್ಯ ತೆಗೆದುಕೊಂಡ ಜ್ಞಾನ ಎರಡೂ ಒಂದೇ ಮಾರ್ಗ ಹಿಡಿಯುವುವು;

ಕಾಸಿಗೆ ಕೊಸರಿಗೆ ಕುರುಡಕ್ಷರಗಳ
　ಕಲಿಸುವನು–ಗುರು–ನಲಿಸುವನು

ಹಾಸಿಗೆಯಿಂದೇಳದ ಹೆಮ್ಮಕ್ಕಳ
ಒಲಿಸುವನು–ಬಾಯ್–ಸಲಿಸುವನು ॥೧॥
ರಾಮಾ ಚಾಪೆಯ ಹಾಕೆಂದರಗಿಳಿ
ಕಲಿಯುವುದು–ಕಲಿತುಲಿಯುವುದು!
ಗ್ರಾಮೋಫೋನಿನ ಹಾಗೀ ಮಕ್ಕಳು
ಹಾಡುವರು–ಕುಣಿ–ದಾಡುವರು! ॥೨॥
ಕಲಿಯುಗದಲಿ ಬಲ್ಲುಲಿಯೇ ಕಲಿತನ,
ಬೊಗಳುವುದೇ ನಿಜ ಹೊಗಳುವುದು।
ಇಲಿಯೇ ಹುಲಿಯೆಂದೆಂಬುದು ಕೋಶವು,
ಕಾಲುತಲೆ–ತಲೆ–ಕಾಲಹುದು! ॥೩॥
ಮಾನಸ ಶಾಸ್ತ್ರಜ್ಞರು ನಗುವುದಕಳು
ಎನ್ನುವರು–ತಲೆ–ತಿನ್ನುವರು,
ತೋರಿಸಿ ಬಣ್ಣವ ತೊಗಲಿನ ತಿಣ್ಣವ
ಸೂಳೆಯರು–ಹಣ–ಕೀಳುವರು ॥೪॥
ಸಾಕ್ಷರ ರಾಕ್ಷಸರಾಂಟಂಬಾಂಬನು
ಎಸೆಯುವರು–ಹಲ್–ಮಸೆಯುವರು
ದ್ರಾಕ್ಷಾರಸವೇ ನವರಸವೆಂದದೊ
ಕುಡಿಯುವರು–ಮೇಣ್–ಮಡಿಯುವರು ॥೫॥
ಬಟ್ಟೆಯನೆಸೆಯುವ ಬಟ್ಟೆಯಹಿಡಿಯುವ
ತಾರೆಯರೇ–ಗಂ–ಭೀರೆಯರು!
ಮತ್ತವರಿಂದಲೆ ಹಣ ಗಳಿಸುವ ನರ
ಲಕ್ಷ್ಮೀಧರ–ಸ–ನ್ಮಾನ್ಯವರ! ॥೬॥

***

ನನ್ನ ಗುರುಗಳು ಹೇಳುತ್ತಿದ್ದರು – ಒಂದು ಸಲ ಒಬ್ಬನಿಗೆ ಒಬ್ಬ ಹೇಳಿದನಂತೆ – 'ನನಗೆ ಕಾಲೇಜಿನಲ್ಲಿದ್ದಾಗ ಎರಡು ವಿಷಯದಲ್ಲಿ ಪಾರಿತೋಷಕ ಸಿಕ್ಕಿದೆ, ಒಂದನೆಯದು ನನ್ನ ಅದ್ಭುತವಾದ ಸ್ಮರಣಶಕ್ತಿ, ಎರಡನೆಯದು ಯಾವುದೆಂಬುದು ನೆನಪೇ ಆಗುವುದಿಲ್ಲ' ಎಂದು. ಹೀಗಾಯಿತು ನಮ್ಮ ಸಿದ್ಧಪ್ಪನ ಹೆಂಡತಿಯ ಕತೆ. ಹೆಂಡತಿ ತವರು ಮನೆಗೆ

ಹೋದಾಗ ಸಿದ್ಧಲಿಂಗ ಕಾಗದ ಬರೆದನಂತೆ – 'ನೀನು ಓದುಬರಹ ಚೆನ್ನಾಗಿ ಕಲಿತುಕೊಳ್ಳಬೇಕು, ಹಾಗೆ ಮಾಡುವೆನೆಂದು ವಚನಕೊಡು, ಮುಂದಿನ ಕಾಗದದ ಜೊತೆಗೆ ಗದ್ಯ ಪ್ರಬಂಧವೊಂದನ್ನು ಬರೆದುಕಳುಹಿಸು' ಎಂದು. ಮರುಟಪ್ಪಾಲಿಗೆ ಉತ್ತರ ಬಂತು – 'ನೀನು ಹೇಳಿದಂತೆಯೇ ಮಾಡುತ್ತೇನೆಂದು ಭಾಷೆ ಕೊಡುತ್ತೇನೆ' ಎಂದು. ಆ ಕಾಗದದಲ್ಲಿ ಬರಿಯ ಭಾಷೆಯಲ್ಲದೆ ಪ್ರಬಂಧವೇ ಅದರ ಜೊತೆಗಿರಲಿಲ್ಲ!

ಭಾಷೆ ಕೊಡುವುದೇ ಭಾಷೆ ಮುರಿಯಲಿಕೆ
ಬೆಳೆಯು ಅಳಿಯುವುದಕೆ!
ಶಾಸನಂಗಳನು ವಿಧಿಸುವುದೇತಕೆ?
ಮುರಿದು ಹಾಕುವುದಕೆ॥
ಬೇಲಿಹಾಕುವುದು ದನವು ದಾಟಲಿಕೆ,
ಬೀಜ ಹುಳಕೆ ತಿನಲು।
ಮದುವೆಯಾಗುವುದು ಜಗಳವಾಡಲಿಕೆ,
ಮಾನ ಕಳೆದುಕೊಳಲು॥
ಬಟ್ಟೆ ಹಾಕುವುದು ಜನವಮೋಹಿಸಲು,
ಹೊಟ್ಟೆ ತುಂಬಿಸುವುದು।
ಮೋಸ ಹೊಂದದವರನ್ನು ಶಿಕ್ಷಿಸಲು
ಶಕ್ತಿ ಪಡೆಯಲಹುದು॥

***

ಹಿಂದು ಧರ್ಮ ಅಂತ ಒಂದಿದೆ. ಅದರಲ್ಲಿ ಒಬ್ಬನನ್ನು ಬಹಿಷ್ಕರಿಸಲು ನೂರಾರು ಧರ್ಮಸೂತ್ರಗಳಿವೆ. ಆದರೆ ಪತಿತರನ್ನೇ ಪುನರುದ್ಧಾರ ಮಾಡಿ ಮೇಲೆತ್ತಿ ಸ್ವಸ್ಥಾನ ಕೊಡಲು ಯಾವ ಅನುಕೂಲ ಸೂತ್ರವೂ ಇಲ್ಲವೆಂಬುದನ್ನು ನಮ್ಮ ಬಸವಣ್ಣಪ್ಪ ಇದಿರಿಗೆಳೆದ. ಅದೇಕೆ ಬಂತೆಂದರೆ, ಮುಸಲ್ಮಾನರು ಧರ್ಮಾಂಧರು ಎಂದು ಒಬ್ಬ ಎಂದುದಕ್ಕೆ ಹಿಂದುಗಳೇನು ಕಡಿಮೆ ಧರ್ಮಾಂಧರೇನು, ಬಲಾತ್ಕಾರದಿಂದ ಅಪಹೃತಳಾದ ಕನ್ಯೆಯೊಬ್ಬಳನ್ನು, ಅವಳ ಅಪ್ಪ ಅಮ್ಮ ಮನೆಗೆ ಬಂದರೆ ಪುನಃ ಸ್ವೀಕಾರ ಮಾಡಲೊಲ್ಲವೆಂದ ಉದಾಹರಣೆಯನ್ನು ಮತ್ತೊಬ್ಬ ಕೊಟ್ಟ. ಧರ್ಮಬುದ್ಧಿ ಪ್ರೀತಿಯನ್ನು, ವಾತ್ಸಲ್ಯವನ್ನು, ರಕ್ತ ಸಂಬಂಧವನ್ನು, ಕರುಳನ್ನು, ಕರುಣವನ್ನು, ಕೊಲ್ಲಬಹುದಾದರೆ ಅದಕ್ಕೆ ಧರ್ಮಬುದ್ಧಿಯೆನ್ನಬೇಕೋ – ಧರ್ಮಹಾಸ್ಯ, ಸಮಾಜದ ಅಂಜಿಕೆ, ಸ್ವಾರ್ಥ ಎನ್ನಬೇಕೋ? ಸ್ವರಕ್ಷಣೆ ಪ್ರಾಣಿಸಹಜ ಧರ್ಮ. ಮನುಷ್ಯ ಪ್ರಾಣಿಜೀವನಕ್ಕಿಂತ ಎತ್ತರ ಹೋಗಲಾರದವನಾದರೆ ಅವನಿಗೆ ಮನುಷ್ಯತ್ವವಿದೆಯೆನ್ನಲು ಸಾಧ್ಯವೆ? ಸಾಧ್ಯವಿಲ್ಲವೆಂದು

ನಾನಾದರೂ ಒಪ್ಪಿಕೊಳ್ಳಬೇಕಾಯಿತು. ಬೇರೆ ಗತಿಯೇ ಇಲ್ಲ ನಮ್ಮ ಶರಣ ಆಗಲೇ ಹೇಳಿಬಿಟ್ಟಿದ್ದಾನೆ – ಧರ್ಮದಾಸರ ದಂಡು, ಇಂದು ಜಾಡ್ಯದ ತುಂಡು, ಕತ್ತರಿಸಿ ಕಡೆಗಂಡು, ಹುಟ್ಟಿಸೈ ಹೊಸದೊಂದು – ಎಂದು. ಅನಾಗರಿಕತೆಯನ್ನು ಆಲಿಂಗಿಸಿದ ಧರ್ಮಪರಾಯಣತೆ ಹಳಸಿದ ಮಮಕಾರವೆಂದು ಹೇಳಿದ ನಮ್ಮ ಗುರುಬಸವನ ಮಾತು ಸುಳ್ಳೆನ್ನಲಾದೀತೆ? ಗುರು ಹೇಳಿದ –

ಅನ್ನ ಅನ್ನವಲ್ಲ ತಂಗುಳಾದ ಮೇಲೆ
ಬೊಮ್ಮ ಬೊಮ್ಮನಲ್ಲ ಹುಟ್ಟಿ ಬಂದ ಮೇಲೆ,
ನಲ್ಲೆ ನಲ್ಲೆಯಲ್ಲ ಪರನಿಗೊಲಿದಮೇಲೆ
ಬಣ್ಣ ಬಣ್ಣವಲ್ಲ ಕರ್ರಗಾದ ಮೇಲೆ!
ನಾಯಿ ಮುಟ್ಟಿದಂಥ ಮಡಕೆ ಶುದ್ಧವೇನು?
ಸಾಯುವಂತೆ ಹೊಡೆದ ಗಂಡ ಕರುಣಿಯೇನು?
ಪರರಿಗಂಜಿ ಮಗಳ ಬಿಸುಡೆ ಧರ್ಮವೇನು?
ಸೇರಿಬರಲು ದೂರದೊಡೆ ಪ್ರೀತಿಯೇನು?
ಸೆರಗನೆತ್ತಿ ನಡೆವ ಹೆಣ್ಣು ಗರತಿಯೇನು?
ಕಂಡ ಹೆಣ್ಣ ಕಾಮಿಸುವವ ಗಂಡನೇನು?
ಪತಿತರನ್ನು ತುಳಿವ ಹೃದಯ ಹೃದಯವೇನು?
ಕತೆಯ ಕೇಳಿ ಮರೆವ ಬುದ್ಧಿ ಬುದ್ಧಿಯೇನು?
ತಾನೆ ಜಾಣನೆಂಬ ತರುಣ ದಡ್ಡಮಂಗ,
ತಾನೆ ಬೆಡಗಿಯೆಂಬವಳಿಗೆ ಮಾನಭಂಗ,
ತಾನೆ ಶುದ್ಧ ಎಂಬ ಜಾತಿ ದಾಸ್ಯದಾಳು
ತಾವಶಕ್ತರೆಂಬವರಿಗೆ ನಿತ್ಯಗೋಳು

***

೪೨ನೆಯ ಇಸವಿಯಾರಂಭದಿಂದ ಭಾರತದಲ್ಲಿ ಪ್ರವಾಸವೆಂದರೆ ದೊಡ್ಡ ಪ್ರಯಾಸ, ಪ್ರಾಣಪ್ರಯಾಣಾವಸ್ಥೆಯನ್ನು ಅನುಭವಿಸಬೇಕು. ಒಂದು ಪ್ರಯಾಣದಲ್ಲಿ ಎಂಟಾಣೆ ತೆಗೆದುಕೊಂಡು ಪೋರ್ಟರನೊಬ್ಬನು ನನ್ನನ್ನು ಗಂಟುಸಹಿತ ಗಾಡಿಯೊಳಗೆ ಒಗೆದು ಜಾಗಮಾಡಿ ಕೊಟ್ಟಿದ್ದನ್ನು ನಾನೆಂದೂ ಮರೆಯಲಾರೆ. ಇನ್ನೊಮ್ಮೆ ಒರಗುವ ಹಲಗೆಯ ಮೇಲ್ತುದಿಯಲ್ಲಿ ಒಕ್ಕಾಲಿನಿಂದ ನಿಂತೇ ೨೦೦ ಮೈಲುಗಳ ಪ್ರಯಾಣವನ್ನು ನೆರವೇರಿಸಿದ್ದು ಅವಿಸ್ಮರಣೀಯವಾಗಿದೆ. ಕಿಕ್ಕಿರಿದು ನೆರೆದ ಗಾಡಿಯಲ್ಲಿ ಸಂಡಾಸಿನೆಡೆಗೆ ಹೋಗಲು

ಅವಕಾಶವಿಲ್ಲದೆ ಕಿಟಕಿಯೊಳಗಿಂದ ಗಾಡಿ ನಿಂತಾಗ ಕೆಳಕ್ಕೆ ಹಾಕಿ ಕನ್ನಡಕದ ಹರಳನ್ನು ತರಚಿಕೊಂಡದ್ದು ಐತಿಹಾಸಿಕ ಸತ್ಯವಾಗಿದೆ. ಒಬ್ಬ ಹೆಣ್ಮಗಳಿಗೆ ತ್ರಾಸವುಂಟಾಗಿ ವಸ್ತ್ರಮಾಲಿನ್ಯ ಮಾಡಿಕೊಂಡ ಸಂಗತಿಯೂ ಚಿತ್ರಲಿಖಿತವಾಗಿದೆ.

ಇಂಥದೇ ಒಂದು ಪ್ರವಾಸವನ್ನು ನಾನು ಮಾಡಿದೆ. ಮೂವತ್ತಾರು ಜನರು ಕೂಡಬೇಕೆಂದಿದ್ದ ಕೊಠಡಿಯಲ್ಲಿ ೮೫ ಜನರು ಕುಳಿತಿದ್ದರು. ಭರತಖಂಡದ ಜನಸಂಖ್ಯೆಯ ವೈವಿಧ್ಯದ ಒಂದು ತುಣುಕನ್ನೇ ಅಲ್ಲಿ ಕಾಣಬಹುದಾಗಿತ್ತು. ವೈಕುಂಠವಾಸಿಯಾದ ಶ್ರೀ ವಿಷ್ಣುಪರಮಾತ್ಮನು ದಶಾವತಾರಗಳಷ್ಟನ್ನೇ ಮಾಡಿದ್ದರೆ ಆ ಕೊಠಡಿಯಲ್ಲಿಯ ಆ ಮನುಕುಲವು ಪಂಚಾಶೀತಿ ಅವತಾರಗಳನ್ನು ಮಾಡಿತ್ತು, ಎಂಬತ್ತೈದು ಜನರದ್ದು ಎಂಬತ್ತೈದು ಅವತಾರ! ಮತ್ಸ್ಯಾವತಾರಿಯಾದ ಒಂದು ಹುಡುಗಿ ನಾನು ಕುಳಿತ ಹಲಿಗೆಯ ಕೆಳಗೆ ನಿದ್ರಾಮುದ್ರಿತವಾಗಿ ಬಿದ್ದಿತ್ತು. ನನ್ನ ಕಾಲೆಲ್ಲಾದರೂ ತಡೆದ ಕೂಡಲೇ ಕೈಕಾಲು ಅಲ್ಲಾಡಿಸಿ ಜೀವಚಿಹ್ನವನ್ನು ಪ್ರದರ್ಶಿಸುತ್ತಿತ್ತು. ಪೂನಾಕ್ಕೆ ಹೊರಟ ಒಬ್ಬಾಕೆ ಗಂಡನ ತೊಡೆಯ ಮೇಲೆ ತನ್ನ ತಲೆಯಿರಿಸಿ ಎರಡು ಹಲಗೆಗಳ ನಡುವಣ ಪೆಟ್ಟಿಗೆಯೊಂದರ ಮೇಲೆ ಕುಳಿತು ಕೂರ್ಮಯೋಗದಲ್ಲಿದ್ದಳು. ಇಂಥ ಸನ್ನಿವೇಶವನ್ನು ಜನಪದದ್ರಷ್ಟಾರರು ಕಲ್ಪಿಸಿಯೇ 'ನಿದ್ದೆಯ ಕೂಮ' ಎಂಬ ಬೈಗುಳವನ್ನು ಸೃಜಿಸಿರಬೇಕು! ಕಲ್ಪನಾವಿಲಾಸಿಗಳಿಗೆ ಆ ದೃಶ್ಯ ಬಹಳ ಶೃಂಗಾರ ರಸೋದ್ಗಾರಿಯಾಗಿ ಕಾಣಬಹುದಾಗಿತ್ತು. ಎಷ್ಟೋ ಶೃಂಗಾರಕವಿಗಳು ಜೀವನದಲ್ಲಿ ಇಂಥ ಸುಖವನ್ನು ಕಾಣಲಾರದೆ ಕಾವ್ಯದಲ್ಲಿ ತಮ್ಮ ದುಃಖವನ್ನು ತೋಡಿಕೊಂಡಿರಬಹುದಲ್ಲವೆ?

ಒಂದು ನಿಲ್ದಾಣದಲ್ಲಿ ಸರಕ್ಕನೆ ಹತ್ತಿಬಂದ ಪಯಣಿಗನೊಬ್ಬನು ಒಂದು ಕಾಲನ್ನು ಒಳಗಿಟ್ಟು ಇನ್ನೊಂದನ್ನು ಒಳಗಿಡಲು ಜಾಗಕ್ಕಾಗಿ ಒಳಗೆ ಕುಳಿತವನೊಡನೆ ವರಾಹದಂಷ್ಟ್ರವನ್ನು ಹರಿಸಿ ವಾದಿಸುತ್ತಿದ್ದನು. ಕುಳಿತವನು ಎದ್ದರೆ ಜಾಗ ಸಂಕ್ಷಿಪ್ತವಾದೀತೆಂಬ ಭಯದಿಂದ ಆರಡಿ ಉದ್ದದ ಶರೀರವನ್ನು ಮೂರಡಿಗಿಳಿಸಿ ವಾಮನರೂಪಿಯಾಗಿ ಬಾಗಿಲ ಮೂಲೆಯಲ್ಲಿ ಗೂಟ ಬಡಿದಂತೆ ತನ್ನ ಶರೀರಾಧೋಭಾಗವನ್ನು ಪ್ರತಿಷ್ಠಾಪಿಸಿಕೊಂಡಿದ್ದನು. ಮತ್ತೊಬ್ಬ ಮಹಾರಾಯನು ಹಲಗೆಯ ಮೇಲೆ ಟ್ರಂಕಿಟ್ಟು ಅದರ ಮೇಲೆ ತಾನು ನಿಂತು ಕೈಗಳನ್ನು ಮೇಲ್ಗಾಚಿ ಮೇಲೆ ಹಲಗೆಯ ಮೆಟ್ಟಿ ಮೀರಿ ತಲೆಯನ್ನೆತ್ತಿಕೊಂಡು ತ್ರಿವಿಕ್ರಮ ಪರಾಕ್ರಮವನ್ನು ಪ್ರದರ್ಶಿಸುತ್ತಿದ್ದನು. ಕಿಟಕಿಯೊಳಗೆ ನುಗ್ಗಿದ ಸುಗ್ರೀವಕುಲದವನೊಬ್ಬನು ನಿದ್ದೆ ಹೋಗಿದ್ದ ದುರ್ಗ್ರೀವನೊಬ್ಬನೊಡನೆ ಕದನಕ್ಕೆ ನಿಂತು ನಾರಸಿಂಹ ದೃಶ್ಯಕ್ಕೆಡೆಗೊಟ್ಟಿದ್ದನು. ಒಬ್ಬ ಆಧುನಿಕ ಸೀತಾದೇವಿಯು ನುಸುಳಿ ಬಂದು ನಮ್ಮ ಕಾಲುಗಳ ನಡುವೆ ಪೃಷ್ಠವನ್ನು ಪ್ರಸ್ತಾಪಿಸಿಕೊಂಡು ಕುಳಿತು ಹಿಂದೆ ನಿಂತಿದ್ದವರ ಕಡೆಗೆ ತಿರುಗಿ 'ನನ್ನ ಸೀರಿ ಸೆರಗ ಹಿಡಿದು ಜಗ್ಗತೀರಿಯಾಕ' ಎಂದು ರಾವಣತ್ವದ ಆರೋಪವನ್ನು ಮಾಡಿದಳು. ಆದರೆ ಅವಳನ್ನು ಬಿಡಿಸಿಕೊಳ್ಳಲು, ಮಾನರಕ್ಷಣೆ ಮಾಡಲು ಪಕ್ಕದಲ್ಲಿ ರಾಮನಿರಲಿಲ್ಲ, ಇದ್ದ ಹನುಮಂತನೂ ನೆರವಿಗೆ ಬರದೆ 'ಸುಮ್ಮನೆ ಕುಂತ್ಕೊಳ್ಳಮ್ಮ, ಇಲ್ಯಾರು ನಿನ್ನಂಥ

ತ್ರಿಪುರಸುಂದರಿಯ ಸೆರಗ ಹಿಡೀಲಿಕ್ಕೆ ಬಂದಾರು?' ಎಂದು ಗದ್ದರಿಸಿಬಿಟ್ಟನು! ಈ ನಾನಾವತಾರಗಳ ನಡುವೆ ತಿರುಪತಿ ಯಾತ್ರೆ ಮಾಡಿಕೊಂಡು ಬಂದ ಕುಟುಂಬದ ಸ್ತ್ರೀಪುರುಷರ ಮುಂಡಿತಶಿರಸ್ಸುಗಳೂ ಅಳುವ ಮತ್ತು ಮೂತ್ರಪುರೀಷ ವಿಸರ್ಜನಪರವಾದ ಅಪರಿಮಿತ ಸಂಖ್ಯ ಮಕ್ಕಳೂ ಸೇರಿ ಜಗತ್ತಿನ ವಿಶ್ವರೂಪ ದರ್ಶನವನ್ನೇ ಮಾಡಿಸಿಕೊಡುತ್ತಿದ್ದರು. ನನಗಾಗ ಸ್ಫೂರ್ತಿ ಬಂದಿತು.

ಪ್ರಜಾತಂತ್ರಗಣರಾಜ್ಯವಾದ ತತ್ವವಿದನು ಕಂಡೆ–
ಜಾತ್ಯತೀತವಾಗಿರುವುದು ಮತದಾರರ ಮಂಡೆ!
ಮೂರನೆಯಾ ವರ್ಗದಲ್ಲಿ ಜೀವಜಡಗಳೊಂದೆ
ಸ್ಥಾನವೊಂದೆ ಮಾನವೊಂದೆ ಗಾತ್ರ ಪಾತ್ರವೊಂದೆ
ಹೊಲಸು ಚೊಕ್ಕವೆಲ್ಲವೊಂದೆ ರಾಶಿಯೊಂದೆ ಮೇಷ!
ಅಣುಬೃಹತ್ ಕೃಶಸ್ಥೂಲರ ಮೈಯೊಳೊಂದೆ ದೋಷ–
ಜಾಗದಲ್ಲಿ ಸಾಮರಸ್ಯ ಹೊಂದೆವೆಂಬ ಹಠ
ಸರಿ ಮಾಡಲಶಕ್ತವಾಯ್ತು ರೇಲ್ವೆಮಂತ್ರಿ ಮಠ!

ಸಂಪಾದನೆ ಹೆಚ್ಚಿಸಿಕೊಂಬ ಮಾರ್ಗವಿಲ್ಲದಾಗ ಕೊಡುವಷ್ಟು ಖರ್ಚಿಗೆ ಕೊಡಬೇಕು, ಮೇಲೆ ಕಾಸನ್ನು ಮಿಗಿಸಲೂ ಬೇಕು ಎಂದು ಕೇಳುವ ಹೆಂಡತಿಯಂತೆ ಭಾರತದ ಮುಖ್ಯಮಂತ್ರಿಗಳು ಹಿಂದಿನ ಮಂತ್ರಿ ಮತ್ತಾಯರಿಗೆ ಪೀಡಿಸುತ್ತಿದ್ದ ಸಂಗತಿ ಈಗ ಬಯಲಾಗಿದೆ. ಮಿತವ್ಯಯದ ಜೊತೆ ಜೊತೆಗೇ ವಿದೇಶ ಖಾತೆಯ ವಿಶೇಷ ಖರ್ಚುಗಳೂ ನಡೆಯಬೇಕೆಂದು ಹೇಳುತ್ತಿದ್ದ ಸಂಗತಿ ಆಧುನಿಕ ಹಾಲಿವುಡ್ ಹೆಂಡತಿಯನ್ನು ನೆನಪಿಗೆ ತಾರದಿರದು. ಹಾಲಿವುಡ್ಡೆಂಬ ಹೆಸರೇ ಹೇಳುವಂತೆ ಅವಳದು wooden heart – ಮರದೆದೆ. ಅಂಥವಳಿಗೆ ಸುಖದುಃಖ ಪರಿಜ್ಞಾನವೆಲ್ಲಾದರೂ ಇರುವುದು ಶಕ್ಯವೆ? ಕಾಳಿದಾಸನಿಗೂ ಕೂಡ ಒಮ್ಮೆ ಇಂಥ ಅನುಭವ ಬಂದಿತ್ತೆಂದು ತೋರುತ್ತದೆ. ಇಲ್ಲದಿದ್ದರೆ ಅವನು –

ಇಂದೀವರನಿಂದ ನಯನಗಳನು ಸಮೆದು ಧಾತ
ಮುಖವನಂಬುಜದೆ ಮಾಡಿದನಾತ ಪ್ರೇಮಪೀತ
ಅಂಗಗಳನು ಸಂಪಿಗೆಗಳ ಕೋದು ಕಾಂತೆ ನಿನ್ನ
ಎದೆಯ ಮಾತ್ರ ಕಲ್ಲಿನಿಂದ ಕೊರೆದನೇಕೆ ಚಿನ್ನಾ?

ಎಂದು ಮರುಗುತ್ತಿದ್ದನೇಕೆ? ಹೀಗಾಯಿತು ನಮ್ಮ ಮತ್ತಾಯರ ಪಾಡು! ಅವರು ತೋಡಿಕೊಂಡ ಮರುಕದಲ್ಲಿ ಇದೇ ಹಾಡಿದೆ. ಪಾಶ್ಚಾತ್ಯ ನಾಗರಿಕತೆಯಲ್ಲಿ ಮಿಂದು ಮುಳುಗಿದ ನೆಹರು ಸಾಹೇಬರು, ವಿವಾಹ ವಿಚ್ಛೇದಕ್ಕೆ ಬೆಂಬಲವೀಯುವ ಪ್ರಧಾನಮಂತ್ರಿಗಳು, ಭಾರತೀಯ ಪತಿರಾಯನಂತಿರುವ ಮತ್ತಾಯರನ್ನು ಕಂಡು ಹೀಗೆ

ನಡೆದುಕೊಳ್ಳದೆ ಮತ್ತಿನ್ನೆಂತು ನಡೆದುಕೊಂಡಾರು? ಭಾರತೀಯ ಪತಿಗೆ ಹಿಂದೆ ಹುಂಬತನವಿದ್ದರೆ ಈಗ ನಿರ್ವೀರ್ಯ ಹೃದಯದ ನಾಗರಿಕತೆ ಬರುತ್ತಿದೆ; ಆಂಗ್ಲವಿದ್ಯೆ ಹಿಡಿದ ಮೇಲೆ ಮತ್ತಷ್ಟು ಹೆಚ್ಚು. ಆದರೆ ಮತ್ತಾಯರು ಮಾತ್ರ ನಿರ್ವೀರ್ಯರಾಗಿ ಮಂತ್ರಿಮಂಡಲದಲ್ಲಿ ಉಳಿದುಕೊಳ್ಳಲಿಲ್ಲ. ನ್ಯಾಯನಿಷ್ಠುರತೆಯಿಂದ ರಾಜೀನಾಮೆ ಕೊಟ್ಟು ಬಂದರು. ಬಹುಶಃ ನೆಹರು ಸಾಹೇಬರಿಗೀಗಲ್ಲ, ನಾಳೆ ಪಶ್ಚಾತ್ತಾಪವಾಗದಿರದು. ತಾವೆಂದೂ ಬಲತ್ಕಾರ ಧೋರಣ ವಹಿಸಿದವರಲ್ಲವೆಂದು ಬಾಯಲ್ಲಿ ಮಾತ್ರ ಹೇಳುವುದನ್ನು ಬಿಟ್ಟಿಲ್ಲ. ಬಲತ್ಕಾರವೆಂದರೆ ಕೇವಲ ರಟ್ಟೆ ಹಿಡಿದು ದರದರ ಎಳೆಯುವುದೊಂದೇ ಎಂದು ಮಹಾತ್ಮರ ಹೆಸರು ಹೇಳಿ ಸ್ಥಾನಮಾನ ಉಳಿಸಿಕೊಂಬ ಈ ಮಹಾಶಯರು ತಿಳಿದಿರುವಂತೆ ತೋರುತ್ತದೆ. ಅದರಿಂದಲೇ ನಮ್ಮ ಸಿದ್ಧಪ್ಪನ ಹಳ್ಳಿಯ ಶಿವಶಂಕರ ಶಾಸ್ತ್ರಿಗಳು ಪಾಶ್ಚಾತ್ಯ ಗ್ರಾಮಸಿಂಹನೆಂದು ಹೆಸರಾದ ನಮ್ಮೂರಿನ ಸುಖದಾಸರಾಯರೆಂಬ ವಕೀಲರ ಸುನೀತಿ ಕುಮಾರಿಯೆಂಬ ಹೆಸರಿನ ಹೆಂಡತಿಯನ್ನು ಕುರಿತು ಈ ಕೆಳಗಿನ ಕೀರ್ತನ ಮಾಡಿದ್ದು :

ರಾಗ – ಶಂಕರಾಭರಣ, ತಾಳ – ಝಂಪೆ

ಹೆಸರು ಮಾತ್ರ ಸುನೀತಿ ಗುಣದೆ ಸುರುಚಿ
ಬಿಸರುಹಜ ಸೃಷ್ಟಿಸಿದ ಬಂಗಾರ ಭರ್ಚಿ ॥ಪ॥
ಕಾಮನರಗಿಣಿಯೆಂದು ಕುರುಡು ಕವಿ ಬರೆದಾನು
ಕಾಮಕಿಂತಲು ಕ್ರೋಧ ಬಲವಿವಳಿಗೆ॥
ಸಾಮವೆಂಬುದೆ ಇಲ್ಲ ದಾನವೂ ಫಲವಿಲ್ಲ
ನೇಮವಿಲ್ಲದ ನಡತೆ ಕಾಡುವಳಿಗೆ ॥೧॥
ತೆಗೆದುಕೊಂಡರು ಕೊಟ್ಟೆನೆಂದು ಬಾಯ್ ಹಾರಿಸುವ
ವಿಗಡ ಚಾಣಕ್ಯತನಕಿವಳೆ ತಾಯಿ॥
ಹಗಲಿರುಳು ಹಗರಣದ ಮಾತಾಡಿ ಬೆಣ್ಣೆತನ
ಸೊಗಯಿಸುವ ಹಾಗಿತ್ತು ನಗುವ ಬಾಯಿ ॥೨॥
ಏನು ವೀರಾವೇಶ ನೆರೆಹೊರೆಯ ಜನರೆದುರು
ಏನು ಕರುಣಾಲಾಪ ಗಂಡನೆದುರು॥
ಮಾನ ಪರ್ವತದಷ್ಟು ಅನುಮಾನ ಜಗದಷ್ಟು
ಧ್ಯಾನದೇವತೆ ಇವಳದೆಷ್ಟು ಚದುರು ॥೩॥

***

ಉದ್ಯಮ ಪೂರಯಿಕೆ ಮಂತ್ರಿಶಾಖೆಯ ಕಚೇರಿಯೆದುರು ಆ ಶಾಖೆಯ ಕೆಳತರಗತಿಯ ೩೦೦ ಜನ ನೌಕರರನ್ನು ಕಡಿಮೆ ಮಾಡುವುದರ ವಿರುದ್ಧವಾಗಿ ಮತಪ್ರದರ್ಶನ ನಡೆಸಿದರು. ಈ ನೌಕರರ ಪ್ರತಿನಿಧಿಗಳು ಉದ್ಯಮ ಮತ್ತು ಪೂರಯಿಕೆಗಳ ಮಂತ್ರಿ ಶ್ರೀ ಮೆಹತಾಬರನ್ನು ಭೇಟಿಯಾಗಿ ಬೇರೆ ಕೆಲಸ ಕೊಡಿಸದೆ ನೌಕರರನ್ನು ಕೆಲಸದಿಂದ ತೆಗೆದುಹಾಕಲಾಗದೆಂದು ಕೇಳಿಕೊಂಡರು. ಈಗಾಗಲೇ ಈ ಶಾಖೆಯಲ್ಲಿ ೫೭ ಜನರನ್ನು ಕೆಲಸದಿಂದ ತೆಗೆಯಲಾಗಿದೆಯೆಂದೂ ಇನ್ನು ೧೨೩ ಜನರಿಗೆ ನೋಟೀಸು ಕೊಡಲಾಗಿದೆಯೆಂದೂ ತಿಳಿಯುತ್ತದೆ. ಕೆಲಸ ಕೇಳಲಿಕ್ಕೆ ಹೋದ ಜನರು ಸೀರೆ ಉಟ್ಟುಕೊಂಡು ಹೋಗಿದ್ದರೆ ಅಥವಾ ತಮ್ಮ ಹೆಂಡತಿಯನ್ನೋ ಬಾಡಿಗೆ ಹುಡುಗಿಯರನ್ನೋ ಕರೆದು ಕೆಲಸ ಕೇಳಿರೆಂದು ನಿಲ್ಲಿಸಿದ್ದರೆ ಏನಾದರೂ ಪ್ರಯೋಜನವಾಗುತ್ತಿತ್ತೋ ಏನೋ! ಏಕೆಂದರೆ ಜೀವನಾಂಶ ಬೇಡುವ ಗಂಡಮಕ್ಕಳ ಹೊಟ್ಟೆ ಹೊರೆಯುವ ಜವಾಬುದಾರಿಯಿಲ್ಲದ (ಗಂಡಸಿನ ಅರ್ಧ ಶಕ್ತಿಯಿರುವ) ಹೆಂಗಸಿಗೆ ಸಮಪಾಲು ಕೊಡಲು ಕಾಯದೆ ಕಾಯಿಸಲು ಮಂತ್ರಿಮಂಡಲ ಹೊಂಚುಹಾಕಿದ್ದು ಎಲ್ಲರಿಗೂ ತಿಳಿದ ಸಂಗತಿ.

ಅಲ್ಲದೆ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹಲ ಮಂತ್ರಿಗಳು ಡಾನ್ ಕ್ವಿಕ್ಸೋಟಿನ ಶೃಂಗಾರ ವೀರ ವಿಲಾಸದಿಂದ ಕಂಕಣ ಕಟ್ಟಿ ನಿಂತದ್ದು ಸುವಿದಿತವಿದೆ. ಇಂಥ ಕಾಲದಲ್ಲಿ ಕಾಯಿದೆಯಿಂದಲೂ ಸರಕಾರದಿಂದಲೂ ಫಾಯಿದೆ ಮಾಡಿಕೊಳ್ಳಬೇಕೆಂಬುವವರು ಹೆಂಗಸರನ್ನು ಮುಂದೆ ನಿಲ್ಲಿಸಬೇಕು. ಇದೇ ಇಂದು ನಮಗೆ ಬೇಕಾದ ಸವ್ಯಸಾಚಿತ್ವ, ಎರಡನೆಯ ಮದುವೆ ಮಾಡಿಕೊಳ್ಳಕೂಡದೆಂಬ ಕಾಯದೆಯನ್ನು ಕೈಕಾಲು ಕಟ್ಟಿ ಮೂಲೆಗೆಸೆಯಲೆಂದು ಒಬ್ಬ ಜಪಾನೀಯ ಹೆಂಡತಿಯ ಅನುಮತಿಯಂತೆ ಕೋರ್ಟಿನಿಂದ ವಿವಾಹ ವಿಚ್ಛೇದನವನ್ನು ಪಡೆದು, ಬಳಿಕ ಅವಳನ್ನೇ ಮಗಳಾಗಿ ದತ್ತಕ್ಕೆ ತೆಗೆದುಕೊಳ್ಳಲು ಅರ್ಜಿ ಮಾಡಿದ್ದಲ್ಲದೆ, ಮತ್ತೊಬ್ಬಳನ್ನು ಮದುವೆಯಾಗಲು ರಿಜಿಸ್ಟ್ರಾರರ ಆಫೀಸಿಗೆ ನಡೆದನಂತೆ! ಇನ್ನೇನು ಮಾಡಬೇಕವನು ಹೇಳಿ... ಮೊದಲ ಹೆಂಡತಿಯಿಂದ ಮಕ್ಕಳಾಗದಾಗ! ದತ್ತಪುತ್ರನೆಂದಾದರೂ ಔರಸಪುತ್ರನ ಪಿತೃಭಕ್ತಿಯನ್ನು ತೋರಿಸಿಯಾನೇ? ಅದರಿಂದಲೇ ಮಹಾಲಿಂಗ ರಂಗಕವಿ 'ದತ್ತಪುತ್ರನಿಗೇತಕ್ಕೆ ಪಿತೃಭಕ್ತಿ?' ಎಂದು ಕೇಳಿರುವುದು!

ಹೀಗಿರುವುದರಿಂದ ಪ್ರಿಯತಮೆಯರ ಮತ್ತು ಗೆಳತಿಯರ ಆಶ್ರಯವನ್ನು ಪಡೆದು ಸ್ತ್ರೀಯರುದ್ಧಾರ ಮಾಡಹೊರಟ ಹುಂಬ, ವ್ಯಾಮೋಹಪರ ಅಧಿಕಾರಿಗಳಿಗೆ ಬುದ್ಧಿ ಕಲಿಸಿ ತಮ್ಮ ಮತ್ತು ತಮ್ಮ ಹೆಂಡತಿ ಮಕ್ಕಳ ಉದರ ಪೋಷಣೆ ಮಾಡಿಕೊಳ್ಳಲು ಆ ನೌಕರರು ಹೊಂಚು ಹಾಕಿದ್ದರೆ ಖಂಡಿತವಾಗಿ ಫಲವಾಗುತ್ತಿತ್ತು. ನಕ್ರನೀತಿಸಾರದಲ್ಲಿ ಕೂಡ ಇದೇ ಮಾತನ್ನು ಹೇಳಿದೆ :

ಶಾಸನಗಳು ವಿರುದ್ಧವಾಗಲು
ಭಾಷಣದಿ ನಿಂದಿಸದಿರವುಗಳ

ಮೋಸವನು ಖಂಡಿಸಲು ಮಾಯಾವಿದ್ಯೆಯನು ಬಳಸು
ದೋಷವಿಲ್ಲದರಿಂದ ತಾಮಸ
ವಾಸಿಯಾಗಲು ತಾಮಸವೆ ತಾ
ಲೇಸು ವ್ಯವಹಾರಜ್ಞರಿಗೆ ಕಾಲತ್ರಯದೊಳೆಂದೂ

***

ಆಕಾಶವಾಣಿಯ ಕೇಂದ್ರಗಳಲ್ಲಿಂದು ವಿದ್ಯಾವಂತರ ಪ್ರೋಗ್ರಾಮು, ಹಳ್ಳಿಗರ ಕಾರ್ಯಕ್ರಮ, ಹೆಂಗಸರ ಕೂಟ, ಮಕ್ಕಳ ಮಂಗಳ ಮುಂತಾದ ಹಲವಾರು ಬಗೆಯ ಪ್ರೋಗ್ರಾಮುಗಳನ್ನಿಟ್ಟಿದ್ದನ್ನು ಕಂಡು ಒಬ್ಬರು ಕುರುಡರ, ಕುಂಟರ, ಮೂಕರ, ಕಿವುಡರ ಪ್ರೋಗ್ರಾಮುಗಳನ್ನೇಕಿಡುವುದಿಲ್ಲ? ಎಂದು ಕೇಳಿದ್ದಾರೆ. ಇದು ಖಂಡಿತವಾಗಿಯೂ ಬರಾಬರಿ. ನಾಳೆ ಹುಚ್ಚರಾಸ್ಪತ್ರೆಯ ರೋಗಿಗಳು ಕೂಡ ತಾವು ಹಿಂದುಸ್ಥಾನದ ನಾಗರಿಕ ಹಕ್ಕುಗಳನ್ನು ಪಡೆದವರಾದುದರಿಂದ ತಮಗಾಗಿ ಸ್ಪೇಶಲ್ ಪ್ರೋಗ್ರಾಂ ಇಡಿಸಲಿಲ್ಲವೇಕೆ? ಎಂದು ಕೇಳಿದರೆ ತಪ್ಪಾಗಲಾರದು. ಏಕೆಂದರೆ, ಸ್ತ್ರೀ ಸ್ವಾತಂತ್ರ್ಯ, ವಿದ್ಯಾರ್ಥಿಗಳ ಸ್ವಾತಂತ್ರ್ಯಗಳಿಗೆ ಮಾನ್ಯತೆ ದೊರೆತ ಮೇಲೆ ಮಕ್ಕಳ ಮತ್ತು ಹುಚ್ಚರ ಸ್ವಾತಂತ್ರ್ಯಕ್ಕೂ ಮನ್ನಣೆಯನ್ನು ಕೊಡಲೇ ಬೇಕಾಗುವುದು. ಸ್ವಾತಂತ್ರ್ಯವೆಂದರೆ ಸಾಚ್ಛಂದ್ಯ. ಇಂಥ ಸರಕಾರೀ ಆಡಳಿತೆಯ ಪ್ರೋಗ್ರಾಮುಗಳನ್ನೂ, ಅವುಗಳಲ್ಲಿಯ ಕಾರ್ಯಾಂಗಗಳ ಔಚಿತ್ಯ ಗುಣಾದಿಗಳನ್ನೂ ಮೊದಲೇ ಊಹಿಸಿ ಭೋಜರಾಜನ ಆಸ್ಥಾನದಲ್ಲಿದ್ದ ಮರ್ಕಟ ಕವಿ ಬರೆದಿಟ್ಟಿದ್ದಾನೆ –

ಎಲ್ಲ ಜನರನ್ನು ಸಂತಯಿಸಲೆಳೆಸುವ ನೃಪತಿ
ಕಳ್ಳ, ಕಪಟ, ಕಪೀಂದ್ರ, ಹುಚ್ಚು ರೂಪಾಜೀವ
ಗೊಲ್ಲ, ಗಾವಿಲ, ಗದ್ದಲಿಗರ ಮುಖ್ಯಸ್ಥರಿಂ
ಗಾಸ್ಥಾನಮರ್ಯಾದೆಯ
ಸಲ್ಲಿಸಲೆಬೇಕು, ಮದ್ಯಪನಿಗೂ ಬಹುವಚನ
ಸೊಲ್ಲಿಸಲೆಬೇಕು, ಸರ್ವಸಮಾನತೆಯ ಕೊಟ್ಟು
ನಿಲ್ಲಿಸಲೆಬೇಕು ಸುಜನರ್ಕಳಂ ದುರ್ಜನರ ಸಾಲಿನಲಿ
ಸೂಡಿ ಹಿಡಿದು!

***

ಊರ ಮೇಲಿನ ಸಮಾಚಾರದೊಳಗೆ ಮರುಳುಸಿದ್ಧನ ಸ್ವಂತ ಸಮಾಚಾರ ಮುಳುಗಿ ಹೋಗಿತ್ತು. ಆದರೆ ಬಿಸಿಲ ಬೇಗೆಗೆ ಬಳಲಿ ಬೆಂಡಾಗಿ ಬಾಯ್ ಬತ್ತಿ ದಗೆ ಸುತ್ತಿ ಬಸವಳಿದ ಸಭೆಯಲ್ಲಿ ಯಾರಿಗೂ ಯಾವ ರಾಜಕಾರಣವೂ ಬೇಡಾಗಿ ಹೋಯಿತು.

ಮೊನ್ನಿನ ಸಭೆ ಸಪ್ಪೆ ಸಾಮ್ರಾಜ್ಯವಾಗಿತ್ತು. ಸುಂಟರಗಾಳಿ ಸುಯ್ಯೆಂದು ಸುಳಿಸುಳಿಯುತ್ತ ದಾರಿಗರ ಕಣ್ಮನಗಳಿಗೆ ಧೂಳಿನ ಕದಲಾರತಿಯೆತ್ತುತ್ತಿತ್ತು. ಧೂಳೀಸ್ನಾನ, ಧೂಳೀಪಾನ ನಮಗೂ ಆಯಿತು. Dust thou art and to dust thou returnest ನೀನು ಧೂಳು, ನಿನಗೆ ಧೂಳೇಗತಿ ಎಂಬ ಮಹಾವಾಕ್ಯದ ಅರ್ಥದ ಸವಿ ನಮಗಾಯಿತು!

ಇಷ್ಟು ದಿನಗಳಾದರೂ ಸಿದ್ಧಪತ್ನಿ ಸಭಾಂಗಣಕ್ಕೆ ಕಾಲಿಟ್ಟುದಿಲ್ಲ. ಅವಳ ತಪಸ್ಸು ಅಂತರ್ಗತವಾಗಿತ್ತು. ಆದರೆ ಬೇಸಿಗೆ ಈ ವರ್ಷದಲ್ಲಿ ಕವಿ ವರ್ಣನಾ ಸಹಜವಾಗಿರುವುದು ಅವಳ ಹೃದಯಕ್ಕೆ ತಿಳಿಯಿತು –

"ಕರೆದುವು ಸೀರುಡುಗಳ್ ಪೆರ್
ಮರೆಗಾಡೆಲೆಯಿಕ್ಕಿ ಕಳಲೆಬಿಳ್ದುವುತೊರೆಗಳ್
ಪರಿಗೆಟ್ಟುವು ಬೆಳ್ವಯಲೊಳ್
ಸರಳಿಸಿದವು ಮರುಮರೀಚಿಕಾವಾಹಂಗಳ್"

ಎಂಬಂತಿದ್ದ ಬೇಸಿಗೆ ಪಾಕಶಾಲೆಯೊಳಗೂ ಪ್ರವೇಶಿಸಿ ಏಕಾಗ್ರಚಿತ್ತದಿಂದ ಅನ್ನ ಬ್ರಹ್ಮದ ಉಪಾಸನೆ ಮಾಡುತ್ತಿದ್ದ ಅವಳ ಸಮಾಧಿಯನ್ನು ಒಮ್ಮೆಲೇ ಭಂಗಿಸಿಬಿಟ್ಟಿತು. ಆದುದರಿಂದ ಕೆರಳಿದ ಸಿಂಹಿಣಿಯಂತೆ ಆಕೆ ಸಭಾಂಗಣಕ್ಕೆ ಧಾವಿಸಿ, ಈ ಬೇಸಿಗೆಯನ್ನು ಈಗಲೇ ಬಂಧಿಸಿ ಬಿಡಬೇಕು, ಎಂದು ಚಂಡವಾಣಿಯಿಂದ ಘೋಷಿಸಿಬಿಟ್ಟಳು. ಇದನ್ನು ಕೇಳಿ ಸಭೆ ಅವಾಕ್ಕಾಗಿ ಹೋಯಿತು.

ಸಾಲೆಯ ಹುಡುಗರು ಬಿಡುವೆಂದು ರಸ್ತೆಯಲ್ಲಿ ಮನೆಗೆ ಮರಳುತ್ತಿದ್ದರು. ಒಬ್ಬೊಬ್ಬರು ಒಂದೊಂದು ಸಿನಿಮಾಟ್ಯೂನನ್ನು ಗುಣಗುಣಿಸುತ್ತಿದ್ದರು. ಅಂಥ ಉರಿಬಿಸಿಲಿನಲ್ಲಿ! ಹರಯವೆಂದರೇ ಹಾಗೆ, ಹುಡುಗಾಟಿಕೆಗೆ ಬೆಂಕಿ ಬಿಸಿಲುಗಳೆಂಬುದುಂಟೇ? ಅದರೊಲ್ಲೊಬ್ಬ ಕನ್ನಡ ಪ್ರಿಯನೂ ಇದ್ದಂತೆ ತೋರಿತು. ಏಕೆಂದರೆ, ಎಲ್ಲರೂ ಏನೇನೋ ಹಿಂದುಸ್ತಾನಿ ತಮಿಳು, ತೆಲುಗು ಸ್ವರಗಳನ್ನು ದುಂಬಿಸುತ್ತಿದ್ದರೆ ಒಬ್ಬನು ತನ್ನ ಕವಿ ಕಂಠವೆತ್ತಿ ಹಾಡುತ್ತಿದ್ದ ಬಗೆ ಎದ್ದು ಕೇಳಿಸುತ್ತಿತ್ತು –

ಬೇಸಿಗೆ। ಬಂತು । ಬೇಸಿಗೆ ॥ಪ॥
ಬೇಸಿಗೆ ಬಂತು ನಾಡಿಗೆ । ಬಂತು ಕಾಡಿಗೆ
ಬಂತು ಬೀಡಿಗೆ । ಬಂತು ಗೂಡಿಗೆ । ಬೇಸಿಗೆ ಬಂತು
ಬೇಸಿಗೆ ಬಂತು ಜಗದೊಳಗೆ । ಬಂತು ಜನದೊಳಗೆ
ಬಂತು ಮನೆಯೊಳಗೆ । ಬಂತು ಮನದೊಳಗೆ
ಕೆರೆಬತ್ತಿ ಹೋಯ್ತು। ತೊರೆ ಬತ್ತಿ ಹೋಯ್ತು
ಹರೆಬತ್ತಿ ಹೋಯ್ತು। ನರೆ ಸತ್ತು ಹೋಯ್ತು ಹಾಯ್

ಹೇಸಿಗೆ ತಂತು ಊರಿಗೆ। ನಮ್ಮ ಕೇರಿಗೆ
ನಿಮ್ಮ ಮಾರಿಗೆ । ಕೆರೆಯ ನೀರಿಗೆ
ಹೇಸಿಗೆ ಎಲ್ಲ ಹಾಸಿಗೆ, ಕೊಳೆಯ ರಾಶಿಗೆ
ಬಟ್ಟೆ ಮಾಸುಗೆ। ತಾಸು ತಾಸಿಗೆ....
ಬೇಸಿಗೆ ಬಂತು ಪ್ರೀತಿಗೆ । ಬಂತು ನೀತಿಗೆ
ಸಭ್ಯ ರೀತಿಗೆ । ನಮ್ಮ ಖ್ಯಾತಿಗೆ

***

ನಮ್ಮ ಸರಕಾರಗಳ ಶಾಸನ ಸಭೆಗಳಿಂದು ಅಘಟಿತ ಘಟನಾ ನೂತನ ಬ್ರಹ್ಮಗಳಾಗಿವೆ. ಖುಶಿ ಬಂದ ಕೂಡಲೆ ಖುಶಿಯಿಂದ ಮಸೂದೆಯೊಂದನ್ನು ಖುಶಿ ಬಂದಷ್ಟು ಕಾಲದಲ್ಲಿ ಕಾಯಿದೆಯನ್ನಾಗಿ ಮಾಡಿಬಿಡುತ್ತವೆ. ಮದ್ರಾಸು ಸರಕಾರದ ವಿಷಯವಾಗಿ ಇದೇ ಮಾತನ್ನು ಹಿಂದುಪತ್ರಿಕೆಯ ಸಂಪಾದಕೀಯ ಹೇಳಿರುವುದನ್ನು ಮೊನ್ನೆ ನಮ್ಮ ಸಿದ್ಧಪ್ಪ ಕಂಡ. ಅವನಿಗೆ ಅದರಲ್ಲಿ ಯಾವ ತಪ್ಪೂ ಕಾಣಲಿಲ್ಲ. ಏಕೆಂದರೆ ನಾವೇ ಶಾಸನ ಸಭೆಗೆ ಆರಿಸಿ ಕಳಿಸಿದ ಜನರು ಮಾಡುವ ಕಾಯಿದೆಗಳು ನಮಗೆ ಅನುಕೂಲವಾಗಿರದೆ ಹೇಗೆ ಪ್ರತಿಕೂಲವಾಗಿದ್ದಾವು? ಎಂಬುದು ಅವನ ತರ್ಕ. ಶ್ರಮ ವಿಭಜನೆಯನ್ವಯ ನಮ್ಮ ಪ್ರತಿನಿಧಿಗಳಿಗೆ ನಮ್ಮ ಬಗ್ಗೆ ವಿಚಾರ ಮಾಡುವ ಕೆಲಸವನ್ನು ಬಿಟ್ಟು ಕೊಡುವುದೇ ಶಾಸನ ಸಭೆಗೆ ನಾವು ಪ್ರತಿನಿಧಿಗಳನ್ನು ಕಳಿಸಿಕೊಡುವುದರ ಅರ್ಥ ಎಂದು ಸಿದ್ಧಪ್ಪನಂತೆಯೇ ಮಾದಯ್ಯನೂ ನಂಬುತ್ತಾನೆ ಎಂದ ಮೇಲೆ ಶಾಸನಸಭಾ ಸದಸ್ಯರ ಅಭಿಪ್ರಾಯವೆಲ್ಲ ಜನಾಭಿಪ್ರಾಯವೆಂದೇ ಆಗಲಿಲ್ಲವೇ? ಹಿಂದುಸ್ತಾನದಲ್ಲಿ ಅನೇಕ ಜನರು ಈ ರೀತಿ ನಂಬಿರುವುದು ಸಹಜವಾಗಿದೆ. ದುಡಿಯುವುದು ಗಂಡನ ಕೆಲಸ, ಅಡಿಗೆ ಮಾಡಿ ಬಡಿಸುವುದು ಹೆಂಡತಿಯ ಕೆಲಸ ಎಂಬುದೇ ಅವರ ವಾದ. ವಿಚಾರ ಮಾಡುವುದು ಒಬ್ಬರ ಕೆಲಸ, ಆಚಾರದಲ್ಲಿ ತರುವುದು ಮತ್ತೊಬ್ಬರ ಕೆಲಸ. ಒಂದು ಬ್ರಾಹ್ಮ, ಇನ್ನೊಂದು ಕ್ಷಾತ್ರ. ಸೇನಾಪತಿ ವಿಚಾರಮಾಡಿ ಆಜ್ಞೆಯಿತ್ತರೆ ಸಿಪಾಯಿಗಳು ಪಾಲಿಸುತ್ತಾರೆ. ಎಲ್ಲರೂ ವಿಚಾರಮಾಡಲಿಕ್ಕೆ ಹತ್ತಿದರೆ 'ಮೂವರು ಕೂಡಿದರಣ್ಣ, ಹೊಯ್ದರು ಬಾಯಲಿ ಬಣ್ಣ' ಎಂದಾಗುವುದಿಲ್ಲವೆ? ಸಭೆಯಲ್ಲಿ ಈ ವಿಚಾರ ಬಂದ ಕೂಡಲೆ ನಾಸ್ತಿಕ ನಿರ್ವಾಣಪ್ಪನು ಒಂದು ವ್ಯಂಗ್ಯ ಕವನವನ್ನು ಓದಿಬಿಡಬೇಕೇ?

ತಲೆಗಾರರೇ ಬೇರೆ, ಕೈಗಾರರೇ ಬೇರೆ
ತಲೆಗೆ ಕೈಯಿಲ್ಲ, ಕೈಗಿಲ್ಲ ತಲೆಯು।
ಮೂಗುಗಾರರೆ ಬೇರೆ, ಬಾಯಿಗಾರರೆ ಬೇರೆ –
ಮೂಗಿಂಗೆ ಬಾಯಿಲ್ಲ, ಬಾಯ್ಗೆ ಮೂಗಿಲ್ಲ॥

ಅಡಿಗೆಗಾರರೆ ಬೇರೆ, ಉಣ್ಣುವವರೇ ಬೇರೆ
ಅಡಿಗೆಯವರಿಂಗುಂಬ ಹಕ್ಕು ಇಲ್ಲ
ಉಂಬವರಿಗಡಿಗೆಯ ಜ್ಞಾನವೇತಕೆಬೇಕು?
ಅಡಿಗೆಗಾರರಿಗೇಕೆ ಬೇಕು ಹೊಟ್ಟೆ?॥
ರೋಗಿಗೇತಕೆ ವೈದ್ಯಶಾಸ್ತ್ರದ ಜ್ಞಾನ?
ಡಾಕ್ಟರರಿಗೇತಕ್ಕೆ ನೀ ರೋಗ ದೇಹ?
ಮದ್ದು ಮಾಡುವನೊಬ್ಬ, ತಿನ್ನುವವನಿನ್ನೊಬ್ಬ,
ಎರಡನೂ ಒಬ್ಬನೇ ಮಾಡಲೇಕೇ?
ಮೋಟಾರು ಮಾಡುವವನೊಬ್ಬ, ಕೊಳ್ಳುವನ್ನೊಬ್ಬ
ನಡೆಸುವವನೊಬ್ಬ, ಹತ್ತುವನದೊಬ್ಬ।
ಹಣಕೊಡುವನಿನ್ನೊಬ್ಬ, ಬೀಳುವವ ಮತ್ತೊಬ್ಬ,
ಅಪರಾಧಿಯಾಗುವವ ಮತ್ತಿನ್ನೊಬ್ಬ॥
ಸ್ವಾವಲಂಬನವಂಬುದಾವ ನಾಗರಿಕ ಕಲೆ
ಒಬ್ಬರನ್ನೊಬ್ಬ ನಂಬುವುದೆ ನೀತಿ।
ಮಾನವ ಭ್ರಾತೃತ್ವ ಸಹಕಾರ ತತ್ವಗತ
ಬಲ್ಲಿದರು ಹೇಳುವುದೆ ಇಂಥ ರೀತಿ॥
ಡಾರ್ವಿನಿನ ತತ್ವದಂಥ ಪ್ರಯೋಜನಕರವಾದ
ನಿಮ್ಮ ತಲೆಯಳಿದೀತು, ಪ್ರತಿನಿಧಿಗಳ।
ಮುಂಡವಿಲ್ಲಾದೀತು, ರುಂಡವೊಂದುಳಿದೀತು।
ಇಬ್ಬರೂ ಸೇರುವುದು ಸುಲಭವಕ್ಕು॥

***

ಕಲ್ಕತ್ತದಲ್ಲಿ ಭಿಕ್ಷುಕರು ಮಕ್ಕಳನ್ನು ಕದ್ದುಕೊಂಡು ಹೋಗುತ್ತಾರೆಂದು ಹಬ್ಬಿದ ಸುದ್ದಿಯಿಂದ ಗಾಬರಿಗೊಂಡ ಜನರು ನಾಲ್ಕೈದು ಜನ ಭಿಕ್ಷುಕ ಭಿಕ್ಷುಕಿಯರನ್ನು ಚಿತ್ರಹಿಂಸೆಗೆ ಗುರಿಪಡಿಸಿದ ವರದಿಯನ್ನು ಬೆಳಗಿನ ಪತ್ರಿಕೆ ಪ್ರಕಟಿಸಿದೆ. ಇದು ನಮ್ಮ ಕಂಪನಿಯ ಸದಸ್ಯರ ತಲೆ ತಿನ್ನಹತ್ತಿತು. ತಮ್ಮ ಹೊಟ್ಟೆಯನ್ನೇ ತುಂಬಿಕೊಳ್ಳಲಾರದ ಭಿಕ್ಷುಕರು ತುಂಬ ಬೇಕಾದ ಹೊಟ್ಟೆಗಳ ಸಂಖ್ಯೆಯನ್ನು ಹೆಚ್ಚಿಸಲು ಹೀಗೇಕೆ ಹಾತೊರೆಯುತ್ತಾರೆ? ಎಂದು ಎಲ್ಲರಿಗೂ ಶಂಕೆ. ಎಷ್ಟು ಹೊತ್ತು ವಿಚಾರ ಮಾಡಿದರೂ

ಈ ಪ್ರಶ್ನೆ ಬಗೆಹರಿಯದಾಯ್ತು. ಮಕ್ಕಳಿಲ್ಲದೆ ಸಂತತಿಯ ಅಪೇಕ್ಷೆಗೆ ಅವರು ಹಾಗೆ ಮಾಡುತ್ತಾರೆಂದರೆ ನಂಬಲು ಬರದು.

ಅವರಿಗೆ ಮಕ್ಕಳ ಸಂಖ್ಯೆ ಏನೂ ಕಡಿಮೆಯಿಲ್ಲ. ಒಬ್ಬ ದಂಪತಿ ಒಂದು ಬೀದಿಯ ತುದಿಯಲ್ಲಿ ಕುಳಿತರೆ ಆ ಬೀದಿಯ ಎಲ್ಲ ಕೇಂದ್ರಗಳಿಗೂ ನಿಯಮಿಸಲು ಅಗತ್ಯವಾದಷ್ಟು ಮಕ್ಕಳು ಅವರಿಗೆ ಇರುತ್ತವೆ. ಇನ್ನು ಅವರಿಗೇನಾದರೂ ರಾಜಕೀಯ ಉದ್ದೇಶ ಇರಬಹುದೇ? ಅವರಿಗೆ ರಾಜಕೀಯದ ಗಂಧವೇ ಗೊತ್ತಿಲ್ಲ. ಹಾಗಾದರೆ ಅವರಿಗೆ ಮಕ್ಕಳ ಮೇಲೆ ಅಷ್ಟೇಕೆ ಪ್ರೇಮ? ಅದು ಮಕ್ಕಳ ಮೇಲಿನ ಪ್ರೇಮವಲ್ಲ. ಸಾಕಷ್ಟು ಭಿಕ್ಷ ಕೊಡದವರ ಮೇಲೆ ಸೇಡು ತೀರಿಸಿಕೊಳ್ಳಲು ಅವರ ಮಕ್ಕಳನ್ನೇ ತಮಗಾಗಿ ದುಡಿಯಲು ಹಚ್ಚುವ ಚಾಣಕ್ಯ ನೀತಿ ಇರಬಹುದೇ? ಎಂದು ಅನೇಕರು ತರ್ಕಿಸಿದರು. ಈ ಯಾವ ಕಾರಣವೂ ಅಲ್ಲ. ಈಗ ಕೆಲ ವರ್ಷಗಳಿಂದ ಅನ್ನದ ಕ್ಷಾಮ ಬಹಳವಾಗಿದೆ. ಮಕ್ಕಳನ್ನು ಕಳುವ ಅಪರಾಧದ ಬಲದಿಂದ ಭಿಕ್ಷುಕರು ಸರಕಾರದ ಆಥಿತ್ಯವನ್ನು ಪಡೆಯಲು ಹೊಂಚು ಹಾಕಿರಬಹುದೇ? ಎಂದು ನಮ್ಮ ಸಂಗಯ್ಯನವರು ಸೂಚಿಸಿದರು. ಕರ್ಮಧರ್ಮ ಸಂಯೋಗದಿಂದ ಅಷ್ಟೊತ್ತಿಗೆ ಒಂದು ಸಿತಾರಿನ ಸ್ವರ ಹೊರಗಿನಿಂದ ಕೇಳಿಸಬೇಕೆ?

ಬಂಗಾಲಸೇ ಆಯಾ ಹು ಮೈ
ಚಂಡೀ ಚರಣ್ ಕಹತೇ ಮುಝೇ।
ಸಬ್ ಸಾಧುಕೇ ಮಹಾರಾಜ ಮೈ
ಕೌಪೀನ ಗೌರೀ ನಾಥ ಜೈ।
    ದುನಿಯಾಮೆ ಜೋ ಹೈ ಪಾಪಿಯೋ
    ಉದ್ಧಾರ ಕರನೇ ಕೇಲಿಯೇ–
    ಚಂಡೀ ಪದೋಮೇ ರಕ್ತಕಾ
    ಉನಕಾ ಕರೂ ಅಭಿಷೇಕ ಮೈ।
ಅಜ್ಞಾನಿಯೋ ಯೇ ಲೋಗೋಮೇ
ಬಚ್ಚೋಂಕಾ ಪಾಲನ ಕರನೆಕೋ
ಆತಾನಹೀ ಉಸ್ ವಾಸ್ತೆ ಮೈ
ಲೇಕರ್ ಚಲೂ ಚಂಡೀಕೆ ಪಾಸ್।
    ಯೇ ಭಸ್ಮ ಹೈ ಮಾತಾ ಪಿತೋಂಕೇ
    ಆಂಖೊಮೇ ಡಾಲೂ ಜಬ್ ಝಟಕ್
    ಅಂಧೋಂಕೆ ಭಾತಿ ಹೋತೆ ಹೈ–
    ಲಾಲೋಂಕೊ ಲೇಕರ್ ಜಾತು ಮೈ।

ಕ್ಯಾವಾಸ್ತೆ ಬಚ್ಚೋ ಇನ್ಕೊ ಬೋಲ್?
ನಹಿ ವೊ ಸಿಖಾತೇ ಸದ್ಗುಣ,
ಚಂಡೀಕೋ ಸಬ್ ಅರ್ಪಣ್ ಹೋ ಜಾಯ್–
ಭಾರತ್ ವಿರುದ್ಧ್ ಹೋ ಜಾಯೇಗಾ।

***

ಅಜಮೀರದಲ್ಲಿ ನಗರ ಸಭೆಯು ೩೦ ಲಕ್ಷ ರೂಪಾಯಿಗಳ ಒಂದು ಚರಂಡಿ ಯೋಜನೆಯನ್ನು ತಯಾರಿಸಿದೆಯೆಂದೂ ಅದನ್ನು ಕೇಂದ್ರ ಸರಕಾರವು ಮನ್ನಿಸಿ ಸಹಾಯ ಮಾಡುವುದಾಗಿ ಆಶ್ವಾಸನವಿತ್ತಿದೆಯೆಂದೂ ಆ ಪತ್ರಿಕೆಯಲ್ಲಿ ಬಂದ ವರದಿ ನಮ್ಮ ಬಸಪ್ಪನ ಕಣ್ಣಿಗೆ ಬಿತ್ತು. 'ಅಲ್ಲಾ, ತಿಂದು ಮಾಡಿದ ಗಲೀಜನ್ನು ಚೊಕ್ಕ ಮಾಡಲು ಈ ಮಂದಿ ೩೦ ಲಕ್ಷ ರೂ ಖರ್ಚು ಮಾಡುತ್ತದಲ್ಲ, ಅಂದ ಮೇಲೆ ತಿನ್ನಲಿಕ್ಕೆ ಎಷ್ಟು ಲಕ್ಷ ಮಾಡುತ್ತಿರಬಹುದು?' ಎಂದು ಅವನು ಲೆಕ್ಕ ಹಾಕಲಾರಂಭಿಸಿದ. ಅಷ್ಟರಲ್ಲಿ ನಿಂಗವ್ವ ಬಾಯಿಹಾಕಿ 'ರುಪರುಪಾಯಿನೇ ತಿಂದ್ ಕ್ಯಾಸ ಒಕ್ಕೊಡ್ತಾರೇನೀ ಮಂದಿ?' ಎಂದು ಉದ್ಗರಿಸಿದಳು. ಅಗ ಶಿವರಯ್ಯಂಗಾರಿ ತಾನು ಚಿಕ್ಕಂದಿನಲ್ಲಿ ಕೇಳಿದ್ದ ಒಂದು ಕತೆಯನ್ನು ಹೇಳಿದ. ಒಂದು ಕುದುರೆಯಿತ್ತಂತೆ, ಅದು ಗುದದ್ವಾರದಿಂದ ರೂಪಾಯಿಗಳನ್ನು ಹೊರ ಹಾಕುತ್ತೆಂದು ಹೇಳಿ ಕೆಲವು ಬುದ್ಧಿವಂತರಿಗೆ ಒಬ್ಬ ದಡ್ಡ ಮಾರಿದ ಅಂಶವನ್ನು ವಿವರಿಸಿದ. ಅದಕ್ಕೆ ಹೊಂದಿಸಿ ರಾಮಾಚಾರ್ಯರು, ಸುಯೋಧನ ಎಂದು ಕೌರವನಿಗೆ ಹೆಸರು ಬರಲು ಅವನು ಸುಯ್ಯೆಂದು ನಿಶ್ವಾಸ ಬಿಟ್ಟ ಕೂಡಲೆ ಅವನ ಮೂಗಿನಿಂದ ರೂಪಾಯಿಗಳು ಸುರಿಯುತ್ತಿದ್ದುದೇ ಕಾರಣ ಎಂದು ತಮ್ಮ ಪಾಂಡಿತ್ಯವನ್ನು ಪ್ರಕಟಪಡಿಸಿದರು. ಒಟ್ಟಿನ ಮೇಲೆ ಕರ್ನಾಟಕದ ಯಾವ ನಗರ ಸಭೆಯೂ ನಗರ ನೈರ್ಮಲ್ಯಕ್ಕಾಗಿ ೩೦ ಲಕ್ಷದ ಯೋಜನೆ ತಯಾರಿಸಿದ್ದಿಲ್ಲವೆಂದೂ ಹಿಂದುಸ್ಥಾನದಲ್ಲೇ ಇಂಥ ಯೋಜನೆ ಎಂದೂ ಮಾಡದಿದ್ದುದರಿಂದ ಅಜಮೀರದವರು ತೀರ ದಡ್ಡರೆಂದು ಸಭೆಯಲ್ಲಿ ಬಹುಜನರು ಅಭಿಪ್ರಾಯಪಟ್ಟರು! ಇದಕ್ಕೆ ನಮ್ಮ ಸನಾತನ ಧರ್ಮಗ್ರಂಥದಲ್ಲಿ ಉಕ್ತವಾದ ವಾಕ್ಯಗಳ ಆಧಾರವಿರುವುದೇ ಅವರ ಈ ಅಭಿಪ್ರಾಯಕ್ಕೆ ತೂಕ ಕೊಟ್ಟಿತು.

ಖಂಡೇಷು ಭಾರತಃ ಶ್ರೇಷ್ಠಃ
ಪುಣ್ಯಭೂಮಿಃ ಪ್ರಕೀರ್ತಿತಃ।
ಕರ್ಣಾಟಃ ಶ್ರೇಷ್ಠ ದೇಶೇಷು
ಶ್ರೇಷ್ಠಃ ಕರ್ಮವಿದಾಂಪರಃ
ಭಾರತಕ್ಕೊಬ್ಬನೇ ಬುದ್ಧ
ಕನ್ನಡರ್ ಬುದ್ಧರೆಲ್ಲರೂ।

ಏಕೀಕರಣ ಕಾರ್ಯದೌ
ಅನೇಕೀಕೃತ ಬುದ್ಧಯಃ॥
ಎಲ್ಲರೂ ರಾಜರೇ ಇಲ್ಲಿ
ಪ್ರಜಾಜನರೆ ಇಲ್ಲರಿ।
ಎಲ್ಲರೂ ನಾಗರೀಕರೇ
ಭಂಗಿಗಳ್ ಸಿಗಲಾರರು॥
ಮುಖಂಡರೇ ಎಲ್ಲರೂನೂ
ಅನುಯಾಯಿತ್ವ ದುರ್ಲಭ।
ಎಲ್ಲೆಲ್ಲೂ ದೇವರೇ ಇಲ್ಲಿ
ಭಕ್ತವರ್ಗ ಟೂಣಾಪಣಾ॥
ಶೌಚಕ್ಕೆ ಜಾಗವೇ ಇಲ್ಲ
ಎಲ್ಲವೂ ಶೌಚಜಾಗವೇ।
"ಭೂಗ್ರಾಮ" ಪಟ್ಟಣದಲಿ
ಸ್ವತಂತ್ರರ್ ಪಕ್ಷಿವೋಲ್ ಜನರ್॥

***

ಹಳೆಯ ಗಾದೆಗಿಂತ ಹೊಸದಾದ ಹೊಸ ಗಾದೆಯಿಲ್ಲ. ಹೊಸನಾಗಕರಿತೆಗಿಂತ ಹಳೆ ನಾಗರಿಕತೆ ಇಲ್ಲ. ನಾಡಾಡಿಗಿಂತ ಹೆಚ್ಚು ಕಾಡಾಡಿ ಇಂದಿಲ್ಲ. ಸೌಂದರ್ಯಕ್ಕಿಂತ ಹೆಚ್ಚಿನ ಕುರೂಪ ಇಂದು ಸಿಗಲಾರದು. ಧೀರರಿಗಿಂತ ಹೆಚ್ಚಿನ ಹೇಡಿಗಳು ಭಾರತದಲ್ಲಿಲ್ಲ. ಅಹಿಂಸಕರಿಗಿಂತ ಹೆಚ್ಚಿನ ಹಿಂಸಕರು ಹುಡುಕಿದರೆ ಸಿಗಬಹುದೆ? ದರ್ ಸಮಿತಿಗಿಂತ ಕುಶಾಗ್ರಬುದ್ಧಿಯ ರಾಜಕೀಯ ಸಮಿತಿ ಉಂಟೆ? ಪ್ರಾಂತೀಕರಣ ವಿರೋಧಿಗಳಿಗಿಂತ ಭ್ರಾಂತೀಕರಣಾನುರೋಧಿಗಳಿರುವರೇ? ಪರಮಾರ್ಥಿಗಳಿಗಿಂತ ಹೆಚ್ಚಿನ ಸ್ವಾರ್ಥಿಗಳನ್ನು ನೀವು ಕಂಡಿರುವಿರೇ? ಧ್ಯೇಯವಾದಿಗಳಿಗಿಂತ ಹೆಚ್ಚಿನ ಮಾಯಾವಾದಿಗಳನ್ನು ಬಲ್ಲಿರೇ? ಹರ ಚರಣ ಧವಳಾರವಿಂದ ಮಕರಂದ ಮಂದಾಕಿನೀ ಪ್ರವಾಹಗಳೇ, 'ಊಮಾ, ಊಮಾ' ನೀವು ಊಟ ಮಾಡಬೇಡಿರಿ, ಇದೇ ನಿಮಗೆ ಬೀಜಮಂತ್ರ. ನೀವು ಊಟ ಮಾಡಿದರೆ ನಿಮಗೊಂದು ಪ್ರಾಂತವನ್ನು ತುಂಬಿಕೊಟ್ಟಂತಾಗುತ್ತದೆ. ಅದರಿಂದ ಅನ್ನ ಮದವೆಂಬ ಪ್ರಾಂತಮದವುಂಟಾಗುತ್ತದೆ. ಅರ್ಥಾತ್ ನಿಮಗೆ ಮಹೋದರ ಪ್ರಾಪ್ತಿಯಾಗುತ್ತದೆ. ಆಗ ನಿಮಗೇ ನೀವು ಹೊಟ್ಟೆಯಿಂದ ಬೇರೆಂಬ ಆತ್ಮಜ್ಞಾನ ಉಂಟಾಗುತ್ತದೆ. ಅದರಿಂದ ಹೊಟ್ಟೆಯಂತೆಯೇ ಇತರ ಅವಯವಗಳೂ ಪ್ರಾಂತೀಕರಣವನ್ನು ಸ್ಥಾಪಿಸಿಕೊಂಡು ನಿಮ್ಮ ದೇಹದ ಭಾರತೀಯ ಅಸ್ತಿತ್ವವನ್ನೇ ನಿರ್ನಾಮಗೊಳಿಸುವುವು.

ಆದುದರಿಂದಲೆ ಜನಗಳೆ ಕೇಳಿ
ಸತ್ಯವನೆಂದಿಗು ತ್ಯಜಿಸದೆ ಬಾಳಿ
ಅವಯವಗಳ ಈ ಮೋಹವ ಬಿಟ್ಟು
ಕೇವಲ ನಾನೆಂಬುದಕುಣಗೊಟ್ಟು
ಭಾಂಡಗಳನು ಬ್ರಹ್ಮಾಂಡವ ತೊರೆದು
ಹೋಗದ ಹಾಗಿಡಬೇಕೆದೆ ಬಿರಿದು
ಅಜ್ಜಿಯ ಮಾತಿಗೆ ಹೌದೆನ್ನುತ್ತ
ಅಜ್ಜನ ಗಡ್ಡವ ನೇವರಿಸುತ್ತ
ಗಂಜಿಯನೇ ಪಾಯಸವೆಂದುಂಡು
ಗುಂಜಿಸಿ ಗುಂಜಿಸಿ ಆಗಿರಿ ಗುಂಡು
ತರಿತೋಂ ಧಿಕ್ಕಿಟ, ತರಿತೋಂ ಧಿಕ್ಕಿಟ
ನಿಮ್ಮದು ನಿಮಗೇ ರಿಕ್ಕಟ ರಿಕ್ಕಟ
ಗಂಡರ ಕಾಲಿನ ಪೆಂಡೆಯವಾಗಿ
ಉಂಡವರಿಗೆ ಊಳಿಗದವರಾಗಿ
ಬಾಳುವುದಾರ್ಯೋದಾರ ಗುಣ।
ನಮಗೇತಕೆ ಪ್ರಾಂತಗಳ ಹೆಣ?

***

'ಅಪ್ಪಿದ ಅಪ್ಪಿಗೆ ಬಿಡದಾಕೆ' ಎಂದು ಕವಿಗಳೊಬ್ಬರು ಚಳಿಯಾಕೆಯನ್ನು ವರ್ಣಿಸಿದರೆ 'ಎಲ್ಲಿದ್ದಾನೆ ಬೆಚ್ಚನೆಯಾತ?' ಎಂದು ಕೇಳುತ್ತ ಹೊರಟರಂತೆ ಬಯಲು ಸೀಮೆಯ ಪುರಂಧ್ರಿಯರು. ಅರುಣೋದಯದಲ್ಲಿ ನೀರು ತರಹೋದಾಗ ಬಹಳ ಕರುಣಾಸ್ಪದರಾಗಿ ಕಾಣುತ್ತಾರೆ. ಗಂಡನ ಕೂಡ ಗುದ್ಯಾಡಿದ 'ಗಂಡಸ್‌ತನ'ದ ಉಷೆ ಸೂರ್ಯನಾರಾಯಣನ ಸುಂದರ ಮುಖ, ಸುಖದಾಯಕ ಕರಗಳ ದರ್ಶನ ಸ್ಪರ್ಶನಗಳಿಗಾಗಿ ಹಾತೊರೆಯುವ ಕಾಲ. ಗಂಗಾಧರನು 'ನಳ'ದ ಮೂಲಕ ಗಂಗೆಯನ್ನು ಬಿಡುವುದನ್ನೇ ಕಾದು ಕುಳಿತ ಗಂಡು ಗಚ್ಚೆಯ ಗೌರಿಯರು ಕೊಡಗಾಳಗಕ್ಕೆ ಸಿದ್ಧರಾಗುವ ಹುರುಪಿನ ಗುಡುಗುಡಿಕೆ, ಚಡಪಡಿಕೆ ಅವರ ಕರುಣಾಸ್ಪದತೆಯನ್ನು ಕಳೆದೊಗೆದು ಕರ್ಕಶತೆಯನ್ನು ಕೊಡದುಂಬಿಸುತ್ತದೆ. ಓಣಿ ಮನೆಯ ಬಸವಣ್ಣಕ್ಕನು ಅಷ್ಟರಲ್ಲಿ ಅಂದರೆ ಆ ಗುಡು ಗುಡು ಚಳಿಯಲ್ಲಿ ನಳ ಬರುವ ಹೊತ್ತಿಗೆ ಸರಿಯಾಗಿ ತನ್ನ ಹಂಡೆಗೊಡಗಳನ್ನು ಗಿರಣಿ ಕೂಗಿನ ಆಧಾರದಿಂದ ಹೊತ್ತಿಗೆ ಸರಿಯಾಗಿ ಹೊತ್ತು ತಂದು, ೪ ಕೊಡ ಒಯ್ಯುವೆನೆಂದು ಕುಳಿತುಕೊಂಡಳು. ಅವಳು ಸಾಲೆ ಕಲಿತ ಹೆಣ್ಣು ಮಗಳಲ್ಲ. ೧೦

ಒಯ್ದರೂ ನಾಕೇ ಎನ್ನುತ್ತಾಳೆ. ಹೆಚ್ಚಿಗೆ ಹೇಳ ಹೋದರೆ 'ನನಗೆ ನಿಮ್ಮ ಮೈಸೂರೀ ಮಾತು ತಿಳೀವಲ್ಲದು' ಎಂದು ಘಂಟಾನಾದ ಮಾಡುತ್ತಾಳೆ. ಅವಳ ಆ ಕಾಂಸ್ಯಕಂಠದ ಕೇಕಾರವವನ್ನು ಎದುರಿಸಬಲ್ಲ ದಶಕಂಠನಾರು? ಹೇಳಿ ಕೇಳಿ ಹೆಣ್ಣು ಮಗಳು, ಮಾತಿಗೆ ಮಾತಾಡಬರದಾದ ಕೂಡಲೆ 'ನಾನು ಹೆಣ್ಣು ಮಗಳು' ಎಂದು ತನ್ನ ಪುರುಷೌದಾರ್ಯದ ಪಾತ್ರತೆಯನ್ನು ಹಕ್ಕಿನಿಂದ ಸ್ಥಾಪಿಸಿಬಿಡುತ್ತಾಳೆ. ತನಗೆ 'ಹೋರೆವು' ಬಹಳವೆಂದೂ ಏಕಾಕಿನಿಯಾದರೂ 'ಎಮ್ಮೆಗೊಡ್ಡುಗಳ' ಚಾಕರಿ ಮಾಡಬೇಕಾಗಿದೆಯೆಂದೂ ತನ್ನ ಸಂಸಾರ ತಾಪತ್ರಯವನ್ನು 'ವಿದ್ಯಾಧರಾಪ್ಸರೋ ಯಕ್ಷರಕ್ಷೋ ಗಂಧರ್ವ ಕಿನ್ನರಾಃ' ಎಂಬ ೩೩ ಕೋಟಿ ದೇವಗಣಗಳಿಗೂ ಕೇಳಿಸುವಂತೆ ಮೊರೆಯಿಡುತ್ತಾಳೆ! ಈ ವ್ಯವಹಾರ ನೈಪುಣ್ಯವೆಷ್ಟು ಜನಕ್ಕೆ ಗೊತ್ತಿದೆ? ಜಗತ್ತಿರುವುದು ಇಂಥ ಕುಶಲ ಕಲಾವಿದರಿಗೇ ಅಲ್ಲವೇ? ಈ ಅಹಿಂಸಾ ಮಾರ್ಗ, ನಾಗರಿಕ ತಂತ್ರ ಎಷ್ಟು ಜನರಿಗೆ ತಿಳಿದಿದೆ? ನಗರಸಭೆ ಮತ್ತು ಸರಕಾರದ ನೌಕರರು ತೆರಿಗೆ ಮುಂತಾದುವನ್ನು ವಸೂಲು ಮಾಡಬಂದಾಗಲೂ ಅವಳ ಆತ್ಮಸಮರ್ಥನೆ 'ತಾನು ಹೆಣ್ಣು ಮಗಳು, ಆದ್ದರಿಂದ ತನಗೆ ಕಡಿಮೆಯಾಗಿ ಕೊಡುವ ಮತ್ತು ತಡಮಾಡಿ ಕೊಡುವ ಸವಲತ್ತುಗಳು ಸಿಗಬೇಕು' ಎಂಬುದೇ ಆಗಿದೆ. ಸ್ತ್ರೀವಾದಿಗಳೂ ಸ್ತ್ರೀನೇತೃಗಳೂ ಇವಳ ಜಾಣ್ಮೆಯನ್ನೂ ಇವಳಂಥ ಅನುಯಾಯಿಗಳನ್ನೂ ಪಡೆದಿದ್ದರೆ ಇಷ್ಟರೊಳಗೆ ಜಗತ್ತಿನಲ್ಲೆಲ್ಲ ಪ್ರಮೀಳಾರಾಜ್ಯ ಸ್ಥಾಪನೆಯಾಗಿ ಹೋಗುತ್ತಿತ್ತಲ್ಲವೇ? ಆಗ ಅರ್ಜುನ ಕೂಡ ಅವಳ ದಾಸಾನು ದಾಸನಾಗಿ ಬಿಡಬೇಕಾಗುತ್ತಿತ್ತಲ್ಲವೇ? ಇದೇ ಮಾತನ್ನು ನಮ್ಮ ರಾಮ ಲಿಂಗ ಮಠದ ಜಂಗಮರು ಸಂಗೀತವಾಗಿ ಹೀಗೆ ಹೇಳಿದ್ದಾರೆ –

ಹೆಣ್ಣಾಗಿ ಹುಟ್ಟು ನೀ ಮನುಜ ॥ಪ॥
ಬಸ।ವಣ್ಣಾಗಿ ಬೆಳಿಯೋ ನೀ ಸ್ತ್ರೀನಂದಿರೂಪ ॥ಅ.ಪ॥
ಲೆಕ್ಕಾಚಾರಕೆ ಬೇಕಾದಾಗ
ನೀನು। ಅಕ್ಕಾ ಅಣ್ಣಾ ಎಂದು ಕರೆಯಬೇಕಣ್ಣ।
ಬೆಕ್ಕಿನ ಹಾಗಿರಬೇಕು
ವೇಳೆ। ಸಿಕ್ಕಾಗ ಬೇಕಾದ್ದ ಪಡೆಯಬೇಕಣ್ಣ ॥೧॥
ಕೂಗಿ ಹೇಳುವ ಬಾಯಿ ಬೇಕು
ನೀನು। ಮೂಗಿಯಾದರೆ ಫಲವಿಲ್ಲ ಮಟ್ಟಾಳ।
ಹಾಗೆ ಹೀಗೆಂದಾಡಬೇಕು
ನಿನ್ನ। ರಾಗವನೇರಿಸಿ ಗೋಣಗುಟ್ಟಬೇಕು ॥೨॥
ಹಂಡೆಯ ಚೆಂಬೆನ್ನ ಬೇಕು
ಬಂದ। ಗಂಡಸನೆದೆಗೊಟ್ಟು ಕೆಣಕಲು ಬೇಕು

ಪುಂಡತನಕೆ ಸೋಲದಾಗೆ
ತನ್ನ। ಮಂಡೆಯ ಹಿಡಿದತ್ತು ಮುಂಡಾಡಬೇಕು ॥೩॥
ಚಣಕೊಮ್ಮೆ ಜಗಳಾಡಬೇಕು
ಮರು। ಚಣದಲ್ಲಿ ಒಳ್ಳೆಯ ಮಾತಾಡಬೇಕು।
ತೃಣರಂಗದಲ್ಲಿಯೂ ಕೂಡ
ಅತ್ತು। ಪಣವಿಡುವಭಿಮಾನವನು ತಾಳಬೇಕು ॥೪॥
ಅರ್ಥವಿಲ್ಲದ ಮಾತಿನಿಂದ
ಜಗ। ವರ್ಥಸಾಧನೆ ಮಾಡುವುದು ನೋಡು ನಿತ್ಯ।
ಅರ್ಥದ ಮಾತಾಡೆ ನಿನ್ನ
ಜಗ। ತ್ಕರ್ತ ಕೊಂಡೊಯ್ದಾನು ಜೋಕೆ। ಮಂದಾತ್ಮ॥ ॥೫॥

***

ಪರಮಾತ್ಮನ ಕೃಪಾಕಟಾಕ್ಷವೀಕ್ಷಣದಿಂದ ಚಂಚಲನಾದ ಮನ್ಮಥನು ನನ್ನನ್ನು ಇಷ್ಟು ಕಾಲವಾದರೂ ಬಿಡದೆ ಜೊತೆಗಿದ್ದಾನಲ್ಲ ಎಂದು ರಿಟಾಯಿರಾಗಲಿಕ್ಕೆ ಬಂದ ರತಿಯೊಬ್ಬಳು ಮುಂಬಯಿಯ ತನ್ನ ಸೌಧದ ಮೂರನೆಯ ಅಟ್ಟದಲ್ಲಿ ಕುಳಿತು ಆಗತಾನೆ ಗೃಹವನ್ನು ಪ್ರವೇಶ ಮಾಡಿದ ತನ್ನ ಹಳೆಯ ಗಿರಾಕಿಯನ್ನು ಕದ್ದು ನೋಡಿ ನಿಟ್ಟುಸಿರಿಟ್ಟಳಂತೆ. ಹೀಗಾಯ್ತು ಜಮೀನುದಾರಿ ನಿರ್ಮೂಲನ ಕಾಯಿದೆಯನ್ನು ಪಾಸು ಮಾಡಿದಾಗ ಒಬ್ಬ ಜಮೀನುದಾರನಿಗೆ. ಜಮೀನುದಾರರನ್ನು ಎಲ್ಲರೂ ಬಯ್ಯುತ್ತಾರೆ. ಹಾಗಾದರೆ ಸೂಳೆಯನ್ನೇಕೆ ಬೈಯ್ಯುವುದಿಲ್ಲ? ಎಂಬುದೇ ಅವನ ತರ್ಕ. ಜಮೀನು ಅವನಿಗೆ ಅಪ್ಪನಿಂದ ಬಂದಿರುವಂತೆ ಸೂಳೆಗೂ ದೇಹ ಅವಳಪ್ಪನೆಂಬ ಅನಾಮಧೇಯದಿಂದಲೇ ಬಂದಿರುವುದಲ್ಲವೆ? ಅಷ್ಟು ಹೊತ್ತಿಗೆ ಸರಿಯಾಗಿ ಅವನ ಆಲೋಚನೆಗೆ ಅಕಸ್ಮಾತ್ತಾಗಿ ಬೆಂಬಲ ಸಿಗಬೇಕೆ? ಅವನ ಮಿತ್ರನಾದ ಆಧುನಿಕ ಕವಿಯೊಬ್ಬನು ಸಮಾಜ ಸುಧಾರಕ ಗೀತವೊಂದನ್ನು ಆಗತಾನೇ ರಚಿಸಿರುವೆನೆಂದು ತಂದು ಓದತೊಡಗಿದ –

ಸೂಳೆಗಿಂತ ಪರೋಪಕಾರಿ ಯಾರುಂಟು
ದೇಹವನೆ ಬಲಿದಾನ ಕೊಡುವಂಥ ನಂಟು
ಎನ್ನುವರ ಕಣ್ಣುಗಳು ಬರಿ ಕುಂಟು ಕುಂಟು
ಅವಳ ತ್ಯಾಗಕು ಮಿಗಿಲು ಮತ್ತೊಂದುಂಟು
ಈ ಜಮೀನ್ದಾರನನು ನೋಡಿತ್ತ ನೋಡು
ಊರ ಜಗಳಗಳನ್ನು ತೀರಿಸುವ ಹಾಡು

ಅವನ ಜೀವನದುಸಿರು ಅವ ಶಾಂತ ವೀರ
ಜನರ ತಲೆಗಳ ತಿದ್ದುವಾ ಕರ್ಮಕಾರ।
ದೇಹಕಿಂತಲು ತಲೆಯೆ ಮಿಗಿಲಲ್ಲವೇನು
ಅದನಾತ ನಿತ್ಯವೂ ರೈತರಿಗೆ ತಾನು
ನೀಡುವನು ಸುಖ ದುಃಖ ಸಮಭಾಗಿಯಾಗಿ
ತಲೆಗಾಹಿಯಾದವನು ತಲೆ ತೆಗೆವನೇನು?

***

ಊರಿಗೊಂದು ದಾರಿಯಾದರೆ ಪೋರನಿಗೊಂದು ದಾರಿ. ನಗೆಗಾರನದೊಂದು ಬಗೆಯಾದರೆ ಹೊಗೆ ಹಾರುವನದಿನ್ನೊಂದು ಬಗೆ. ನಾನೂ ನಾಯಕ, ನೀನೂ ನಾಯಕ, ದೋಣಿ ಹತ್ತುವವ ದೋಣಪ್ಪ ನಾಯಕ, ಕಾಶ್ಮೀರದ ವಿಭಜನೆ ಮಾಡುವವ ಸಂಯುಕ್ತ ರಾಷ್ಟ್ರ ಸಂಘದ ಐತಪ್ಪ (ಅಯುಕ್ತಪ್ಪ) ನಾಯಕ. ಮತಕೊಡುವವನಿಗಿನೊಬ್ಬ ಮತ ಕೊಡುವವನಿರಬೇಡವೆ? ಸ್ವಂತ ಮತವಿಲ್ಲದವನಿಗೆ ಸ್ವಂತ ಮತವಾದರೂ ಇರಬೇಡವೆ? ಇದೇ ನೋಡಿರಿ ಆಝಾದ ಕಾಶ್ಮೀರ ಫೌಜಿನ ಉಸ್ತಾದರ ಉರವಣಿ! ಪ್ರಜೆಗಳಿಗೆ ಮತಕೊಡದೆ ಅವರು ಬರಿಗೈಯಿಂದ ಏನನ್ನು ಕೊಟ್ಟಾರು? ಆದ್ದರಿಂದ ಮತಪ್ರಚಾರಕ್ಕೆ ತಮಗೆ ಅವಕಾಶ ಕೊಡಬೇಕು. 'ನಾವು ನಿಂತದ್ದು ನಮ್ಮ ಸ್ಥಾನ, ನಾವು ಹಾಡುವುದು ನಮ್ಮ ಗಾನ, ಏನಯ್ಯ ನೌಜವಾನಾ, ಹೌದಂತಿಯೋ, ಸುಳ್ಳಂತಿಯೋ!' ಅಂತಾನೆ. ಅದರ ಆಜಾದ ಷಹಜಾದ ಹಿಡಿದ ಷಹಜಾದೆ ಷಹಜಾದಳೇ ಆಗಬೇಕಲ್ಲವೇ? ನಡೆಯಬಲ್ಲವನ ಒಡವೆ ನುಡಿಯ ಬಲ್ಲವ ಕೊಂಡು ಹೋದಂತೆ ಪಾಕಿಸ್ತಾನವು ಬಾಯಿ ಪಟಾಕಿ ಹಾರಿಸಿ ಹಿಂದುಸ್ಥಾನ ರಕ್ಷಿಸಿದ ಕಾಶ್ಮೀರದ ದಾಯವನ್ನು ಒಯ್ಯಲು ಈಗಲೇ ವಾಗ್ವೈಖರಿಯನ್ನು ತೋರತೊಡಗಿದೆ. ಅದರ ತರ್ಕ ಇಷ್ಟೆ– ನಾಗೋಲೆ ಕೂಳು ನಾಯಿ ತಿನ್ನಬಾರದು, ಭಾಗಾದಿ ಸೊಲ್ಲು ಮೈದುನ ಕೊಳ್ಳಬಾರದು ಎಂದು. ಹೀಗೆ ನಾಚಿಕೆ ತೆಗೆದು ನಾಗೊಂದಿಗೆಯಲ್ಲಿಟ್ಟು, ಭೀತಿ ತೆಗೆದು ತಿಪ್ಪೆಯಲ್ಲಿಟ್ಟು, ಇನ್ನು ಮುಂದೆ ಮಾಡೋದು ಮಾಡ್ಕೋ ನನ್ನ ಗಂಡ ಅಂತ ಕುಳಿತಿದೆ ಅದು. ಇದಕ್ಕೆನ್ನಬೇಕು ನೋಡಿ ರಾಜನೀತಿಯೆಂದು! ಆದರೆ ಹಿರಿಯರು ಹೇಳಿದ ಮಾತೆಂದಾದರೂ ಸುಳ್ಳಾದೀತೆ? ಇಂಥ ಭಂಡ ಧೂರ್ತ ನಿಶಾಚರತ್ವಕ್ಕೆ ಅವರು ಹೇಳುವ ಮದ್ದೇಬೇರೆ –

ನಾಯಿಗೆ ಕೋಲು
ಕಾಗೆಗೆ ಕಲ್ಲು
ಎಮ್ಮೆಗೆ ಹಗ್ಗ
ಹತ್ತಿಗೆ ಮಗ್ಗ
ದುಡಿಯದೆ ಪಾಲಿಗೆ

ಬರುವ ಹಮಾಲಿಗೆ
ಹೋಗೋ ಹೋಗೆಂ
ದಿಡು ಬರೆ ಕಾಲಿಗೆ!

***

೧೧/೨ ರೂಪಾಯಿಗೆ ಸೇರಕ್ಕಿಯಾಗಿರುವುದು ಮತ್ತೊಂದು ಮಹಾಯುದ್ಧದ ಮುನ್ಸೂಚನೆಯೇ? ಎಂದು ಇಲ್ಲಿ ಕೇಳಲಾಗುತ್ತಿದೆ. ಇಲ್ಲಿ ಎಂದರೆ ಎಲ್ಲಿ? ೧೧/೨ ರೂಪಾಯಿಗೆ ಸೇರಕ್ಕಿಯಾದಲ್ಲಿ! ಅಕ್ಕಿ ಎಂದರೆ ಪ್ರಾಣ, ನೆಂಟರು ಅಂದರೆ ಜೀವ– ಏನು ಮಾಡಬೇಕು ಹೇಳಿರಿ? ಅಗ್ಗದ ಆಶೆಗೆ ಮುಗ್ಗಿದ ಹುರುಳಿ ಅಂತ ಜೋಳ ತಂದು ರೊಟ್ಟಿ ಮಾಡೋ ಪ್ರಸಂಗ ಬಂತು. ಆದರೆ ಆ ಜೋಳವಾದರೂ ಚೆಲ್ಲೋದೇ? ಗಾದೆಯಲ್ಲಿದ್ದ ಹಾಗೇ. ಮುಗ್ಗಿದ್ದು ಅಂದರೆ ಮುಗ್ಗಿದ್ದಲ್ಲ, ಹಳೆಯದು, ಹುಳು ತಿಂದದ್ದು. ಅಡವಿಯ ದೊಣ್ಣೆ ಪರದೇಶಿಯ ತಲೆ ಎಂಬಂತೆ ಸರಕಾರ ಸಾವಕಾರ ಎಂಬೆರಡು ಆನೆ ದಂತಗಳ ನಡುವೆ ಮಧ್ಯಮ ವರ್ಗದವರೆಂಬ ನಡುವಣ್ಣ ಸಿಕ್ಕಿ ಸಾಯಲೂ ಬರದೆ ಬದುಕಲೂ ಆಗದೆ ನರಳುತ್ತಿದ್ದರೂ ಹೇಳುವವರಿಲ್ಲ ಕೇಳುವವರಿಲ್ಲ. "ಜನತೆಯ ನೈತಿಕ ಮಟ್ಟವೇ ಇಳಿದು ಹೋದಾಗ ನಾವೇನು ಮಾಡಬೇಕು? ಇದು ನಿಮ್ಮದೇ ಸರಕಾರವಲ್ಲವೇ? ನೀವು ಇದರಲ್ಲಿ ವಿಶ್ವಾಸವಿಡದಿದ್ದರೆ ಹೇಗೆ?" ಎಂದು ಸರಕಾರೀ ಮುಖಂಡರು ಬಾಯಬ್ರಹ್ಮವನ್ನು ನುಡಿಯುತ್ತಿರುವುದನ್ನು ಕೇಳಿದ ಕಾಲಜ್ಞಾನಿ ಕರಿಬಸವ ಶಿವಯ್ಯನವರು ಹೇಳುತ್ತಾರೆ –

ಅರಸ ಹೋಗಿ ಅಧ್ಯಕ್ಷ ಬಂದರೇ –
ನಕ್ಕಿ ಸಿಕ್ಕಲಕ್ಕೇ?
ಕಜ್ಜಿ ಹೋಗಿ ಕುರುವೆದ್ದರೇನು ಆ
ರೋಗ್ಯ ಲಾಭವಕ್ಕೇ?
ಹೆಣ್ಣು ಹೋಗಿ ಗಂಡಾದರು ಬಡವನ
ಕೂಗು ಕೇಳಿಸೀತೇ?
ಗಂಡು ಹೋಗಿ ಗುಂಡಾದರು ಕೃಷ್ಣಾ
ಪಣರ ಕೊಲ್ಲಲಕ್ಕೇ?

***

ಅರಣ್ಯಾಶ್ರಮದ ಸಿದ್ಧನ ಬೋಧವೊಂದೇ ಅರಣ್ಯ ರೋದನ ಎಂದು ತಿಳಿದಿದ್ದ ನನಗೆ ಭಾರತದ ಮುಖ್ಯಮಂತ್ರಿಗಳ ಉಪದೇಶಗಳು ಅರಣ್ಯ ರೋದನವಾಗಿ ಪರಿಣಮಿಸಿವೆ ಎಂಬುದು ಇಂದಿನ ಪತ್ರಿಕೆ ನೋಡಿದಾಗ ತಿಳಿಯಿತು ಎಂದ ಬುಡುಬುಡಿಕೆ ಬೋರಣ್ಣ.

ಯಾಕಪ್ಪ ಅಂದರೆ 'ಸಂಸ್ಕೃತಿಯೆಂಬುದು ಇಂದು ಪುಸ್ತಕಗಳಲ್ಲಿ ಬರೆದಿರುವ ಮಾತಾಗಿದ್ದು ಕೃತಿಗಳಲ್ಲಿ ಲೋಪವಾಗಿದೆ' ಎನ್ನುವ ನೆಹರು ಸಾಹೇಬರಿಗೆ ಅವಿವೇಕವೆಂಬುದು ಅಸಂಸ್ಕೃತಿ, ಅದು ತಮ್ಮ ಮನೋವಾಕ್ಕಾಯ ಕರ್ಮಗಳಲ್ಲಿ ತಲೆ ಎಲ್ಲೆಲ್ಲಿ ಹಾಕಿದೆ ಎಂಬುದರ ಅರಿವಿಲ್ಲ – ಎಂದನವ. ಮುಖ್ಯಮಂತ್ರಿಗಳ ಮೇಲೆ ಟೀಕೆ ಮಾಡುವುದು ಅಹಿಂಸಾತ್ಮಕವಲ್ಲ, ಸಭ್ಯತೆಯಲ್ಲ, ನಾಗರಿಕತೆಯಲ್ಲ – ಎಂದು ಸರಕ್ಕನೆ ಗರ್ಜಿಸಿದ, ದೇಭ ದತ್ತಾತ್ರೇಯ ಪಂಡಿತ. ದೇಭಗಳಿಗೆ ವ್ಯಕ್ತಿಭಕ್ತಿ ಯಾತಕ್ಕಯ್ಯಾ? ಎಂದು ಲಿಂಗರಾಜಯ್ಯ ಸವಾಲು ಹಾಕಿಯೇ ಬಿಟ್ಟ. ಮಹಾವ್ಯಕ್ತಿಗಳಿಂದಲೇ ಇತಿಹಾಸವಾಗುವುದು ಎಂಬುದು ಪುರಷೋತ್ತಮಾಚಾರ್ಯರ ವಿಭೂತಿವಾದ. ಯಾರು ಮಹಾ ವ್ಯಕ್ತಿಗಳು ಎಂದು ನಿರ್ಣಯಿಸುವುದು ಮಹಾಕವಿಗಳಿಗೆ ಸೇರಿದ್ದು ಎಂದು ಮರಿಕಾಳಿದಾಸ ಮುದ್ದವೀರಪ್ಪ ಮುನಿದೊರೆದ. ಮಹಾಕವಿ ಬರೆದದ್ದೆಲ್ಲ ನಂಬುವ ಮೂರ್ಖತೆ ಇಂದಿನ ಇತಿಹಾಸಜ್ಞರಿಗಿಲ್ಲ ಎಂದು ಡಾ. ದೊರೆಸ್ವಾಮಿಯವರ ಮರುಸವಾಲು. ಅಂತೂ ಸಮಸ್ಯೆ ಬಗೆಹರಿಯಲಿಲ್ಲ. ಅದಕ್ಕೆ ಭವರೋಗ ಭೇಷಜನೇ ಬರಬೇಕಾಯಿತು. ಬುಡುಬುಡಿಕೆಯ ಬೋರಣ್ಣ ಒಪ್ಪಿದ್ದಾನಲ್ಲಾ ಆ ಕೆಲಸ ಮಾಡುವುದಕ್ಕೆ –

ಸುಮ್ಮನೆ ಇರುವುದು ಸುಖವಪ್ಪಾ
ನೀವ್। ಕೆಮ್ಮಿದರ್ ಕಮ್ಯೂನಿಜಮ್ಮಪ್ಪಾ।
ನಿಮ್ಮದೆ ಇಂದಿನ ಸರಕಾರ
ನಿಮ। ಗೆಲ್ಲವುದಕ್ಕೂ ದರಕಾರ
ನಿಮ್ಮ ಅಪ್ಪನನೆ ನೀವು ಬೈದರಿಂ
ದಾಗುವಿರೆಲ್ಲ ಕುಮಾರಪ್ಪ ॥೧॥
ಅಪ್ಪನ ಹೊಡೆತವೆ ಹಿಂಸೆಯಲಾ
ಕರಿ। ಯಪ್ಪನ ದಂಥೆಯಹಿಂಸೆಭಲಾ
ತುಪ್ಪದ ದೋಸೆಯು ಬೇಕೆಂದರೆ ಮಗ
ಹಿಂಸೆಯ ಹುಳುವಾದನು ತರಳ ॥೨॥
ಡಾಕ್ಟರು ಕೊಂದರೆ ವೈದ್ಯವದು
ರೇ। ಶನ್ನರೆಯೂಟ ಚಿಕಿತ್ಸೆಯದು
ಸಿಕ್ಕಾಪಟ್ಟೆಯ ಮಾತಾಡಿದರದು
ದಕ್ಕದು ನಾಗರಿಕರಿಗಿಂದು ॥೩॥

***

ಪ್ರೊ.ಬಿ.ಎಚ್.ಶ್ರೀಧರ : ಜೀವನದ ಮುಖ್ಯ ಘಟನೆಗಳು

ಜನನ	:	೨೪ ಏಪ್ರಿಲ್ ೧೯೧೮ ಬಿಜೂರು ಗ್ರಾಮ (ಅವಿಭಜಿತ ದಕ್ಷಿಣ ಕನ್ನಡ)ದ ಬವಲಾಡಿಯಲ್ಲಿ
ತಂದೆ	:	ಸೀತಾರಾಮ ಹೆಬ್ಬಾರ
ತಾಯಿ	:	ನಾಗಮ್ಮ
ತಂಗಿಯರು	:	ರುಕ್ಮಿಣಿ, ಸುಶೀಲ, ರಮ
ಶಿಕ್ಷಣ		
ಪ್ರಾಥಮಿಕ	:	ಬಿಜೂರಿನ ಪ್ರಾಥಮಿಕ ಶಾಲೆಯಲ್ಲಿ
ಮಾಧ್ಯಮಿಕ	:	ಮಿಡಲ್ ಸ್ಕೂಲ್, ಸೊರಬ (೩ ವರ್ಷ) ಮಿಡಲ್ ಸ್ಕೂಲ್, ಸಾಗರ (೧ ವರ್ಷ)
ಪ್ರೌಢ	:	ಮುನಿಸಿಪಲ್ ಹೈಸ್ಕೂಲ್, ಸಾಗರ, ಎಸ್.ಎಸ್.ಎಲ್.ಸಿ. ಶಿವಮೊಗ್ಗ ಕೇಂದ್ರದಲ್ಲಿ
ಇಂಟರ್ ಮಿಡಿಯಟ್	:	ಮೈಸೂರಿನ ಯುವರಾಜ ಕಾಲೇಜಿನಲ್ಲಿ
ಬಿ.ಎ. (ಆನರ್ಸ್)	:	ಮೈಸೂರಿನ ಮಹಾರಾಜ ಕಾಲೇಜಿನಲ್ಲಿ (೧೯೪೧)ರಲ್ಲಿ ರಾಜ್ಯಕ್ಕೆ ಮೊದಲಿಗನಾಗಿ ಉತ್ತೀರ್ಣ ಪೂರ್ಣ ಕೃಷ್ಣರಾವ್ ಬಂಗಾರದ ಪದಕ ನವೀನಂ ರಾಮಾನುಜಾಚಾರ್ಯ ಬಂಗಾರದ ಪದಕ 'ಕವಿಯೂ ವಿಜ್ಞಾನಿಯೂ' ಪ್ರಬಂಧಕ್ಕೆ ಹೊನ್ನಸೆಟ್ಟಿ ಬಹುಮಾನ
ಎಂ.ಎ. ಆನರ್ಸ್	:	ಮಹಾರಾಜ ಕಾಲೇಜು, ಮೈಸೂರು.
ವಿವಾಹ	:	ಮೇ (೧೯೪೬) ರಮಾದೇವಿಯವರೊಡನೆ
ಮಕ್ಕಳು	:	ಸುಮಾ, ಪ್ರತಿಭಾ, ವಿಜಯಾ, ರಾಜಶೇಖರ, ರಾಜೇಶ್ವರಿ
ವೃತ್ತಿ	:	ಪುಣೆಯ ಫೀಲ್ಡ ಕಂಟ್ರೋಲರ್ ಆಫ್ ಮಿಲಿಟರಿ ಎಕೌಂಟ್ಸ್ ಆಫೀಸಿನಲ್ಲಿ ಒಂದು ವರ್ಷ 'ಗುಮಾಸ್ತಗಿರಿ' (೧೯೪೨)
	*	ಭಟ್ಕಳದ ಇಸ್ಲಾಮಿಯ ಆಂಗ್ಲೋ ಉರ್ದು ಹೈಸ್ಕೂಲಿನಲ್ಲಿ ಸಹ ಶಿಕ್ಷಕರಾಗಿ ೪ ವರ್ಷ ಹಾಗೂ ಹೆಡ್ ಮಾಸ್ಟರ್ ಆಗಿ ೧ ವರ್ಷ
	*	'ಕರ್ಮವೀರ' ವಾರಪತ್ರಿಕೆ (ಹುಬ್ಬಳ್ಳಿ)ಯ ಉಪಸಂಪಾದಕರಾಗಿ (೧೯೪೭–೫೧)
	*	ಕುಮಟದ ಕೆನರಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕ (೧೯೫೧–೬೨)ರಾಗಿ
	*	ಶಿರಸಿಯ ಎಂ.ಎಂ. ಕಲಾ–ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪ ಪ್ರಾಚಾರ್ಯರಾಗಿ (೧೯೬೨–೬೯) ಸಂಸ್ಕೃತ ಮತ್ತು ಕನ್ನಡ

ಪ್ರಾಧ್ಯಾಪಕರಾಗಿ.

* ಸಿದ್ಧಾಪುರದ ಎಂ.ಜಿ.ಸಿ. ಕಾಲೇಜಿನಲ್ಲಿ ಪ್ರಾಚಾರ್ಯರಾಗಿ (೧೯೬೯–೭೬)
* ಶಿರಸಿಯ ಮಾಡರ್ನ್ ಎಜ್ಯುಕೇಷನ್ ಸೊಸೈಟಿಯ ಆನರರಿ ಮೆನೇಜರ್‌ಗಾಗಿ ೧೫–೬–೧೯೮೨ ರವರೆಗೆ

ನಿಧನ : ಏಪ್ರಿಲ್ ೨೪, ೧೯೯೦

ಪ್ರಕಟಣೆಗಳು : ೧೯ನೇಯ ವಯಸ್ಸಿನಲ್ಲಿ ಇಂಟರ್ ಮೀಡಿಯಟ್ ಓದುತ್ತಿದ್ದಾಗ ಬೆಂಗಳೂರಿನ 'ಸುಬೋಧ' ರಾಮರಾಯರ ಕರೆಯ ಮೇರೆಗೆ ಬರೆದು ಪ್ರಕಟಿಸಿದ ಚಂಪಕಮಾಲಾ ವೃತ್ತದಲ್ಲಿದ್ದ ಕವನ ಮೊದಲ ಪ್ರಕಟಣೆ. ೧೯೯೦ರಲ್ಲಿ ಕೈಗಾ ಅಣು ವಿದ್ಯುತ್ ಸ್ಥಾವರ ಕುರಿತು 'ನಾಗರಿಕ' ಪತ್ರಿಕೆಯಲ್ಲಿ ಕೊನೆಯ ಲೇಖನ. ಈ ಮಧ್ಯದಲ್ಲಿ ೫೦ಕ್ಕೂ ಹೆಚ್ಚು ಪುಸ್ತಕಗಳು, ನೂರಾರು ಲೇಖನಗಳು ಪ್ರಕಟವಾದವು.

ಪ್ರಶಸ್ತಿ/ಗೌರವಗಳು

ಕಾವ್ಯಸೂತ್ರ : ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ
ತೀ.ನಂ.ಶ್ರೀ ಸ್ಮಾರಕ ಬಹುಮಾನ
ಮೈಸೂರು ವಿ.ವಿ. ಸುವರ್ಣ ಮಹೋತ್ಸವ ಬಹುಮಾನ

ರಾಷ್ಟ್ರಸೂತ್ರ : ರಾಜ್ಯ ಸರಕಾರ ಅನುದಾನ
ಮೂರು ಸಾವಿರ ಮಠ, ಹುಬ್ಬಳ್ಳಿ, ಬಹುಮಾನ

ಜ್ಞಾನಸೂತ್ರ : ಹುಬ್ಬಳ್ಳಿಯ ಲೋಕ ಶಿಕ್ಷಣ ಟ್ರಸ್ಟ್ ಬಹುಮಾನ

ಮಾನಸ ದರ್ಪಣ : ಮದ್ರಾಸ್ ಕ್ರಿಶ್ಚಿಯನ್ ಟೆಕ್ಸ್ಟ್‌ಬುಕ್ ಕಮಿಟಿ ಬಹುಮಾನ

ನೌಕಾಗೀತ : ಕೇಂದ್ರ ಸರಕಾರದ ಸಂರಕ್ಷಣಾ ಶಾಖೆ ಬಹುಮಾನ

ರಸಯಜ್ಞ : ದೇವರಾಜ ಬಹಾದೂರ ಬಹುಮಾನ

ಮನುಸ್ಮೃತಿ
(ರಾಜಧರ್ಮ) : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಪದವಿ ತರಗತಿ ಪಠ್ಯಪುಸ್ತಕ
೫೫ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪತ್ರಿಕಾ ಗೋಷ್ಠಿ ಅಧ್ಯಕ್ಷ ಉ.ಕ. ಜಿಲ್ಲಾ ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ (೧೯೭೪)
ಕುಂದಾಪುರದಲ್ಲಿ 'ಜೇಸೀ' ಸನ್ಮಾನ (೧೯೮೦)
ಶಿರಸಿಯ ರೋಟರಿ ಕ್ಲಬ್ ಸನ್ಮಾನ (೧೯೮೭)
ಶಿರಸಿಯ 'ರಂಗ ಸಂಗ' ಕಲಾರಂಗದವರಿಂದ ಪೌರ ಸನ್ಮಾನ (೧೯೮೭)
ಯುಗ ಪುರುಷದ ಬಳಗದಿಂದ ಕಿನ್ನಿಗೋಳಿಯಲ್ಲಿ ಸನ್ಮಾನ (೧೯೮೮)

ಬಿ.ಎಚ್.ಶ್ರೀಧರ ಕೃತಿ ಸೂಚಿ

೧. ಕಾವ್ಯ

ಮೇಘನಾದ	ಸಾಹಿತ್ಯ ಮಂದಿರ, ಮೈಸೂರು	೧೯೪೫
ಕಿನ್ನರಗೀತ	ಕಥಾಂಜಲಿ ಗ್ರಂಥಮಾಲೆ, ಬೆಂಗಳೂರು	೧೯೪೭
ಅಮೃತಬಿಂದು	ಸಂಯುಕ್ತ ಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ	೧೯೪೯
ಮಂಜುಗೀತ	ಲೇಖಕರು, ಕುಮಟ	೧೯೫೮
ರಸಯಜ್ಞ	ವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಶಿರಸಿ	೧೯೬೪
ಮುತ್ತುರತ್ನ	ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ಮ.ಮು. ೧೯೮೭)	೧೯೬೮
ನೌಕಾಗೀತ	ಅಪ್ರಕಟಿತ (ಖಾಸಗಿ ಪ್ರಸಾರದಲ್ಲಿ)	೧೯೬೮
ಕದಂಬ ವೈಭವ	ಪ್ರಬುದ್ಧ ಕರ್ನಾಟಕದಲ್ಲಿ	೧೯೭೦;
	ಸಾಹಿತ್ಯ ಮಂದಿರ ಶಿರಸಿ	೧೯೮೭
ಕಂಟಕಾರಿ ಮಹಾಕಾವ್ಯಂ	ದೀನಬಂಧು ಪ್ರಜಾಶನ, ಹೊನ್ನಾವರ	೧೯೮೧
ಜಾತವೇದ	ಪಿ.ಎ.ಎನ್. ಪಬ್ಲಿಷರ್ಸ್, ಬೆಂಗಳೂರು	೧೯೮೪
ಅಮೃತಬಿಂದು (ಶ್ರೀಧರ ಕಾವ್ಯ ವಾಚಿಕೆ)	ಸಾಹಿತ್ಯ ಪರಿಷತ್ತು ಬೆಂಗಳೂರು	೨೦೦೭

೨. ಯಕ್ಷಗಾನ

ಯಕ್ಷಗಾನ ಪಂಚರಾತ್ರ ವಾರ್ಧಿಕ್ಯ, ಶಿರಸಿಯ 'ಧ್ಯೇಯನಿಷ್ಠ ಪತ್ರಕರ್ತ' ದಿನ ಪತ್ರಿಕೆಯಲ್ಲಿ ೫–೧೨–೧೯೯೩ ರಿಂದ ೮–೫–೧೯೯೪ರ ವರೆಗೆ ಪ್ರತಿ ಭಾನುವಾರ

೩. ನಾಟಕ

ಮಯೂರ ಶರ್ಮ, ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ	೧೯೮೮
ಸೋಮಾರಿಗಳ ಕ್ಲಬ್ (ಅಪ್ರಕಟಿತ)	೧೯೮೭

೪. ಆತ್ಮಕಥೆ

ಜೀವಯಾನ, ಬಿ.ಎಚ್.ಶ್ರೀ. ಸಾಹಿತ್ಯ ಪ್ರಶಸ್ತಿ ಸಮಿತಿ, ಶಿರಸಿ ೧೯೯೪

೫. ವಿನೋದ–ವಿಡಂಬನೆ

ಬೇತಾಳಗಳ ಕುಣಿತ	ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ	೧೯೫೧
ಭಾಷಣಗಳ ಭೈರವರ ಒಡ್ಡೋಲಗ	ಎ.ಎಂ.ಜಿ. ಸಾಹಿತ್ಯ ಪ್ರಕಾಶನ, ಉಡುಪಿ	೧೯೬೬

೬. ವಿಮರ್ಶೆ

ಬೇಂದ್ರೆ	ಎಂ.ಜಿ.ಎಂ. ಕಾಲೇಜು ಉಡುಪಿ	೧೯೫೬
ಹೊಸಗನ್ನಡ ಸಾಹಿತ್ಯ ಶೈಲಿ	ಪ್ರತಿಭಾ ಗ್ರಂಥಮಾಲೆ, ಧಾರವಾಡ	೧೯೫೬
ಕವೀಂದ್ರ ರವೀಂದ್ರ	ಶಶಿ ಪ್ರಕಾಶನ, ಬೆಂಗಳೂರು	೧೯೫೯
ಕಾವ್ಯಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೮
ಪ್ರತಿಭೆ	ರವೀಂದ್ರ ಪ್ರಕಾಶನ, ಕಾರ್ಗಲ್	೧೯೭೮
ಸಂಸ್ಕೃತಗಳ ಕನ್ನಡಗಳ ಬಾಂಧವ್ಯ	ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಮಂಗಳೂರು	೧೯೮೧
ಪಸರಿಪ ಕನ್ನಡಕ್ಕೊಡೆಯನೀಗ ದರಾಂಕಿತ ಬೇಂದ್ರೆ	ಶ್ರೀಮಾತಾ ಪ್ರಕಾಶನ ಧಾರವಾಡ	
ಜನ್ನ (ಸಂ.ವಿ.ಸಿ)	ಐ.ಬಿ.ಎಚ್.ಪ್ರಕಾಶನ ಬೆಂಗಳೂರು	೧೯೭೫

೭. ವೈಚಾರಿಕ

ಭಾರತೀಯ ನಾಗರಿಕತೆಗೆ	ಪ್ರಸಾರಾಂಗ	೧೯೫೯
ಮನುವಿನ ಕೊಡುಗೆ	ಕ.ವಿ.ವಿ. ಧಾರವಾಡ (ಮರುಮುದ್ರಣ)	೧೯೭೧
ಪಂಚಮುಖಿ	ಅಂತರಂಗ ಕಾರ್ಯಾಲಯ, ಉಡುಪಿ	೧೯೫೫
ವಿದೇಶದ ತಿಳಿವಳಿಕೆಗಳು	ರಾಮಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಕುಮಟ	೧೯೫೯
ಜ್ಞಾನಸೂತ್ರ	ವಿದ್ಯಾರಣ್ಯ ಗ್ರಂಥ ಪ್ರಕಾಶನ, ಶಿರಸಿ	೧೯೬೯
ಮಾನಸದರ್ಪಣ (ಹನುಮಂತರಾವ್ ಅವರೊಂದಿಗೆ)	ಸಮಾಜ ಪುಸ್ತಕಾಲಯ, ಧಾರವಾಡ	೧೯೭೩
ರಾಷ್ಟ್ರಸೂತ್ರ	ವಿಶ್ವ ಪ್ರಕಾಶನ, ಹುಬ್ಬಳ್ಳಿ	೧೯೭೪
ವಿಚಾರ ವಿಜಯ	ರವೀಂದ್ರ ಪುಸ್ತಕಾಲಯ, ಕಾರ್ಗಲ್	೧೯೮೧
ಭಾರತೀಯ ಮೂರ್ತಿಶಿಲ್ಪ	ಬಂಡಾಯ ಪ್ರಕಾಶನ, ಅರೆಅಂಗಡಿ	೨೦೦೯

೮. ಇತಿಹಾಸ

ಬನವಾಸಿಯ ಕದಂಬರು	ಶತಮಾನೋತ್ಸವ ಸಮಿತಿ, ಬನವಾಸಿ (ಎಲ್.ಟಿ. ಶರ್ಮಾರೊಂದಿಗೆ)	೧೯೬೬
ಬನವಾಸಿಯ ಇತಿಹಾಸ	ಸಾಹಿತ್ಯ ಮಂದಿರ, ಶಿರಸಿ	೨೦೦೪

೯. ಇತರೆ

ಮಯೂರ ಶರ್ಮ	ಐ.ಬಿ.ಎಚ್. ಪ್ರಕಾಶನ, ಬೆಂಗಳೂರು (ಮರುಮುದ್ರಣ ೧೯೭೧)	೧೯೭೧
ಕೌಶಿಕ ರಾಮಾಯಣ	ಐ.ಬಿ.ಎಚ್. ಪ್ರಕಾಶನ, ಬೆಂಗಳೂರು	೧೯೭೨

ರಮಣ ಮಹರ್ಷಿ ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೬೯
ಉತ್ತರ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು (ಉಪಲಬ್ಧವಿಲ್ಲ)
ಬನವಾಸಿಯ ಕೈಪಿಡಿ ೧೯೭೧
ಸಾಹಿತ್ಯ ಚಿಂತನ (ಮಂಜುವಾಣಿಯಲ್ಲಿ ಧಾರಾವಾಹಿಯಾಗಿ)
ಶಿವಪುರಾಣ (ಮಂಜುವಾಣಿಯಲ್ಲಿ ಧಾರವಾಹಿಯಾಗಿ)
ವೇದರಹಸ್ಯಸಾರ ರಾಜಶೇಖರ ಹೆಬ್ಬಾರ, ಶಿರಸಿ ೨೦೦೩

೧೦. ಅನುವಾದ (ಇಂಗ್ಲಿಷಿನಿಂದ)

ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ
(ಆರವಿಂದರ The Foundations of Indian Culture (ಭಾಗ–೧) ಅನುವಾದ)
ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೫

ಭಾರತೀಯ ವಾಙ್ಮಯ
(ಅರವಿಂದರ The Foundations of Indian Culture (ಭಾಗ–೨) ಅನುವಾದ)
ಎನ್.ಆರ್.ರಾವ್‌ರೊಂದಿಗೆ ಸುಲಭ ಸಾಹಿತ್ಯ ಪ್ರಕಾಶನ, ಕುಮಟ ೧೯೫೭

ಟಿ.ಎಸ್.ಈಲಿಯಟ್ (ಎ.ಸಿ.ಬ್ರ್ಯಾಡ್ ಬ್ರೂಕ್‌ರ T.S.Eliot ಅನುವಾದ)
ಎಂ.ಜಿ.ಎಂ. ಕಾಲೇಜು ಉಡುಪಿ. ೧೯೫೭

ಸ್ವಾತಂತ್ರ್ಯ ಮೀಮಾಂಸೆ
(ಜೆ.ಎಸ್. ಮಿಲ್ಲರರ On Liberty ಅನುವಾದ ಎನ್.ಆರ್. ರಾವ್‌ರೊಂದಿಗೆ)
ಕುಮಟ ೧೯೬೧

ಮಾತೃಶ್ರೀ (ಪಶುಪತಿಯವರ On the Mother Divine ಅನುವಾದ)
ಶ್ರೀ ಅರವಿಂದೋ ಸೊಸೈಟಿ, ಶಿವಮೊಗ್ಗ ೧೯೭೫
ವೇದರಹಸ್ಯ (ಅರವಿಂದ The Secret of the Veda ಅನುವಾದ) (ಅಪ್ರಕಟಿತ)
ನೆಹರೂ ಉವಾಚ (ಉಪಲಬ್ಧವಿಲ್ಲ)
ರಮಣ ಮಾರ್ಗ ಭಾಗ ೧ ಮತ್ತು ಭಾಗ –೨
(ಓಂ ಸಾಧು ಅವರ The Path of Ramana Part-1 & Part 2 ಅನುವಾದ)
ಅಪ್ರಕಟಿತ

ಅನುವಾದ (ಸಂಸ್ಕೃತ)

ಕಾಳಿದಾನ ಕಾವ್ಯ ಸೌರಭ ರೋಟರಿ ಕ್ಲಬ್, ಕುಮಟ (ಉಪಲಬ್ಧವಿಲ್ಲ) ೧೯೬೨
ಕುಂದಮಾಲೆ (ನಾಟಕ) ಗೀತಾ ಬುಕ್ ಹೌಸ್, ಮೈಸೂರು ೧೯೬೭
ಸಂಸ್ಕೃತ ಸುಭಾಷಿತ ಸಂಗ್ರಹ ಪ್ರಸಾರಾಂಬ, ಕ.ವಿ.ವಿ. ಧಾರವಾಡ ೧೯೭೧
ರಾಜಧರ್ಮ ಪ್ರಸಾರಾಂಗ, ಕ.ವಿ.ವಿ. ಧಾರವಾಡ ೧೯೭೪
(ಮನುಸ್ಮೃತಿ ೭ನೇ ಅಧ್ಯಾಯದ ಅನುವಾದ – ಟಿಪ್ಪಣಿ, ಪೀಠಿಕ ಸಹಿತ ಬಿ.ಆರ್.ಮೋಡಕರೊಂದಿಗೆ)


೧೧. ಸಂಪಾದಿತ

ನವರತ್ನ (ಮಿಸಲೆನಿ) ಸುಲಭ ಸಾಹಿತ್ಯ ಪ್ರಕಾಶನ, ಕುಮಟ (ವರ್ಷ ನಮೂದಿಸಿಲ್ಲ)

ಬವವಾಡಿ ಹಿರಿಯಣ್ಣ ಹೆಬ್ಬಾರ್ ವಿರಚಿತ

ಭಾನುಮತಿ ಕಲ್ಯಾಣ (ಯಕ್ಷಗಾನ) ಕಾವ್ಯಾಲಯ ಪ್ರಕಾಶಕರು, ಮೈಸೂರು ೧೯೫೮

ರಸೋ ವೈ ಸಃ (ಹಿರಿಯಣ್ಣ ಹೆಬ್ಬಾರರ ಯಕ್ಷಗಾನ ಮತ್ತು ಭಕ್ತಿ ಸ್ತೋತ್ರಗಳು) 'ಸಾಹಿತ್ಯ ಮಂದಿರ' ಶಿರಸಿ ೧೯೮೭



ಗೆಳೆಯ ಶ್ರೀಧರರೂ ನಾನೂ ಸಿದ್ಧಮಠಕ್ಕೆ ಸೇರಿ ಹಲವು ವರ್ಷಗಳಾದವು. ಮುಮುಕ್ಷುಗಳು, ಸಾಹಿತಿಗಳು, ಕಳ್ಳರು – ಎಲ್ಲರಿಗೂ ಗುರುಗಳು ಬೇಕೇ ಬೇಕು. ಅವರು ಮಠವನ್ನು ಸೇರಿಕೊಳ್ಳುವುದು ತೀರ ಸಹಜ. ನಮ್ಮಿಬ್ಬರಿಗೂ ಒಮ್ಮೆ ಆಪತ್ಕಾಲವೊದಗಲಾಗಿ (ರೇಶನ್ ಕೋಟಾ ಮೂರೇ ದಿನಗಳಲ್ಲಿ ತೀರಿಹೋಗಿ) ಒಬ್ಬ ಗುರುವಿನ ಗುಲಾಮರಾಗಬೇಕೆಂಬ ಜ್ಞಾನೋದಯವಾಯಿತು. ಅರವಿಂದ ತತ್ವವನ್ನು ಅಪ್ಪಿಕೊಂಡು ಪಾಂಡಿಚೇರಿಗೆ ಹೋಗಬೇಕೋ, ಗಾಂಧೀಪಂಥ ಹಿಡಿದು ಸೂತ್ರ ಯಜ್ಞ ಮಾಡಬೇಕೋ ಎಂಬಿವೇ ಮೊದಲಾದ ಹಲವಾರು ಪ್ರಶ್ನೆಗಳು ಮೂಡಿ, ಕೊನೆಗೆ ಮರುಳುಸಿದ್ಧಯ್ಯನವರ ಮಠಕ್ಕೆ ಸೇರಿಕೊಂಡೆವು.

ಅಲ್ಲಿ ನಾವು ನೂರಾರು ಜ್ಞಾನ (ಮತ್ತು ಭೋಜನ) ಸತ್ರಗಳನ್ನೇರ್ಪಡಿಸಿದ್ದೆವು – ಪೂಜ್ಯ ಸ್ವಾಮೀಜಿಯವರ ಪಾದಕಮಲದ ಕೆಳಗೆ. ಆಗ ಮಹಾಸ್ವಾಮಿಗಳು ಅಪ್ಪಣೆ ಕೊಟ್ಟ ಅನುಭವಾಮೃತ ಬಿಂದುಗಳಲ್ಲಿ ಮತ್ತು ಅವರೆದುರಾದ ಚರ್ಚೆಗಳಲ್ಲಿ ಇಷ್ಟನ್ನಾಯ್ದು ಗೆಳೆಯ ಶ್ರೀಧರರು ಇಲ್ಲಿ ಕೊಟ್ಟಿದ್ದಾರೆ. ಸ್ವಾಮೀಜಿಯವರು ಮುಟ್ಟದ ವಿಷಯ (ಗಿಡ?)ವಿಲ್ಲ. ಅಜ್ಞೇಯದಿಂದ ಅಜೀರ್ಣದವರೆಗೆ ಅವರ ದಿವ್ಯದೃಷ್ಟಿಯ ವಾಗ್ಝರಿಯ ತರಂಗಗಳು ಹಾಯುತ್ತಿದ್ದವು. ಗೆಳೆಯ ಶ್ರೀಧರರು ಸಂಗ್ರಹಿಸಿದ ಈ ಜ್ಞಾನನಿಧಿಗೆ ನಾನು ಮುನ್ನುಡಿಯ ಮುದ್ರೆ ಒತ್ತಬೇಕೆಂದು ಅವರ ಬಯಕೆ. ಎತ್ತಿನ ಎರಡು ಕೋಡುಗಳಂತೆ, ಕತ್ತೆಯ ಎರಡು ಕಿವಿಗಳಂತೆ ಒಂದೇ ಗುರುವಿನ ಶಿಷ್ಯದ್ವಯದಲ್ಲಿ ಒಬ್ಬನಾದುದರಿಂದ, ಇದು ನನ್ನ ಹಕ್ಕು ಎಂದರೂ ಸರಿಯೆ – ಒಪ್ಪಿದೆ, ಬರೆದಿದ್ದೇನೆ.

ಇಲ್ಲಿ ಏನಿದೆ ಏನಿಲ್ಲ ಎಂಬುದನ್ನು ಓದಿಯೇ ತಿಳಿಯಬೇಕು. ಗುರುವಿನ ಘನತೆಯನ್ನು ಘೋರವಾಗಿ ಹೊಗಳುವುದಾಗಲಿ, ದೋಷವನ್ನು ಗುರುತಿಸುವುದಾಗಲಿ ಸಭ್ಯ ಶಿಷ್ಯರಿಗೆ ಸಲ್ಲದು. ಒಂದು ಮಾತನ್ನು ಮಾತ್ರ ಹೇಳದೆ ಗತಿಯಿಲ್ಲ. ಇದೊಂದು ಸರ್ವಾರ್ಥಸಿದ್ಧಿ ಕವಚದಂತಿದೆ. ಸಕಲ ರೋಗಗಳಿಗೆ ಇಲ್ಲಿ ಪರಿಹಾರ ಹೇಳಿದೆ. ರೋಗವನ್ನೇ ಆರೋಗ್ಯವೆಂದು ನಂಬಿ ಕಣ್ಣು ಮುಚ್ಚಿ ಕುಳಿತರೆ ಕಿವಿಯನ್ನೇ ಉದ್ದವಾಗಿಸಿ ಬೀಜಮಂತ್ರ ಊದುವ ಶಕ್ತಿ ಇದಕ್ಕಿದೆ. ಎಚ್ಚರಿಕೆ – ಎಚ್ಚರಿಕೆ!

ವಿ.ಜಿ. ಭಟ್ ಎಂ.ಎ.

ತೇಜು ಪಬ್ಲಿಕೇಷನ್ಸ್